ಸಂಪುಟ: 06 ಸಂಚಿಕೆ: 218 ಪುಟಗಳು: 08 ಶನಿವಾರ 24 ಅಕ್ಟೋಬರ್ 2026
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಆತ್ಮವಿಶ್ವಾಸದಿಂದಿದ್ದರೆ ಆಯಾಸವಿಲ್ಲದೇ ಕೊನೆಯವರೆಗೂ ಪಯಣಿಸಬಹುದು. ವಿಶ್ವಾಸದ ಕೊರತೆಯಿಂದ ಪ್ರಯಾಣ ಅರ್ಧಕ್ಕೆ ನಿಲ್ಲಬಹುದು.
ವಿಶ್ವಾಸವೇ ಇಂಧನವಾಗಲಿ!

ರಾಜ್ಯದಲ್ಲಿ ಭೂಕಂಪನ; ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲು

• ಉದಯವಾಹಿನಿ, ಬೆಂಗಳೂರು

ದೊಡ್ಡಬಳ್ಳಾಪುರ ತಾಲ್ಲೂಕಿನ ತಿಮ್ಮೋಜನಹಳ್ಳಿ ಗ್ರಾಮದಲ್ಲಿ ಭೂಕಂಪನ ಅನುಭವವಾಗಿದ್ದು, ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲಾಗಿದೆ. ಬೆಳಗ್ಗೆ 9 ಗಂಟೆಗೆ ಭೂಕಂಪನದ ಅನುಭವವಾಗಿದ್ದು, ಗ್ರಾಮದ ಸುತ್ತಮುತ್ತ ಭೂಮಿ ಕಂಪಿಸಿದೆ.

ಘಟನೆಯಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ. ಮುನ್ನೆಚ್ಚರಿಕೆವಹಿಸುವಂತೆ ಜಿಲ್ಲಾಡಳಿತಕ್ಕೆ ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆ ಸೂಚನೆ ನೀಡಿದೆ. ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಭೂಕಂಪನವಾಗಿದ್ದು, ರಿಕ್ಟರ್ ಮಾಪಕದಲ್ಲಿ 3.0 ತೀವ್ರತೆ ದಾಖಲಾಗಿದೆ. ತೂಬಗೆರೆ ಸುತ್ತಮುತ್ತ ಭೂಮಿ ಕಂಪನವಾಗಿದೆ. ಇಂದು ಬೆಳಗ್ಗೆ 9 ಗಂಟೆ 1 ನಿಮಿಷ 59 ಸೆಕೆಂಡ್‌ಗೆ ಭೂಕಂಪನ ದಾಖಲಾಗಿದೆ. ಈ ಬಗ್ಗೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ ಅಧಿಕೃತ ಮಾಹಿತಿ ಸಿಕ್ಕಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಮ್ಮೋಜನಹಳ್ಳಿ ಬಳಿ ಭೂಕಂಪನದ ಕೇಂದ್ರ ಬಿಂದುವಾಗಿದ್ದು, ತಿಮ್ಮೋಜನಹಳ್ಳಿ ಗ್ರಾಮದಿಂದ 500 ಮೀಟರ್ ಉತ್ತರಕ್ಕೆ ಭೂಕಂಪನದ ಕೇಂದ್ರ ಬಿಂದು ಪತ್ತೆಯಾಗಿದೆ.

ಭೂಮಿಯ 10 ಕಿಲೋಮೀಟರ್ ಆಳದಲ್ಲಿ ಭೂಕಂಪನ ಸಂಭವಿಸಿದೆ. ನರಗಾನಹಳ್ಳಿ, ತೂಬಗೆರೆ ಹಾಗೂ ಕರ್ನಾಲ ಗ್ರಾಮಗಳ ಸಮೀಪ ಭೂಕಂಪನದ ಕೇಂದ್ರ ಬಿಂದು. ಭೂಕಂಪನದ ಕೇಂದ್ರ ಬಿಂದುವಿನಿಂದ 20 ರಿಂದ 30 ಕಿಲೋಮೀಟರ್ ವ್ಯಾಪ್ತಿಯಲ್ಲಿ ಕಂಪನದ ಅನುಭವವಾಗಿದೆ.

ಭೂಕಂಪನದ ತೀವ್ರತೆ ಕಡಿಮೆ ಯಾವುದೇ ಹಾನಿ ಇಲ್ಲ ಅಂತ ಸ್ಪಷ್ಟನೆ ನೀಡಿದೆ. ಭೂಕಂಪನ ಸಂಭವಿಸಿದ ಪ್ರದೇಶವು ಭೂಕಂಪ ವಲಯ-2ರ ವ್ಯಾಪ್ತಿಯಲ್ಲಿದೆ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಭೂಕಂಪನದ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿದೆ.

ಮತಕಳ್ಳತನ ವಿಚಾರವಾಗಿ ನವೆಂಬರ್ 1 ರಿಂದ ಇಂಡಿಯಾ ಒಕ್ಕೂಟವು ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಕಾಂಗ್ರೆಸ್ ಪಕ್ಷದಿಂದ ಎಲ್ಲಾ ನಾಯಕರು ಹೋಗುತ್ತಿದ್ದೇವೆ. ದೇಶದ ವಿವಿಧ ಭಾಗಗಳಿಂದ 5 ಲಕ್ಷ ಜನ ಸೇರಲಿದ್ದಾರೆ. ಜನ ಸಾಮಾನ್ಯರ ಅಭಿಪ್ರಾಯದಂತೆ ನಮ್ಮ ಎಐಸಿಸಿ ನಾಯಕರು ಈ ತೀರ್ಮಾನ ಮಾಡುತ್ತಾರೆ. ಈ ರೀತಿ ಪ್ರತಿಭಟನೆ ನಡೆಸುವ ವಿಚಾರವಾಗಿ ನಮ್ಮ ಪಕ್ಷದ ನಾಯಕರು ನಮಗೆ ಟಾಸ್ಕ್ ನೀಡುತ್ತಾರೆ. ದೆಹಲಿಯ ಪ್ರತಿಭಟನೆಯಲ್ಲಿ ಕಾಂಗ್ರೆಸ್ ನಾಯಕರು ತೆರಳಲಿದ್ದು, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಿನ್ನೆಲೆಯಲ್ಲಿ ಸಚಿವರುಗಳು ರಾಜ್ಯದಲ್ಲಿರುತ್ತಾರೆ ಎಂದರು.30 ವರ್ಷ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂಬ ಅಮಿತ್ ಶಾ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸುತ್ತಾ, ಇನ್ನು ಮೂರು ತಿಂಗಳಲ್ಲಿ ಅಮಿತ್ ಶಾ ಅವರು ದೆಹಲಿಯಿಂದ ಗಡಿಪಾರು ಆಗುತ್ತಾರೆ ಅಂತ ಅವರಿಗೆ ಗೊತ್ತಿಲ್ಲ ಎಂದು ತಿಳಿಸಿದರು. ಚುನಾವಣೆ ಬಳಿಕ ಯಾವ ಸಮಯದಲ್ಲೂ ಸಹ ನಿಗಮ ಮಂಡಳಿ ನೇಮಕ ಪಟ್ಟಿ ಪ್ರಕಟವಾಗಬಹುದು. ಈಗ ನಿರ್ದೇಶಕರು, ಸದಸ್ಯರ ನೇಮಕವಾಗುತ್ತದೆ. ಮುಂದಿನ ದಿನಗಳಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡುವುದು ಅಂತ ನೋಡುತ್ತೇವೆ. ಸದ್ಯಕ್ಕೆ ಎಲ್ಲಾ ಫೈನಲ್ ಆಗಿದೆ, ಈಗ ಚುನಾವಣೆ ನೀತಿ ಸಂಹಿತೆ ಇರುವುದರಿಂದ ಪಟ್ಟಿ ಬಿಡುಗಡೆ ಆಗಿಲ್ಲ, ಕೆಲವೇ ದಿನಗಳಲ್ಲಿ ಪ್ರಕಟವಾಗಲಿದೆ ಎಂದರು.

ಗೃಹಜ್ಯೋತಿ ಸಮೀಕ್ಷೆಗೆ ಅ.31 ಡೆಡ್‌ಲೈನ್ ಗಡುವು ವಿಸ್ತರಣೆ ಇಲ್ಲ

• ಉದಯವಾಹಿನಿ, ಬೆಂಗಳೂರು

ಬೆಸ್ಕಾಂ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಗೃಹ ಜ್ಯೋತಿ ಫಲಾನುಭವಿಗಳ ಮನೆ-ಮನೆ ಸಮೀಕ್ಷೆಗೆ ನೀಡಿರುವ ಗಡುವು ಅಕ್ಟೋಬರ್ 31ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನಲೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳದ ಗ್ರಾಹಕರು ಅಗತ್ಯ ದಾಖಲಾತಿಗಳನ್ನ ಬೆಸ್ಕಾಂ ಉಪ ವಿಭಾಗ ಕಚೇರಿಗೆ ಖುದ್ದಾಗಿ ತೆರಳಿ ಸಲ್ಲಿಸಲು ಬೆಸ್ಕಾಂ ವಿನಂತಿಸಿದೆ. ಕಳೆದ ಮೂರುವರೆ ತಿಂಗಳಿನಿಂದ ನಡೆಯುತ್ತಿರುವ ಸಮೀಕ್ಷೆಯಲ್ಲಿ ಮನೆಗೆ ಬೀಗ ಹಾಕಿರುವ, ಮನೆ ಖಾಲಿ ಇರುವ ಹಾಗೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಗ್ರಾಹಕರಿಗೆ ಬೆಸ್ಕಾಂ ಕಚೇರಿಗೆ ತೆರಳಿ ದಾಖಲಾತಿ ಸಲ್ಲಿಸಲು ರಾಜ್ಯ ಸರ್ಕಾರ ಅವಕಾಶ ಕಲ್ಪಿಸಿದ್ದು, ಗಡುವಿನೊಳಗೆ ದಾಖಲಾತಿ ಸಲ್ಲಿಸಲು ಬೆಸ್ಕಾಂ ಮನವಿಮಾಡಿದ್ದು, ದಾಖಲಾತಿ ಸಲ್ಲಿಸಲು ಇದು ಕೊನೆಯ ಅವಕಾಶ ಎಂದು ಸ್ಪಷ್ಟಪಡಿಸಿದೆ.ಬೆಸ್ಕಾಂನ 8 ಜಿಲ್ಲೆಗಳ ವ್ಯಾಪ್ತಿಯಲ್ಲಿ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಹಾಗೂ ಅಮೃತ ಜ್ಯೋತಿ ಯೋಜನೆಯ ಗ್ರಾಹಕರು ಸೇರಿದಂತೆ ಒಟ್ಟು 74,29,773 ಗ್ರಾಹಕರು ಗೃಹಜ್ಯೋತಿ ಫಲಾನುಭವಿಗಳಿದ್ದು, ಈ ಪೈಕಿ 73,17,687 ಗ್ರಾಹಕರ ಸಮೀಕ್ಷೆ (ಶೇ. 98.49) ಅಕ್ಟೋಬರ್ 22ಕ್ಕೆ ಪೂರ್ಣಗೊಂಡಿದೆ. ಸಮೀಕ್ಷೆ ಸಂದರ್ಭದಲ್ಲಿ ಬೀಗ ಹಾಕಿರುವ, ಖಾಲಿ ಇರುವ ಮನೆಗಳಿಗೆ ಬೆಸ್ಕಾಂ ಸಿಬ್ಬಂದಿ ಮೂರು ಬಾರಿ ಭೇಟಿ ನೀಡಿದ್ದು, ಈ ವರ್ಗಗಳ ಗ್ರಾಹಕರ ಮೊಬೈಲ್ ಗೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಸಂದೇಶವನ್ನು ಕೂಡ ಕಳುಹಿಸಲಾಗಿತ್ತು.

ಪವಿತ್ರಾ ಗೌಡಗೆ ಮತ್ತೆ ನಿರಾಸೆ, ಅರ್ಜಿ ವಜಾ ಮಾಡಿದ ಕೋರ್ಟ್

• ಉದಯವಾಹಿನಿ, ಬೆಂಗಳೂರು

ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಮೊದಲ ಆರೋಪಿ ಪವಿತ್ರಾ ಗೌಡಗೆ ನ್ಯಾಯಾಲಯದಲ್ಲಿ ಮತ್ತೆ ಹಿನ್ನಡೆ ಉಂಟಾಗಿದೆ. ಪವಿತ್ರಾ ಗೌಡ ಅವರು ತಮ್ಮ ಬ್ಯಾಕರ್ ಬದಲಾವಣೆ ಕೋರಿ ಅರ್ಜಿ ಹಾಕಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ 59ನೇ ಸಿಸಿಎಚ್ ನ್ಯಾಯಾಲಯ ಆದೇಶವನ್ನು ಇಂದಿಗೆ (ಅಕ್ಟೋಬರ್ 23)ಕ್ಕೆ ಕಾಯ್ದಿರಿಸಿತ್ತು. ಇಂದು ಆದೇಶ ಹೊರಬಿದ್ದಿದ್ದು ನ್ಯಾಯಾಧೀಶರು ಅರ್ಜಿಯನ್ನು ವಜಾ ಮಾಡಿದ್ದಾರೆ. ತಮ್ಮ ಬ್ಯಾರಕ್‌ನಲ್ಲಿ ಇರುವ ನೈಜೀರಿಯನ್ ಮೂಲದ ಆರೋಪಿಗಳಿಂದ ಸಮಸ್ಯೆ ಆಗುತ್ತಿದೆ. ತಮ್ಮ ಉಡುಪುಗಳನ್ನು ಬೇರೆ ಆರೋಪಿಗಳು ಬಳಸುತ್ತಿದ್ದಾರೆ. ಪದೇ ಪದೇ ತಮಗೆ ತೊಂದರೆ ನೀಡುತ್ತಿದ್ದಾರೆ.

ತಮ್ಮಗೆ ಬ್ಯಾರಕ್‌ನಲ್ಲಿ ಇರುವುದಕ್ಕೆ ಆಗುತ್ತಿಲ್ಲ. ಇಲ್ಲಿ ಸಾಕಷ್ಟು ಸಮಸ್ಯೆಗಳು ಇವೆ. ನ್ಯಾಯಾಧೀಶರ ಸಮಿತಿಯೇ ಬಂದು ಇಲ್ಲಿನ ವ್ಯವಸ್ಥೆ ನೋಡುವಂತೆ ಪವಿತ್ರಾ ಹೇಳಿದ್ದರು. ಜೊತೆಗೆ ತಮ್ಮ ಬ್ಯಾರಕ್ ಬದಲಾವಣೆಗೆ ಅನುಮತಿ ನೀಡಬೇಕು ಎಂದು ಅವರು ಕೋರಿದ್ದರು. ಜೊತೆಗೆ ಪ್ರತ್ಯೇಕ ಆರೋಗ್ಯ ತಪಾಸಣೆಗೂ ಅನುಮತಿ ಕೋರಿದ್ದರು.

ಜಂಬೂಸವಾರಿ ವೇಳೆ ಸಿಎಂ ಪತ್ನಿಯಿಂದ ಪುಷ್ಪಾರ್ಚನೆ ವಿವಾದ

• ಉದಯವಾಹಿನಿ, ಬೆಂಗಳೂರು

ಮೈಸೂರು ದಸರಾ ಜಂಬೂಸವಾರಿಗೆ ಚಾಲನೆ ವೇಳೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪತ್ನಿ ದೇವಿಗೆ ಪುಷ್ಪಾರ್ಚನೆ ಮಾಡಿರುವ ಬಗ್ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಟೀಕೆಗೆ ಕಾಂಗ್ರೆಸ್ ಕೌಂಟರ್ ಕೊಟ್ಟಿದೆ. ಹೆಚ್‌ಡಿಕೆ ಸಿಎಂ ಆಗಿದ್ದ ಸಂದರ್ಭ ಜಂಬೂಸವಾರಿಗೆ ಚಾಲನೆ ನೀಡುವ ವೇಳೆ ಅವರ ಪತ್ನಿ ಅನಿತಾ ಅವರು ಕೂಡ ಭಾಗಿಯಾಗಿದ್ದ ಫೋಟೋ ಸಮೇತ ಕಾಂಗ್ರೆಸ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಅಂಬಾರಿಗೆ ಪುಷ್ಪಾರ್ಚನೆ ವೇಳೆ ಅನಿತಾ ಕುಮಾರಸ್ವಾಮಿ ಇರಲಿಲ್ಲವೇ? ಎಂದು ಪ್ರಶ್ನಿಸಿದೆ. ಡಿ ಕೆ ಶಿವಕುಮಾರ್ ಅವರು ಮೊದಲ ಬಾರಿಗೆ ಪತ್ನಿಯನ್ನು ಅಂಬಾರಿಗೆ ಪುಷ್ಪ ನಮನ ಸಲ್ಲಿಸಿದ್ದಾರೆ ಎಂದು ಹೇಳುತ್ತಿದ್ದೀರಲ್ಲಾ 20 ವರ್ಷಗಳ ಹಿಂದೆ ನೀವೇ ಬರೆದ ಅಧ್ಯಾಯ ಮರೆತು ಹೋಗಿದ್ದೀರಾ? ಎಂದು ಪ್ರಶ್ನಿಸಿದೆ. ಸಿಎಂ ಪತ್ನಿಯಿಂದ ಪುಷ್ಪಾರ್ಚನೆ ವಿಚಾರ ಸಂಬಂಧ ಮೈಸೂರಿನಲ್ಲಿ ಪ್ರತಿಕ್ರಿಯಿಸಿರುವ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಸಿಎಂ ಪತ್ನಿ ಪುಷ್ಪಾರ್ಚನೆ ಮಾಡಿರುವುದರಲ್ಲಿ ತಪ್ಪೇನೂ ಇಲ್ಲ ಎಂದರು.

ಮಾಜಿ ಸಚಿವ ಮುನಿರತ್ನ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಮಾಜಿ ಸಂಸದ ಡಿಕೆ ಸುರೇಶ್ ವಿರುದ್ಧ ಬಿಜೆಪಿ ಶಾಸಕ, ಮಾಜಿ ಸಚಿವ ಮುನಿರತ್ನ ವಾಗ್ದಾಳಿ ನಡೆಸಿದ್ದಾರೆ. ಡಿಕೆ ಸುರೇಶ್ ಸೋತ ನಂತರ ನನ್ನ ಮೇಲೆ ನಿತ್ಯ ಈ ರೀತಿ ದಾಳಿಗಳು ಆಗುತ್ತಿವೆ. ಸೋತಿರುವ ಅಭ್ಯರ್ಥಿ ಮೂಲಕ ದೌರ್ಜನ್ಯ ಮಾಡುವ ಕೆಲಸ ನಡೀತಿದೆ ಅಂತ ಕುಸುಮಾ ಹನುಮಂತರಾಯಪ್ಪ ಹೆಸರು ಹೇಳದೇ ಮುನಿರತ್ನ ಆರೋಪಿಸಿದ್ರು. ಹೊಟ್ಟೆ ಹಸಿದುಕೊಂಡು ಮನೆಗೆ ಹೋದ್ರೆ ನನಗೆ ಊಟ ಹಾಕಲು ಹೆಂಡತಿ ಇದ್ದಾಳೆ. ಆದ್ರೆ ಹೆಂಡತಿ ಮಕ್ಕಳ ಬೆಲೆ ಗೊತ್ತಿದ್ರೆ ನೀವು ಈ ರೀತಿ ನಡೆದುಕೊಳ್ತಾ ಇರಲಿಲ್ಲ ಅಂತ ಡಿಕೆ ಸುರೇಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಟ್ಟೆ ಹರಿದು ಹಾಕಿ, ಧಿಕ್ಕಾರ ಕೂಗಿದ್ರು ಇವತ್ತು ಶಿಕ್ಷಕರ ಕ್ಷೇತ್ರದ ಚುನಾವಣೆ ನಡೀತ್ತಿದೆ, ಎನ್‌ಡಿಎ ಅಭ್ಯರ್ಥಿ ಎಪಿ ರಂಗನಾಥ್ ಸ್ಪರ್ಧೆ ಮಾಡಿದ್ದಾರೆ. ಆದ್ರೆ ಆರ್‌ಆರ್ ನಗರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮತಗಟ್ಟೆ ಕೇಂದ್ರದಲ್ಲಿ ಕೆಲಸ ಮಾಡ್ತಿದ್ದಾರೆ. ಮೊದಲೇ ಸಂಚು ಮಾಡಿದ್ದಾರೆ, ಶಾಸಕರ ಬಂದು ಕೂಡಲೇ ಹಲ್ಲೇ ಮಾಡಿ, ಬಟ್ಟೆ ಹರಿದು, ಧಿಕ್ಕಾರ ಕೂಗಲು ಹೇಳಿದ್ದಾರೆ.

ಸ್ಟಿಂಗ್ ಕಂಪನ
ಭಾರೀ ಸಂಚಲನ



ಹೈಕಮಾಂಡ್ ಮಧ್ಯಪ್ರವೇಶ ಮಾಡಲಿ

ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡಬೇಕು ಅಂತ ಜೆಡಿಎಸ್ ಎಂಎಲ್‌ಸಿ ಭೋಜೇಗೌಡ ಆಗ್ರಹಿಸಿದ್ದಾರೆ.

ವಿಧಾನಸೌಧದಲ್ಲಿ ಮಾತಾಡಿದ ಅವರು, ಸ್ಟಿಂಗ್ ಆಪರೇಷನ್‌ನಿಂದ ಕರ್ನಾಟಕದ ಮಾನ ಮರ್ಯಾದೆ ಹರಾಜಾಗಿದೆ. ಸರ್ಕಾರ ಇದರ ಹೊಣೆ ಹೊರಬೇಕು.

ಕಾಂಗ್ರೆಸ್ ಹೈಕಮಾಂಡ್ ಕಣ್ಣು ಮುಚ್ಚಿ ಕುಳಿತ್ತಿದ್ದಿಯಾ? ಸಿದ್ದರಾಮಯ್ಯ ಅವರನ್ನು ಹೇಗೆ ಅಂತ ಹೈಕಮಾಂಡ್‌ಗೆ ಗೊತ್ತಿಲ್ಲವಾ? ಕಾಂಗ್ರೆಸ್ ಹೈಕಮಾಂಡ್ ಆಕ್ಷನ್ ತಗೋಬೇಕು. ಹೈಕಮಾಂಡ್ ತಾಕತ್ತು ಇದ್ದರೆ ಕ್ರಮ ಮಾಡಬೇಕು. ನಮ್ಮ ಸರ್ಕಾರ ಇಲ್ಲದೇ ಕಾಂಗ್ರೆಸ್ ಹೈಕಮಾಂಡ್ ನಡೆಯಲ್ಲ. ಅದಕ್ಕೆ ಕ್ರಮ ತೆಗೆದುಕೊಳ್ಳಲ್ಲ. ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ಹೈಕಮಾಂಡ್ ಮಧ್ಯ ಪ್ರವೇಶ ಮಾಡಬೇಕು ಎಂದು ಆಕ್ರೋಶ ಹೊರಹಾಕಿದ್ದಾರೆ.

ಸಿದ್ದರಾಮಯ್ಯ ಸಾಧಾರಣ ವ್ಯಕ್ತಿ ಅಲ್ಲ. ಕಾಂಗ್ರೆಸ್ ಅನ್ನು ಅಧಿಕಾರ ತಂದವರು. ಇಂತಹವರ ರಕ್ಷಣೆಗೆ ಕಾಂಗ್ರೆಸ್ ಬರಲಿಲ್ಲ. ಯಾರಿಗೇ ಆದ್ರು ಇಂತಹ ಸನ್ನಿವೇಶ ಬರಬಾರದು. ಮಾನ ಹರಾಜು ಹಾಕೋದು ಸರಿಯಲ್ಲ. ಕುಮಾರಸ್ವಾಮಿ ಅವರ ಬಳಿ ಮಾಹಿತಿ ಇದೆ ಅದಕ್ಕೆ ಡಿಕೆ ಶಿವಕುಮಾರ್ ಮೇಲೆ ಆರೋಪ ಮಾಡಿದ್ದಾರೆ. ಡಿಕೆ ಶಿವಕುಮಾರ್ ಇದನ್ನು ಮಾಡಿಲ್ಲ ಅಂದರೆ ಕೂಡಲೇ ಮಾಡಿರುವವರ ಮೇಲೆ ಆಕ್ಷನ್ ಮಾಡಲಿ ಎಂದು ಕಿಡಿಕಾರಿದರು.

- ಸ್ಟಿಂಗ್ ಅಪರೇಷನ್ ಕೋಲಾಹಲ
- ಹೈಕಮಾಂಡ್ ಗರಂ
- ವಿಡಿಯೋದಲ್ಲಿ ಕಾಣಿಸಿಕೊಂಡ ಕೈ ನಾಯಕಿಗೆ ನೋಟಿಸ್
- ಕಾಂಗ್ರೆಸ್ ಮಹಿಳಾ ನಾಯಕಿಗೆ ನೋಟಿಸ್ ನೋಟಿಸ್ ಬಗ್ಗೆ ಕೆಪಿಸಿಸಿ ಅಧ್ಯಕ್ಷರ ರಿಯಾಕ್ಷನ್
- ಡಿಕೆಶಿಯಿಂದ ಮಾಹಿತಿ ಪಡೆದುಕೊಂಡ ಹೈಕಮಾಂಡ್,
- ಪ್ರಕರಣ ನಿಭಾಯಿಸಿದ ರೀತಿಗೆ ಅಸಮಾಧಾನ

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ಮಾಡಿ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನ ಬೆದರಿಸೋ ಷಡ್ಯಂತ್ರ ನಡೆದಿದೆ ಎನ್ನುವ ಆರೋಪ ರಾಜ್ಯ ಕಾಂಗ್ರೆಸ್‌ನನ್ನೇ ತಲ್ಲಣಗೊಳಿಸಿದೆ. ಸ್ಟಿಂಗ್ ವಿಚಾರ ರಾಜ್ಯ ಕಾಂಗ್ರೆಸ್‌ನಲ್ಲೇ ಕಂಪನ ಮೂಡಿಸಿದ್ದು, ಹೈಕಮಾಂಡ್ ಕೂಡ ಈ ವಿವಾದವನ್ನ ಗಂಭೀರವಾಗಿ ಪರಿಗಣಿಸಿದೆ. ಕುಮಾರಸ್ವಾಮಿ ಆರೋಪ ಮಾಡಿದ ಕಾಂಗ್ರೆಸ್ ನಾಯಕಿಗೆ ಕೆಪಿಸಿಸಿ ನೋಟಿಸ್ ನೀಡಿದೆ. ಸಿದ್ದರಾಮಯ್ಯ ಅವರನ್ನ ಬ್ಲ್ಯಾಕ್ ಮೇಲ್ ಮಾಡಲು ಸ್ಟಿಂಗ್ ಆಪರೇಷನ್ ಮಾಡಿದ್ದು, ಕಾಂಗ್ರೆಸ್‌ನವರ ಕೈವಾಡವಿದೆ ಎಂದು ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದ್ದು, ಇದರ ಬೆನ್ನಲ್ಲೇ ಕಾಂಗ್ರೆಸ್ ಮಹಿಳಾ ನಾಯಕಿ ಕೃಪಾ ಆಳ್ವಾಗೆ ನೋಟಿಸ್ ನೀಡಲಾಗಿದೆ. ವಿಡಿಯೋದಲ್ಲಿ ಕೈ ನಾಯಕಿ ಕೃಪಾ ಆಳ್ವಾ ಇದ್ದಾರೆ ಎಂದು ಹೆಚ್‌ಡಿ ಕುಮಾರಸ್ವಾಮಿ ಕೂಡ ಆರೋಪ ಮಾಡಿದ್ದಾರೆ. ಸ್ಟಿಂಗ್ ಆಪರೇಷನ್ ಬಗ್ಗೆ ಯತೀಂದ್ರ ಸಿದ್ದರಾಮಯ್ಯ ಆರೋಪದ ಬಗ್ಗೆ ಮಾತಾಡಿದ ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ಅವರು, ನಾನು ಈಗಾಗಲೇ ಹೇಳಿದ್ದೇನೆ, ಸೇಡಿನ ರಾಜಕೀಯವಾಗಿ ಸೇಡು ತೀರಿಸಿಕೊಳ್ಳೋಕೆ ಕೆಲವರು ಮಾಡುವ ಹೀನ ಕೃತ್ಯ ಇದು. ಅದು ಆಗಬಾರದು ಅಂತ ನಾನು ನಿರಂತರವಾಗಿ ಹೇಳಿಕೊಂಡೆ ಬಂದಿದ್ದೇನೆ. ಈ ತರ ಸ್ಟಿಂಗ್ ಆಪರೇಷನ್‌ನಲ್ಲಿ ಯಾರಾದರೂ ಕಾಂಗ್ರೆಸ್ ಪಕ್ಷದವರು ಇದ್ದರೆ. ಅದರಲ್ಲಿ ಭಾಗಿಯಾಗಿದ್ದರು ಅದು ವಿಡಿಯೋ ಎಲ್ಲಾ ಹೊರಗಡೆ ಬರುತ್ತೆ. ಈಗಾಗಲೇ ಅವರಿಗೆ ಶೋಕಾಸ್ ನೋಟೀಸ್ ಕೊಡಿ ಅಂತ ಹೇಳಿದ್ದು, ಕ್ರಮ ತೆಗೆದುಕೊಳ್ಳೋದಾಗಿಯೂ ತಿಳಿಸಿದ್ದಾರೆ. ವಿಡಿಯೋದಲ್ಲಿ ಯಾರಿದ್ದಾರೆ? ಅವರ ಹಿಂದೆ ಯಾರಿದ್ದಾರೆ ಅಂತ ತನಿಖೆ ಮಾಡೋಕೆ ಸಿಐಡಿ, ಸಿಬಿಐ ಎಲ್ಲಾ ಇದೆ. ಆ ರೀತಿ ನೋಡೋಕೆ ಹೋದ್ರೆ ತನಿಖೆ ಬಹಳ ಹಿಂದಿಂದ ಆಗಬೇಕಾಗುತ್ತೆ ಎಂದು ಬಿಕೆ ಹರಿಪ್ರಸಾದ್ ಅವರು ಬಿಜೆಪಿ ವಿರುದ್ಧವೂ ಕಿಡಿಕಾರಿದ್ರು.

ರಾಷ್ಟ್ರ ಮಟ್ಟದಲ್ಲಿ ಮುಜುಗರ: ಸ್ಟಿಂಗ್ ಪ್ರಕರಣವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದೆ. ಅದರಲ್ಲೂ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಸ್ಟಿಂಗ್ ಆಪರೇಷನ್ ಹಿಂದೆ ಸಿಎಂ ಡಿಕೆ ಶಿವಕುಮಾರ್ ಇದ್ದಾರೆ ಎಂಬ ಆರೋಪವನ್ನು ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕರು ನಿರಾಕರಿಸಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ಸ್ಟಿಂಗ್ ಆಪರೇಷನ್ ಹಿಂದೆ ಜೆಡಿಎಸ್ ಇದೆ ಎಂದು ಬಿಂಬಿಸುವ ಪ್ರಯತ್ನಗಳು ನಡೆಯುತ್ತಿವೆ. ಈ ಎಲ್ಲಾ ಬೆಳವಣಿಗೆಗಳು ಸಹಜವಾಗಿ ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಉಂಟು ಮಾಡಿದೆ. ರಾಷ್ಟ್ರ ಮಟ್ಟದಲ್ಲಿ ಚರ್ಚೆ ಆಗಿರುವುದರಿಂದ ಹೈಕಮಾಂಡ್ ಗಮನ ಸೆಳೆದಿದೆ. ಹೀಗಾಗಿ ಗುರುವಾರ ಸಿಎಂ ಡಿಕೆ ಶಿವಕುಮಾರ್ ಅವರು ದೆಹಲಿಯಲ್ಲಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದರು. ಈ ಸಂದರ್ಭದಲ್ಲಿ ಪ್ರಕರಣದ ಬಗ್ಗೆ ಹೈಕಮಾಂಡ್ ನಾಯಕರು ಸುದೀರ್ಘವಾಗಿ ಮಾಹಿತಿಯನ್ನು ಪಡೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಹೈ ಅಸಮಾಧಾನ

ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ನಿಭಾಯಿಸಿದ ರೀತಿಯ ಬಗ್ಗೆ ಹೈಕಮಾಂಡ್ ಅಸಮಾಧಾನ ಹೊರಹಾಕಿದೆ ಎಂಬ ಮಾಹಿತಿ ಇದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಅವರು ಈ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ ಎಂಬ ಮಾಹಿತಿಯೂ ಇದೆ.

ಸ್ಟಿಂಗ್ ಆಪರೇಷನ್ ವಿಚಾರದಿಂದಾಗಿ ಪಕ್ಷಕ್ಕೆ ರಾಷ್ಟ್ರ ಮಟ್ಟದಲ್ಲಿ ಮುಜುಗರ ಉಂಟು ಮಾಡಿದೆ. ಹೀಗಾಗಿ ಈ ಪ್ರಕರಣವನ್ನು ಸಮರ್ಥವಾಗಿ ನಿಭಾಯಿಸಬೇಕಾಗಿತ್ತು ಎಂದು ಕೆಸಿ ವೇಣುಗೋಪಾಲ್ ಅಸಮಾಧಾನ ಹೊರಹಾಕಿದ್ದಾರೆ ಎಂಬ ಮಾಹಿತಿ ಇದೆ. ಒಟ್ಟಿನಲ್ಲಿ ಸ್ಟಿಂಗ್ ಆಪರೇಷನ್ ಸದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಜೋರಾಗುವ ಲಕ್ಷಣಗಳು ಗೋಚರಿಸುತ್ತಿದೆ. ಎಚ್‌ಡಿ ಕುಮಾರಸ್ವಾಮಿ ಅವರು ಈ ನಿಟ್ಟಿನಲ್ಲಿ ಸೈಲೆಂಟ್ ಆಗುವ ಸಾಧ್ಯತೆ ಇಲ್ಲ. ಪ್ರಕರಣವನ್ನು ಜೀವಂತವಾಗಿ ಡಲು ಅವರು ಪ್ರಯತ್ನ ನಡೆಸುತ್ತಿದ್ದಾರೆ. ಹೀಗಾಗಿ ಸರ್ಕಾರ ಇದನ್ನು ಯಾವ ರೀತಿಯಲ್ಲಿ ನಿಭಾಯಿಸಲಿದೆ ಎಂಬುವುದು ಸದ್ಯಕ್ಕೆ ಕುತೂಹಲ ಕೆರಳಿಸಿದೆ.

ಸ್ಟಿಂಗ್ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ

ರಾಜ್ಯದ ಸ್ಟಿಂಗ್ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ನೀಡಲು ಸಿಎಂ ಹಾಗೂ ಗೃಹ ಸಚಿವರು ದೆಹಲಿಗೆ ಹೋಗಿದ್ದರು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ. ದೆಹಲಿಯಲ್ಲಿ ಸಿಎಂ ಕೇಂದ್ರ ಸಚಿವರನ್ನು ಭೇಟಿ ಮಾಡಿ ಗಮನ ಸೆಳೆಯಲು ಹೋಗಿದ್ರು. ರಾಜ್ಯದಲ್ಲಿ ಸ್ಟಿಂಗ್ ಬೆಳವಣಿಗೆ ಬಗ್ಗೆ ಮಾಹಿತಿ ನೀಡಲು ಹೈಕಮಾಂಡ್‌ನನ್ನು ಗೃಹ ಸಚಿವರು, ಸಿಎಂ ಭೇಟಿ ಮಾಡಿದ್ದಾರೆ.

ಜೆಡಿಎಸ್‌ನವರು ಸ್ಟಿಂಗ್ ಆಪರೇಷನ್ ವಿಷಯಗಳನ್ನು ರಾಜಕೀಯವಾಗಿ ಪ್ರಸ್ತಾಪ ಮಾಡ್ತಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅಚಾನಕ್ ಆಗಿ ನಾನು ಹೋದಾಗ ವೇಣುಗೋಪಾಲ್ ಮನೆಗೆ ಗೃಹ ಸಚಿವರು ಬಂದ್ರು ಅಂತ ಸಿಎಂ ಹೇಳಿದ್ದಾರೆ. ರಾಜಕೀಯವಾಗಿ ಹೇಳಿಕೊಳ್ಳುವ ವಿಷಯವಲ್ಲ ಇದು. ಎರಡು ಬಾರಿ ಸಿಎಂ ಆಗಿದ್ದ ಸಿದ್ದರಾಮಯ್ಯ ಬಗ್ಗೆ ಕೆಟ್ಟ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇದನ್ನು ಸಿಎಂ ಬಹಳ ಹಗುರವಾಗಿ ತೆಗೆದುಕೊಂಡಿದ್ದಾರೆ ಎಂದು ಟೀಕಿಸಿದ್ದಾರೆ.

ಸಿದ್ದರಾಮಯ್ಯ ಅವರನ್ನು ಬಿಟ್ರೆ ವೋಟು ತರೋರು ಯಾರಿದ್ದಾರೆ?. ಅವರನ್ನು ಮನೆಯಲ್ಲಿ ಕೂರಿಸಿದ್ದೀರ. ಅದರ ವಿರುದ್ಧ ನಾವು ಹೋರಾಟ ಮಾಡಿದ್ದೇವೆ. ಅಂತಹ ವ್ಯಕ್ತಿಯ ವರ್ಚಸ್ಸು ನೀವು ಹಾಳು ಮಾಡಿರೋದು. ಶಿವಕುಮಾರ್ ಅವರ ಹತ್ತಿರ ಇರೋರ ಫೋನ್ ಡಿಟೇಲ್ಸ್ ತಗೊಳ್ಳಿ, ಸತ್ಯ ಗೊತ್ತಾಗುತ್ತದೆ ಎಂದು ಕಿಡಿಕಾರಿದ್ದಾರೆ.

ಮಂತ್ರಿಗಳ ಪ್ರವೇಶಕ್ಕೆ ಅಡ್ಡಿಪಡಿಸಿರುವುದು ತಪ್ಪು



ದಸರಾ ಸಂದರ್ಭದಲ್ಲಿ ಮಂತ್ರಿಗಳಿಗೆ ಪ್ರವೇಶ ನೀಡದೇ ತಡೆದಿರುವುದು ತಪ್ಪು. ಆ ರೀತಿ ಆಗಬಾರದಿತ್ತು. ಅದೇ ರೀತಿ ಹತ್ರಾಸ್‌ನಲ್ಲಿ ದಲಿತ ಹೆಣ್ಣು ಮಗಳನ್ನು 12 ಗಂಟೆ ರಾತ್ರಿಗೆ ಹೋಗಿ ಸುಟ್ಟುಹಾಕಿದಾಗ ಸಂಸದ ಗೋವಿಂದ ಕಾರಜೋಳ ಅವರು ಯಾಕೆ ಸುಮ್ಮನಿದ್ದರು? ರೋಹಿತ್ ವೇಮುಲ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಾಗ ಕಾರಜೋಳ ಯಾಕೆ ಸುಮ್ಮನಿದ್ದರು ಗುಜರಾತ್‌ನಲ್ಲಿ ಕುದುರೆ ಮೇಲೆ ಒಬ್ಬ ದಲಿತ ಕುಳಿತ ಅಂತ ಕೊಲೆ ನಡೆಯಿತು. ಅಲ್ಲಿ ದಲಿತ ಮೀಸೆ ಬಿಟ್ಟ ಅಂತ ಹೇಳಿ ಅವನಿಗೆ ಹೊಡೆಯುತ್ತಾರೆ, ಇಂತಹ ಪ್ರಕರಣಗಳಲ್ಲಿ ಕಾರಜೋಳ ಅವರು ಏನು ಮಾಡುತ್ತಿದ್ದರು. ಮೈಸೂರಿನ ಘಟನೆ ಆಗಬಾರದಾಗಿತ್ತು, ಆಗಿಹೋಗಿದೆ. ಈ ಪ್ರಕರಣದ ವಿಚಾರಣೆಗೆ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಕಾರಜೋಳ ಅವರಿಗೆ ಧೈರ್ಯ ಇದ್ದರೆ ಬೇರೆ ರಾಜ್ಯಗಳಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ್ದಾರಾ ಎಂದು

ಪರಿಷತ್ ಚುನಾವಣೆ: ಹಲವೆಡೆ ಗಲಾಟೆ, ಘರ್ಷಣೆ, ತಳ್ಳಾಟ, ನೂಕಾಟ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ನಾಲ್ಕು ವಿಧಾನ ಪರಿಷತ್ ಕ್ಷೇತ್ರಗಳಿಗೆ 2 ಪದವೀಧರ ಮತ್ತು 2 ಶಿಕ್ಷಕರ ಕ್ಷೇತ್ರಗಳು ಬಿರುಸಿನ ಮತದಾನ ನಡೆದಿದ್ದು, ಮತದಾನದ ವೇಳೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಗದಗ ಕಡೆಗಳಲ್ಲಿ ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಗಲಾಟೆ, ಘರ್ಷಣೆ, ತಳ್ಳಾಟ, ನೂಕಾಟ ನಡೆದಿದ್ದು, ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಮತದಾನದ ಸಂದರ್ಭದಲ್ಲಿ ನಾಗರಬಾವಿಯ ಅಂಬೇಡ್ಕರ್ ಕಾಲೇಜಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ ನಡೆದಿದೆ. ಮತದಾನ ನಡೆಯುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ಕೊಟ್ಟಿಗೆಪಾಳ್ಯದ ಮಾಜಿ ಕಾರ್ಪೊರೇಟರ್ ಹಾಗೂ ಕಾಂಗ್ರೆಸ್ ನಾಯಕರಾದ ಮೋಹನ್ ಕುಮಾರ್‌ಗೆ ಬಿಜೆಪಿ ಕಾರ್ಯಕರ್ತರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಲಾಗಿದ್ದು, ಇದರಿಂದ ಕಾಂಗ್ರೆಸ್ ಕಾರ್ಯಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ವಾಗ್ವಾದ ನಡೆದು ತಾರಕಕ್ಕೇರಿ ಗಲಾಟೆಗೆ ತಿರುಗಿತ್ತು. ಬಳಿಕ ಪರಿಸ್ಥಿತಿ ಉದ್ವಿಗ್ನಗೊಂಡಾಗ ಸ್ಥಳಕ್ಕೆ ಧಾವಿಸಿದ ಪೊಲೀಸರು ಮಧ್ಯಪ್ರವೇಶಿಸಿ, ಎರಡೂ ಪಕ್ಷಗಳ ಕಾರ್ಯಕರ್ತರನ್ನು ಚದುರಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆ ವೇಳೆ ನಾಗರಬಾವಿಯ ಡಾ. ಅಂಬೇಡ್ಕರ್ ಕಾಲೇಜು ಮತಗಟ್ಟೆ ಬಳಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಸ್ಥಳಕ್ಕೆ ಶಾಸಕ ಮುನಿರತ್ನ ಆಗಮಿಸಿದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಅವರ ವಿರುದ್ಧ ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಮುನಿರತ್ನ ಕಾಂಗ್ರೆಸ್ ಕಾರ್ಯಕರ್ತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂಬ ಆರೋಪ ಕೇಳಿಬಂದಿದೆ. ಈ ವೇಳೆ ಬಿಜೆಪಿ ಶಾಸಕ ಮುನಿರತ್ನ ಮೇಲೆ ಹಲ್ಲೆಗೆ ಯತ್ನಿಸಲಾಗಿದೆ ಎಂದು ಆರೋಪಿಸಲಾಗಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ದಾಸರಹಳ್ಳಿಯ ಪಾಲಿಕೆ ಕಚೇರಿ ಬಳಿ ಎನ್‌ಡಿಎ ಮತ್ತು ಕಾಂಗ್ರೆಸ್ ಮುಖಂಡರ ನಡುವೆ ಮಾತಿನ ಚಕಮಕಿ ನಡೆದು, ತಳ್ಳಾಟ-ನೂಕಾಟ ನಡೆದ ಘಟನೆ ನಡೆದಿದೆ. ಚುನಾವಣಾ ಪ್ರಚಾರ ಮತ್ತು ಮತದಾರರ ಪರಿಶೀಲನೆ ವಿಚಾರಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಳ ಕಾರ್ಯಕರ್ತರು ಪಾಲಿಕೆ ಕಚೇರಿ ಬಳಿ ಜಮಾಯಿಸಿದ್ದರು. ಈ ವೇಳೆ ಆರಂಭದಲ್ಲಿ ಮಾತಿಗೆ ಮಾತು ಬೆಳೆದು, ನಂತರ ಮಾತಿನ ಚಕಮಕಿ ವಿಕೋಪಕ್ಕೆ ಹೋಗಿದೆ. ಪರಸ್ಪರ ಆರೋಪ-ಪ್ರತ್ಯಾರೋಪ ಮಾಡುತ್ತಿದ್ದ ಮುಖಂಡರ ನಡುವೆ ತಳ್ಳಾಟ-ನೂಕಾಟ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಘಟನೆಯಿಂದ ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಮಧ್ಯಪ್ರವೇಶಿಸಿ, ಉಭಯ ಗುಂಪುಗಳನ್ನು ಚದುರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದಾರೆ.ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಪಾಲಿಕೆ ಕಚೇರಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಚುನಾವಣೆ ಹಿನ್ನೆಲೆಯಲ್ಲಿ ಕಾರ್ಯಕರ್ತರು ಶಾಂತಿಯುತವಾಗಿ ವರ್ತಿಸಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಬಿಜೆಪಿ ಕಾರ್ಯಕರ್ತರು- ಅಧಿಕಾರಿಗಳ ನಡುವೆ ವಾಕ್ಸಮರ: ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಆನೇಕಲ್‌ನಲ್ಲಿ ಬ್ಯಾನರ್ ತೆರವು ವಿಚಾರ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದೆ.

ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿ ಎ.ಪಿ. ರಂಗನಾಥ್ ಚುನಾವಣಾ ಬ್ಯಾನರ್ ತೆರವುಗೊಳಿಸಿದ್ದಕ್ಕೆ ಬಿಜೆಪಿ ಕಾರ್ಯಕರ್ತರು ಆಕ್ಷೇಪ ವ್ಯಕ್ತಪಡಿಸಿದ್ದು, ಪುರಸಭೆ ಅಧಿಕಾರಿಗಳೊಂದಿಗೆ ಮಾತಿನ ಚಕಮಕಿ ನಡೆಸಿದರು.

ಗದಗದಲ್ಲಿ ಬಿಜೆಪಿ- ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ

ಪಶ್ಚಿಮ ಪದವೀಧರ ಕ್ಷೇತ್ರಕ್ಕೆ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ರಾಜಕೀಯ ಪಕ್ಷಗಳ ನಡುವೆ ವಾಗ್ವಾದ ನಡೆದಿರುವ ಘಟನೆ ಗದಗದ ಮುನ್ಸಿಪಲ್ ಕಾಲೇಜಿನಲ್ಲಿರುವ ಮತಗಟ್ಟೆ ಕೇಂದ್ರದಲ್ಲಿ ನಡೆದಿದೆ. ಬಿಜೆಪಿ ಕಾರ್ಯಕರ್ತರು ತಮ್ಮ ಪಕ್ಷದ ಶಾಲುಗಳನ್ನು ಧರಿಸಿ ಮತಗಟ್ಟೆಗೆ ಪ್ರವೇಶಿಸಿದ್ದಾರೆ ಎಂದು ಕಾಂಗ್ರೆಸ್ ಕಾರ್ಯಕರ್ತರು ಆರೋಪಿಸಿದ್ದಾರೆ. ಮತದಾನ ಕೇಂದ್ರಗಳ ಒಳಗೆ ಯಾವುದೇ ರಾಜಕೀಯ ಪಕ್ಷಗಳ ಚಿಹ್ನೆ ಅಥವಾ ಪ್ರಚಾರ ಸಾಮಗ್ರಿಗಳನ್ನು ಧರಿಸುವುದನ್ನು ಚುನಾವಣಾ ಆಯೋಗವು ನಿಷೇಧಿಸಿದೆ. ಆದರೆ, ಬಿಜೆಪಿ ಕಾರ್ಯಕರ್ತರು ಈ ನಿಯಮವನ್ನು ಉಲ್ಲಂಘಿಸಿ ಪಕ್ಷದ ಶಾಲುಗಳನ್ನು ಹಾಕಿಕೊಂಡು ಬಂದಿದ್ದಾರೆಂದು ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

ಈ ದಿನದ ದರ | ಪೆಟ್ರೋಲ್: 111.68 ₹/L | ಡೀಸೆಲ್ : 99.56 ₹/L | ಬಂಗಾರ: ₹14,248/Gram24ct ₹13,060/Gram22ct | ಬೆಳ್ಳಿ: ₹235.00/Gram

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡುವಂತೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಬರದಂತಹ ಪರಿಸ್ಥಿತಿ ಎದುರಾಗಿರುವಾಗಲೂ ಮೈಸೂರು ದಸರಾ ದೀಪಾಲಂಕಾರವನ್ನು ಇನ್ನೂ 15 ದಿನಗಳ ಕಾಲ ವಿಸ್ತರಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮಕ್ಕೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಬಿಜೆಪಿ ಹಿರಿಯ ನಾಯಕ ಆರ್. ಅಶೋಕ್ ಅವರು ಗುರುವಾರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿದಿನ ಕನಿಷ್ಠ ಒಂದು ಗಂಟೆಯಾದರೂ ತ್ರಿಫೇಸ್ ವಿದ್ಯುತ್ ಪೂರೈಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ. ರೈತರ ಸಂಕಷ್ಟಕ್ಕಿಂತ ಅದ್ದೂರಿ ಆಚರಣೆಗಳಿಗೆ ರಾಜ್ಯ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಆರೋಪಿಸಿದ್ದಾರೆ. ರಾಜ್ಯದಲ್ಲಿ ತೀವ್ರ ಬರದಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದರೆ, ಮುಖ್ಯಮಂತ್ರಿ ನೆರೆಯ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ವಿದೇಶಿ ಪ್ರತಿನಿಧಿಗಳನ್ನು ಸ್ವಾಗತಿಸುವುದರಲ್ಲಿ ಮತ್ತು ಅದ್ದೂರಿಯಾಗಿ ದಸರಾ ಆಚರಿಸುವುದರಲ್ಲಿ ನಿರತರಾಗಿದ್ದರು. ಇದೀಗ ಹಬ್ಬ ಮುಗಿದಿದೆ. ಈಗಲಾದರೂ ರೈತರ ಮನವಿಯನ್ನು ಆಲಿಸಲು ಸಾಧ್ಯವಾಗುತ್ತದೆಯೇ ಎಂದು ಪ್ರಶ್ನಿಸಿದ್ದಾರೆ. ದಸರಾ ದೀಪಾಲಂಕಾರವನ್ನು ಇನ್ನೂ 15 ದಿನಗಳ ಕಾಲ ವಿಸ್ತರಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಆದರೆ, ರೈತರ ಕೃಷಿ ಭೂಮಿ ಒಣಗುತ್ತಿದೆ. ಪ್ರತಿದಿನ ಒಂದು ಗಂಟೆ ವಿದ್ಯುತ್ ಪೂರೈಸಿದರೂ ಕೃಷಿ ಚಟುವಟಿಕೆಗಳಿಗೆ ನೆರವಾಗಲಿದೆ.

ರೈತರ ಬದುಕಿನಲ್ಲೂ ಬೆಳಕು ಮೂಡಲಿ ಎಂದು ಮನವಿ ಮಾಡಿದ್ದಾರೆ. ದೀಪಾಲಂಕಾರ ಮತ್ತು ಅಲಂಕಾರಗಳ ಹೆಸರಿನಲ್ಲಿ ರಾಜ್ಯ ಸರ್ಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ. ರೈತರು ತಮ್ಮ ಕೃಷಿ ಪಂಪ್‌ಸೆಟ್‌ಗಳನ್ನು ಬಳಸಲು ವಿದ್ಯುತ್ ಪೂರೈಸುವ ಮನಸ್ಸು ಸರ್ಕಾರಕ್ಕೆ ಏಕೆ ಬರುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.

ಉದಯವಾಹಿನಿ ಚಿತ್ರ

ವಾರ್ಷಿಕ ಪಬ್ಲಿಕ್ ಪರೀಕ್ಷೆ ಮುಂದೂಡಿಕೆ ಸಾಧ್ಯತೆ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮುಂಬರುವ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪಬ್ಲಿಕ್ ಪರೀಕ್ಷೆಗಳು ಮುಂದೂಡಲ್ಪಡುವ ಸಾಧ್ಯತೆ ದಟ್ಟವಾಗಿದೆ. ಕೇಂದ್ರ ಸರ್ಕಾರದ ಜನಗಣತಿ ಕಾರ್ಯಕ್ರಮದ ಎರಡನೇ ಹಂತದ ಕಾರ್ಯಾಚರಣೆ ಜನವರಿಯಿಂದ ಆರಂಭವಾಗುತ್ತಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಶಾಲಾ ಶಿಕ್ಷಕರು ಜನಗಣತಿ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸ ಬೇಕಿರುವುದರಿಂದ, ಪರೀಕ್ಷೆಗಳ ದಿನಾಂಕಗಳಲ್ಲಿ ಬದಲಾವಣೆ ಮಾಡುವಂತೆ ಶಾಲಾ ಶಿಕ್ಷಣ ಇಲಾಖೆಗೆ ಕೇಂದ್ರ ಜನಗಣತಿ ಕಾರ್ಯಾಚರಣೆ ನಿರ್ದೇಶನಾಲಯ ಅಧಿಕೃತ ಪತ್ರ ಬರೆದು ಮನವಿ ಮಾಡಿದೆ. ಕೇಂದ್ರದ ನಿರ್ದೇಶನದಂತೆ ಪರೀಕ್ಷಾ ಮಂಡಳಿಯು ಶೀಘ್ರದಲ್ಲೇ ಹೊಸ ವೇಳಾಪಟ್ಟಿಯನ್ನು ಪ್ರಕಟಿಸುವ ನಿರೀಕ್ಷೆಯಿದೆ. ಕೇಂದ್ರ ಸರ್ಕಾರದ ಯೋಜನೆಯಂತೆ ಜನಗಣತಿಯ ಎರಡನೇ ಸುತ್ತಿನ ಕಾರ್ಯಾಚರಣೆಯು ಜನವರಿ 25ರಿಂದ ಆರಂಭಗೊಂಡು ಫೆಬ್ರವರಿ 28ರವರೆಗೆ ನಡೆಯಲಿದೆ.

ಪ್ರವಾಸಿಗರ ಕೈಬೀಸಿ ಕರೆಯುತ್ತಿದೆ Golden Chariot ರೈಲು

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಕರ್ನಾಟಕದ ಹೆಮ್ಮೆಯ ಹಾಗೂ ಪ್ರಮುಖ ಐಷಾರಾಮಿ ಪ್ರವಾಸಿ ರೈಲು 'ಗೋಲ್ಡನ್ ಚಾರಿಯಟ್' ತನ್ನ 2026-27ರ ಹೊಸ ಪ್ರವಾಸದ ಸರಣಿಯನ್ನು ಶನಿವಾರದಿಂದ (ಅಕ್ಟೋಬರ್ 24) ಅಧಿಕೃತವಾಗಿ ಆರಂಭಿಸಲಿದೆ. ಸಂಪೂರ್ಣ ಹೊಸ ರೂಪದಲ್ಲಿ ಹಳಿಗೆ ಮರಳುತ್ತಿರುವ ಈ ಐಷಾರಾಮಿ ರೈಲಿಗೆ ಪ್ರವಾಸಿಗರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಮೊದಲ ಐದು ರಾತ್ರಿ ಮತ್ತು ಆರು ದಿನಗಳ ಪ್ರೈಡ್ ಆಫ್ ಕರ್ನಾಟಕ ಪ್ರಯಾಣದ ಎಲ್ಲಾ ಟಿಕೆಟ್‌ಗಳು (100% ಬುಕಿಂಗ್) ಈಗಾಗಲೇ ಸಂಪೂರ್ಣವಾಗಿ ಮಾರಾಟವಾಗಿವೆ. ಈ ಉದ್ಘಾಟನಾ ಪ್ರಯಾಣದಲ್ಲಿ ಒಟ್ಟು 75 ದೇಶಿ ಮತ್ತು ವಿದೇಶಿ ಪ್ರವಾಸಿಗರು ರಾಯಲ್ ಪ್ರಯಾಣದ ಅನುಭವ ಪಡೆಯಲಿದ್ದಾರೆ. ಹೊಸ ರೂಪದೊಂದಿಗೆ ವನ್ಯಜೀವಿ, ರಾಜವೈಭವ, ವಿಶ್ವ ಪರಂಪರೆಯ ತಾಣಗಳು, ಕಾಫಿ ನಾಡು ಮತ್ತು ಕರಾವಳಿ ಪ್ರವಾಸದ ಅನುಭವಗಳನ್ನು ಒಳಗೊಂಡ ವಿಶೇಷ ಪ್ರವಾಸಗಳನ್ನು ಈ ಬಾರಿ ಆಯೋಜಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಗೋಲ್ಡನ್ ಚಾರಿಯಟ್ ರೈಲನ್ನು ಕರ್ನಾಟಕದ ಪ್ರಮುಖ ಐಷಾರಾಮಿ ಪ್ರವಾಸೋದ್ಯಮ ಉತ್ಪನ್ನಗಳಲ್ಲಿ ಒಂದಾಗಿ ಬೆಳೆಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಪೋಲೆಂಡ್ ಪ್ರಧಾನಿ ಎರಡನೇ ಬಾರಿ ಬೆಂಗಳೂರಿಗೆ ಭೇಟಿ AI-Aerospace ಕ್ಷೇತ್ರಗಳಲ್ಲಿ ಸಹಕಾರ

ಈ ಭೇಟಿಯಿಂದ ಅಂತಾರಾಷ್ಟ್ರೀಯ ಹೂಡಿಕೆಯನ್ನು ಆಕರ್ಷಿಸಲು ಮತ್ತು ಪೋಲೆಂಡ್‌ನ ಕಂಪನಿಗಳೊಂದಿಗೆ ಸಹಕಾರವನ್ನು ವಿಸ್ತರಿಸಲು ಅವಕಾಶ ದೊರೆಯಲಿದೆ

• ಉದಯವಾಹಿನಿ, ಬೆಂಗಳೂರು

1 ಎರಡನೇ ಬಾರಿಗೆ ಇಲ್ಲಿಗೆ ಬರುತ್ತಿದ್ದಾರೆ
2 ಯುರೋಪಿಯನ್ ಒಕ್ಕೂಟದಲ್ಲಿದ್ದಾರೆ
3 ಕಾರ್ಯನಿರ್ವಹಿಸಲು ಆಸಕ್ತಿ ತೋರಿಸಿವೆ

ಕೃತಕ ಬುದ್ಧಿಮತ್ತೆ (ಎಐ), ಏರೋಸ್ಪೇಸ್, ಔಷಧ, ಸಂಶೋಧನೆ ಮತ್ತು ನಾವೀನ್ಯತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪೋಲೆಂಡ್ ಜೊತೆ ವ್ಯಾಪಾರ ಹಾಗೂ ತಂತ್ರಜ್ಞಾನ ಸಂಬಂಧಗಳನ್ನು ಬಲಪಡಿಸಲು ಕರ್ನಾಟಕ ಸಿದ್ಧವಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಅವರು ಸುಮಾರು 100 ಉದ್ಯಮಿಗಳ ನಿಯೋಗದೊಂದಿಗೆ ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಹೇಳಿಕೆ ನೀಡಿದ್ದಾರೆ.

ನಮ್ಮ ಯುವ ನಾಯಕರು ಹಾಗೂ ಹಿರಿಯ ಉದ್ಯಮಿಗಳು ಕರ್ನಾಟಕಕ್ಕೆ ಹೆಮ್ಮೆ ತಂದಿರುವುದು ನಾವು ಬಹಳ ಹೆಮ್ಮೆಪಡಬೇಕಾದ ಸಂಗತಿ. ಪೋಲೆಂಡ್ ಪ್ರಧಾನಿ ಎರಡನೇ ಬಾರಿಗೆ ಇಲ್ಲಿಗೆ ಬರುತ್ತಿದ್ದಾರೆ. ಅವರು ಅಲ್ಲಿನ ಅತ್ಯಂತ ದೀರ್ಘಕಾಲ ಸೇವೆ ಸಲ್ಲಿಸಿದ ಪ್ರಧಾನಿಗಳಲ್ಲಿ ಒಬ್ಬರು. ಈಗ ಅವರು ಯುರೋಪಿಯನ್ ಒಕ್ಕೂಟದಲ್ಲಿದ್ದಾರೆ. ಉತ್ತಮ ವ್ಯಾಪಾರ ಅವಕಾಶಗಳನ್ನು ಅನ್ವೇಷಿಸುವ ಉದ್ದೇಶದಿಂದ ಅವರು ಇಲ್ಲಿಗೆ ಬಂದಿದ್ದಾರೆ ಎಂದು ತಿಳಿಸಿದರು.

ನಿನ್ನೆ ದೆಹಲಿಯಲ್ಲಿ ಉದ್ಯಮ ವಲಯದ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ, ಕರ್ನಾಟಕದಲ್ಲಿ ಹೂಡಿಕೆ ಅವಕಾಶಗಳನ್ನು ಅನ್ವೇಷಿಸುವಂತೆ ಪೋಲೆಂಡ್‌ನ ಉದ್ಯಮಿಗಳಿಗೆ ಆಹ್ವಾನ ನೀಡಿದ್ದಾಗಿ ಹೇಳಿದರು.

ಬೆಂಗಳೂರು ಟೆಕ್ ಶೃಂಗಸಭೆ ಮತ್ತು ಜಾಗತಿಕ ಹೂಡಿಕೆದಾರರ ಸಮಾವೇಶದಂತಹ ಕಾರ್ಯಕ್ರಮಗಳ ಮೂಲಕ ಜಾಗತಿಕ ಪ್ರತಿನಿಧಿಗಳನ್ನು ಆಕರ್ಷಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಪ್ರಯತ್ನಗಳನ್ನು ಡಿ ಕೆ ಶಿವಕುಮಾರ್ ಉಲ್ಲೇಖಿಸಿದರು. ಇಂತಹ ಕಾರ್ಯಕ್ರಮಗಳು ಹೂಡಿಕೆ ತಾಣವಾಗಿ ಕರ್ನಾಟಕದ ಮಹತ್ವ ಹೆಚ್ಚುತ್ತಿರುವುದನ್ನು ಪ್ರತಿಬಿಂಬಿಸುತ್ತವೆ ಎಂದರು.

ಉದಯವಾಹಿನಿ ಚಿತ್ರ

ವಿಶೇಷವಾಗಿ ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರದ ಸಾಧ್ಯತೆಗಳ ಕುರಿತು ಮಾತನಾಡಿದ ಅವರು, ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ಮೀರಿ ಪಾಲುದಾರಿಕೆಯನ್ನು ವಿಸ್ತರಿಸಲು ರಾಜ್ಯ ಉತ್ಸುಕವಾಗಿದೆ ಎಂದು ತಿಳಿಸಿದರು.

ಔಷಧ ಕ್ಷೇತ್ರದಲ್ಲಿಯೂ ಅವರಿಗೆ ಅವಕಾಶಗಳನ್ನು ಪರಿಚಯಿಸಿದ್ದೇವೆ. ನಮ್ಮ ಭಾರತೀಯ ಕೈಗಾರಿಕಾ ಒಕ್ಕೂಟ ಕೂಡ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು. ಬಾಹ್ಯಾಕಾಶ ಮತ್ತು ವೈಜ್ಞಾನಿಕ ಸಂಶೋಧನಾ ಕ್ಷೇತ್ರಗಳಲ್ಲಿನ ಸಹಕಾರದ ಬಗ್ಗೆಯೂ ಮುಖ್ಯಮಂತ್ರಿ ಪ್ರಸ್ತಾಪಿಸಿದರು. ಭಾರತ ಮತ್ತು ಪೋಲೆಂಡ್‌ನ ಗಗನಯಾತ್ರಿಗಳು ಬಾಹ್ಯಾಕಾಶಕ್ಕೆ ತೆರಳಿರುವುದರಿಂದ ಸಂಶೋಧನೆ ಹಾಗೂ ನಾವೀನ್ಯತೆಯ ವಿನಿಮಯವನ್ನು ವಿಸ್ತರಿಸಲು ಅವಕಾಶಗಳಿವೆ ಎಂದು ಹೇಳಿದರು.

ಸಹಕಾರಕ್ಕೆ ಸಾಕಷ್ಟು ಅವಕಾಶಗಳಿವೆ. ನಾವು ಕೇವಲ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ಯೋಗಿಗಳು ಅಥವಾ ಉದ್ಯಮವನ್ನಷ್ಟೇ ಗಮನಿಸುತ್ತಿಲ್ಲ. ಐಟಿ ಕ್ಷೇತ್ರ ಈಗಾಗಲೇ ಬೆಳೆದಿದೆ. ಈಗ ನಾವು ಎಐ ಕಡೆಗೆ ಗಮನ ಹರಿಸುತ್ತಿದ್ದೇವೆ. ವಿಶೇಷವಾಗಿ ಏರೋಸ್ಪೇಸ್ ಕ್ಷೇತ್ರದಲ್ಲಿ ಕರ್ನಾಟಕ ಪ್ರಮುಖ ಕೇಂದ್ರವಾಗಿದೆ ಎಂಬುದನ್ನು ಅರಿತುಕೊಂಡಿದ್ದಾರೆ ಎಂದು ತಿಳಿಸಿದರು. ಎಎನ್‌ಐ ಸುದ್ದಿಸಂಸ್ಥೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು, ಪ್ರಧಾನಿ ಟಸ್ಕ್ ಅವರು ಹಲವು ಪ್ರಮುಖ ರಾಜಕೀಯ ನಾಯಕರನ್ನು ಭೇಟಿಯಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ಸಭೆ ಅತ್ಯಂತ ಉತ್ತಮವಾಗಿತ್ತು. ಉದ್ಯಮ ವಲಯದ ನಾಯಕರೊಂದಿಗೂ ಚರ್ಚೆ ನಡೆಸಿದ್ದಾರೆ ಎಂದು ಹೇಳಿದರು.ನಾವು ಪೋಲೆಂಡ್‌ನ ಬಾಹ್ಯಾಕಾಶ ಉದ್ಯಮದ ನಾಯಕರು ಮತ್ತು ಐಟಿ ವಲಯದ ಪ್ರಮುಖರೊಂದಿಗೆ ಇಲ್ಲಿಗೆ ಬಂದಿದ್ದೇವೆ. ಭಾರತೀಯ ಕಂಪನಿಗಳೊಂದಿಗೆ ಇನ್ನಷ್ಟು ಸಹಕಾರವನ್ನು ಬೆಳೆಸಲು ನಾವು ಬಯಸುತ್ತೇವೆ ಎಂದು ಡೊಮಾನ್ಸ್ಕಿ ತಿಳಿಸಿದರು.

> 2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರವನ್ನು ದ್ವಿಗುಣಗೊಳಿಸುವ ಗುರಿಯನ್ನು ಪೋಲೆಂಡ್ ಪ್ರಧಾನಿ ನಿಗದಿಪಡಿಸಿರುವ ಕುರಿತು ಪ್ರತಿಕ್ರಿಯಿಸಿದ ಡಿ ಕೆ ಶಿವಕುಮಾರ್, ಖಂಡಿತವಾಗಿಯೂ ನಾವು ಸಹಕರಿಸುತ್ತೇವೆ. ಏರೋಸ್ಪೇಸ್ ಸೇರಿದಂತೆ ಅವರು ಬಯಸುವ ಯಾವುದೇ ಕ್ಷೇತ್ರದಲ್ಲೂ ನಾವು ಕೈಜೋಡಿಸುತ್ತೇವೆ ಎಂದರು.
> –ಡಿ.ಕೆ. ಶಿವಕುಮಾರ್

> ನಾವು ಅವರ ಉದ್ಯಮ ವಲಯದ ನಾಯಕರೊಂದಿಗೆ ಚರ್ಚೆ ನಡೆಸಿದ್ದೇವೆ. ಅವರಿಗೆ ಆಹ್ವಾನವನ್ನೂ ನೀಡಿದ್ದೇವೆ. ಅವರು ಇದರಿಂದ ಸಂತೋಷಗೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಪೋಲೆಂಡ್‌ನ ಕಂಪನಿಗಳು ಈಗಾಗಲೇ ಬೆಂಗಳೂರು ಮತ್ತು ಕರ್ನಾಟಕದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ತೋರಿಸಿವೆ ಎಂದು ಹೇಳಿದರು. –ಡಿ.ಕೆ. ಶಿವಕುಮಾರ್

ಮೆಟ್ರೋ ನಿಲ್ದಾಣಗಳಿಗೆ ಜಯಲಲಿತಾ, ಕರುಣಾನಿಧಿ, ಎಂ.ಜಿ.ಆರ್. ಹೆಸರು!

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಬೊಮ್ಮಸಂದ್ರದಿಂದ ತಮಿಳುನಾಡಿನ ಹೊಸೂರಿಗೆ ನಮ್ಮ ಮೆಟ್ರೋ ಹಳದಿ ಮಾರ್ಗವನ್ನು ವಿಸ್ತರಿಸುವ ಪ್ರಸ್ತಾವನೆಗೆ ಕರ್ನಾಟಕದಲ್ಲಿ ವ್ಯಾಪಕ ಪ್ರತಿರೋಧ ವ್ಯಕ್ತವಾಗುತ್ತಿದ್ದು, ಈ ಯೋಜನೆಗೆ ಸಂಬಂಧಿಸಿದಂತೆ ಆಡಳಿತಾತ್ಮಕ, ತಾಂತ್ರಿಕ ಹಾಗೂ ರಾಜಕೀಯ ಬೆಳವಣಿಗೆಗಳು ತೀವ್ರಗೊಂಡಿವೆ. ಅದರಲ್ಲೂ, ಕನ್ನಡಪರ ಸಂಘಟನೆಗಳ ತೀವ್ರ ಪ್ರತಿಭಟನೆಗಳ ಬೆನ್ನಲ್ಲೇ, ತಮಿಳುನಾಡು ಸರ್ಕಾರ ಹಾಗೂ ನಮ್ಮ ಮೆಟ್ರೋ ಆಡಳಿತ ಮಂಡಳಿ ನಡುವಿನ ಹೊಸ ತಾಂತ್ರಿಕ ಮತ್ತು ಕಾರ್ಯತಂತ್ರದ ನಿಲುವುಗಳು ಹೊರಬಂದಿವೆ.

ಕನ್ನಡಪರ ಹೋರಾಟಗಾರರಾದ ವಾಟಾಳ್ ನಾಗರಾಜ್ ಮತ್ತು ಕರವೇ ಮುಖಂಡ ಪ್ರವೀಣ್ ಶೆಟ್ಟಿ ಅವರು, ಗಡಿಯವರೆಗೆ ಮೆಟ್ರೋ ವಿಸ್ತರಣೆ ಮಾಡಿದರೆ ಬೆಂಗಳೂರು ನಗರ ಮಿನಿ ತಮಿಳುನಾಡು ಆಗಿ ಪರಿವರ್ತನೆಯಾಗುವ ಅಪಾಯವಿದೆ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ. ಹಾಗಾಗಿ, ರಾಜ್ಯ ಸರ್ಕಾರ ಕೂಡಲೇ ಅತ್ತಿಬೆಲೆ ಮೆಟ್ರೋ ಯೋಜನೆಯನ್ನು ಕೈಬಿಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿರುವ ಕರವೇ ಮುಖಂಡ ಪ್ರವೀಣ್ ಶೆಟ್ಟಿ, ಕಾವೇರಿ ನೀರನ್ನು ಬಿಡದ ಹಾಗೂ ಮೇಕೆದಾಟು ಯೋಜನೆಗೆ ಅನುಮತಿ ನೀಡದ ನೆರೆ ರಾಜ್ಯಕ್ಕೆ ನಮ್ಮ ಮೆಟ್ರೋ ಸಂಪರ್ಕ ಕಲ್ಪಿಸುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಜೊತೆಗೆ, ಅನುಮತಿ ನೀಡಿದರೆ ಮುಂದೊಂದು ದಿನ ನಿಲ್ದಾಣಗಳಿಗೆ ಜಯಲಲಿತಾ, ಕರುಣಾನಿಧಿ, ಎಂಜಿಆರ್ ಅವರ ಹೆಸರುಗಳನ್ನು ಇಡುವ ಪರಿಸ್ಥಿತಿ ಬರಬಹುದು. ಅದರಲ್ಲೂ, ಇದು ಯಾವುದೇ ಜನಾಂಗೀಯ ದ್ವೇಷದ ಪ್ರಶ್ನೆಯಲ್ಲ, ಬದಲಿಗೆ ಕರ್ನಾಟಕದ ಹಿತಾಸಕ್ತಿಯ ಹಿತದೃಷ್ಟಿಯಿಂದ ಕೈಗೊಂಡಿರುವ ನಿರ್ಧಾರ ಎಂದು ಸ್ಪಷ್ಟಪಡಿಸಿದ್ದಾರೆ.

ಅಕ್ರಮ ಸಂಬಂಧ ಶಂಕೆ; ಪತ್ನಿ ಕೊಂದು ಚರಂಡಿಗೆ ಎಸೆದ ವ್ಯಕ್ತಿ, ಬಂಧನ

• ಉದಯವಾಹಿನಿ, ಬೆಂಗಳೂರು

ಪತ್ನಿ ಶೀಲ ಶಂಕಿಸಿ ಭೀಕರವಾಗಿ ಹತ್ಯೆ ಮಾಡಿ, ಶವವನ್ನು ಚೀಲದಲ್ಲಿ ತುಂಬಿ ರಾಜಕಾಲುವೆಗೆ ಎಸೆದಿದ್ದ ಬಿಹಾರ ಮೂಲದ ವಲಸೆ ಕಾರ್ಮಿಕನನ್ನು ಬೆಂಗಳೂರಿನ ಮಾಗಡಿ ರಸ್ತೆ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಬಂಧಿತ ಆರೋಪಿಯನ್ನು ಮೊಹಮ್ಮದ್ ಇಫ್ಜಾನ್ (22) ಎಂದು ಗುರುತಿಸಲಾಗಿದೆ. ಮೃತ ಮಹಿಳೆಯನ್ನು ರುಕ್ಸಾನಾ (25) ಎಂದು ಗುರುತಿಸಲಾಗಿದೆ.

ಮಹಿಳೆ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಟೈಲರ್ ಆಗಿ ಕೆಲಸ ಮಾಡುತ್ತಿದ್ದಳು. ಬಂಧಿತ ಆರೋಪಿ ಮೊಹಮ್ಮದ್ ಗುಜರಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಇಬ್ಬರೂ ಬಿಹಾರ ಮೂಲದವರಾಗಿದ್ದು, ಗೋವಿಪುರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಇಬ್ಬರೂ ಪರಸ್ಪರ ಪ್ರೀತಿಸಿ ಎರಡು ವರ್ಷಗಳ ಹಿಂದೆ ವಿವಾಹವಾಗಿದ್ದರು. ರುಕ್ಸಾನಾ ಮೊಬೈಲ್‌ನಲ್ಲಿ ಆಗಾಗ ಯಾರೊಂದಿಗೋ ಮಾತನಾಡುತ್ತಾಳೆ ಮತ್ತು ಅಕ್ರಮ ಸಂಬಂಧ ಹೊಂದಿದ್ದಾಳೆ ಎಂದು ಇರ್ಫಾಜ್ ಅನುಮಾನಿಸುತ್ತಿದ್ದ. ಈ ವಿಚಾರವಾಗಿ ದಂಪತಿ ನಡುವೆ ಆಗಾಗ ಜಗಳ ನಡೆಯುತ್ತಿತ್ತು.

ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಹರಿಸಲು CWRC ಆದೇಶ..!

• ಉದಯವಾಹಿನಿ, ಬೆಂಗಳೂರು

ತಮಿಳುನಾಡಿಗೆ ಪ್ರತಿದಿನ 3,000 ಕ್ಯುಸೆಕ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದೆ. ಮುಂದಿನ 15 ದಿನಗಳ ಅವಧಿಯಲ್ಲಿ ಒಟ್ಟು 3 ಟಿಎಂಸಿ ಅಡಿ ನೀರು ಬಿಡುಗಡೆ ಮಾಡುವಂತೆಯೂ ಸಮಿತಿ ಸೂಚಿಸಿದೆ. ಶುಕ್ರವಾರ ನಡೆದ ಸಭೆಯಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಜಲಾಶಯಗಳಲ್ಲಿನ ನೀರಿನ ಲಭ್ಯತೆ ಹಾಗೂ ಎರಡೂ ರಾಜ್ಯಗಳ ನೀರಿನ ಪರಿಸ್ಥಿತಿಯ ಕುರಿತು ಮಾಹಿತಿ ಪಡೆಯಲಾಯಿತು.

ಈವರೆಗೆ ಕರ್ನಾಟಕ ತನ್ನ ಪಾಲಿನ ನೀರನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ ಎಂದು ತಮಿಳುನಾಡು ಆಕ್ಷೇಪಿಸಿದ್ದು, ಹೆಚ್ಚಿನ ಪ್ರಮಾಣದ ನೀರು ಹರಿಸುವಂತೆ ಮನವಿ ಸಲ್ಲಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ಕರ್ನಾಟಕ, ಈಗಾಗಲೇ ಕಾವೇರಿ ನದಿಯ ಮೂಲಕ ತಮಿಳುನಾಡಿಗೆ ಹೆಚ್ಚಿನ ಪ್ರಮಾಣದ ನೀರು ಹರಿಸಲಾಗಿದೆ ಎಂದು ತಿಳಿಸಿತು. ರಾಜ್ಯದಲ್ಲಿ ಮಳೆಯ ಕೊರತೆಯಿಂದ ಜಲಾಶಯಗಳ ನೀರಿನ ಮಟ್ಟ ಕುಸಿದಿದ್ದು, ಈ ಪರಿಸ್ಥಿತಿಯಲ್ಲಿ ಮತ್ತಷ್ಟು ನೀರು ಬಿಡುಗಡೆ ಮಾಡುವುದು ಕಷ್ಟಕರವಾಗಿದೆ ಎಂದು ತನ್ನ ವಾದವನ್ನು ಮಂಡಿಸಿತು.

ಎರಡೂ ರಾಜ್ಯಗಳ ವಾದಗಳನ್ನು ಆಲಿಸಿದ ಸಮಿತಿ, ತಮಿಳುನಾಡಿಗೆ ಪ್ರತಿದಿನ 3,000 ಕ್ಯುಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಸೂಚಿಸಿದ್ದು, 15 ದಿನಗಳ ಅವಧಿಯಲ್ಲಿ ಒಟ್ಟು 3 ಟಿಎಂಸಿ ಅಡಿ ನೀರು ಹರಿಸುವಂತೆಯೂ ಸೂಚನೆ ನೀಡಿದೆ.

ಸಿಲಿಕಾನ್ ಸಿಟಿಯಲ್ಲಿ ರಾತ್ರಿ 12ರವರೆಗೂ ಬರಲಿದೆ ಕಸದ ಗಾಡಿ

• ಉದಯವಾಹಿನಿ, ಬೆಂಗಳೂರು

ಭಾರತದ ಸಿಲಿಕಾನ್ ವ್ಯಾಲಿ ಮತ್ತು ಸ್ಟಾರ್ಟ್‌ಅಪ್ ಹಬ್ ಆಗಿರುವ ಬೆಂಗಳೂರಿಗೆ ದೇಶದ ಹಾಗೂ ಪ್ರಪಂಚದ ವಿವಿಧ ಮೂಲೆಗಳಿಂದ ಲಕ್ಷಾಂತರ ಜನರು ಉದ್ಯೋಗ ಮತ್ತು ಉದ್ಯಮಕ್ಕಾಗಿ ಬಂದವರೆ ಹೆಚ್ಚು.! ಹಾಗಾಗಿಯೇ, ಈ ನಗರ ದಿನವೂ 24 ಗಂಟೆಯೂ ಬ್ಯುಸಿಯಾಗಿರುತ್ತದೆ. ಅದರಲ್ಲೂ, ಇಲ್ಲಿನ ಸಾಫ್ಟ್‌ವೇರ್ ಮತ್ತು ಕಾಲ್ ಸೆಂಟರ್ ಕಂಪನಿಗಳು ಜಾಗತಿಕ ಗ್ರಾಹಕರಿಗಾಗಿ ಕೆಲಸ ಮಾಡುವುದರಿಂದ, ಸಾವಿರಾರು ಉದ್ಯೋಗಿಗಳು ಶಿಫ್ಟ್ ಆಧಾರದ ಮೇಲೆಯೇ ಕೆಲಸ ಮಾಡುತ್ತಾರೆ. ಹಾಗಾಗಿ, ದಿನಕ್ಕೆ ಒಮ್ಮೆ, ಅದುವೇ ಮುಂಜಾನೆ ಬರುವ ಕಸದ ಗಾಡಿಗೆ ತಮ್ಮ ಮನೆಯ ಕಸ ಹಾಕಲು ಸಾಧ್ಯವಾಗದೆ ಹಲವಾರು ಉದ್ಯೋಗಿಗಳು ಪರದಾಡುತ್ತಿದ್ದರು. ಆದರೆ, ಇದಕ್ಕೆ ಪರಿಹಾರವಾಗಿ, ಇನ್ಮುಂದೆ ಸಂಜೆ 5 ಗಂಟೆಯಿಂದ ಮಧ್ಯರಾತ್ರಿ 12 ಗಂಟೆಯವರೆಗೂ ಮನೆ ಬಾಗಿಲಿಗೆ ಬಂದು ಕಸ ಸಂಗ್ರಹಿಸುವ ವಿಶೇಷ ಯೋಜನೆಗೆ ಜಿಬಿಎ ಚಾಲನೆ ನೀಡಿದೆ.

ಉದಯವಾಹಿನಿ ಚಿತ್ರ

ಕಸ ಸಂಗ್ರಹಣೆ ಏತನ್ಮಧ್ಯೆ, ಸಾರ್ವಜನಿಕರು ಎಂದಿನಂತೆ ಹಸಿ ಕಸ ಮತ್ತು ಒಣ ಕಸವನ್ನು ಕಡ್ಡಾಯವಾಗಿ ಪ್ರತ್ಯೇಕಿಸಿಯೇ ನೀಡಬೇಕಾಗುತ್ತದೆ. ಬೆಳಗ್ಗಿನ ಕಸ ಸಂಗ್ರಹಣೆ ವ್ಯವಸ್ಥೆಯು ಎಂದಿನಂತೆ ಮುಂದುವರಿಯಲಿದೆ.

ಸದ್ಯಕ್ಕೆ ಈ ಯೋಜನೆಯನ್ನು ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ನಾಲ್ಕು ವಾರ್ಡ್‌ಗಳು ಹಾಗೂ ಹೊಂಗಸಂದ್ರ ವಾರ್ಡ್ ಸೇರಿದಂತೆ ಒಟ್ಟು 5 ವಾರ್ಡ್‌ಗಳಲ್ಲಿ (ಎಚ್‌ಎಸ್‌ಆರ್ ಲೇಔಟ್, ಬೊಮ್ಮನಹಳ್ಳಿ, ಹೊಂಗಸಂದ್ರ, ಮಂಗಳಮ್ಮನಪಾಳ್ಯ ಮತ್ತು ಸಿಂಗಸಂದ್ರ) ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ಅದರಂತೆ, ಬೆಳಗ್ಗಿನ ಅವಧಿಯಲ್ಲಿ ಈ 5 ವಾರ್ಡ್‌ಗಳಲ್ಲಿ ಸುಮಾರು 160 ಕಸದ ವಾಹನಗಳು ಕಾರ್ಯನಿರ್ವಹಿಸಿದರೆ, ಸಂಜೆಯ ವಿಶೇಷ ವಿಲೇವಾರಿಗಾಗಿ 20 ರಿಂದ 25 ಆಟೋಗಳನ್ನು ನಿಯೋಜಿಸಲಾಗಿದೆ. ಉದಾಹರಣೆಗೆ, ಹೊಂಗಸಂದ್ರ ಒಂದರಲ್ಲೇ ಸಂಜೆ ವೇಳೆ ಹಸಿ ಕಸಕ್ಕೆ 3 ಮತ್ತು ಒಣ ಕಸಕ್ಕೆ 3 ರಂತೆ ಒಟ್ಟು 6 ವಾಹನಗಳು ಓಡಾಡಲಿವೆ.

ಕರ್ನಾಟಕದ 500ಕ್ಕೂ ಹೆಚ್ಚು ಯಾತ್ರಿಕರು ಸಂಕಷ್ಟದಲ್ಲಿ, ರಕ್ಷಣೆಗೆ ಸರ್ಕಾರ ಕಸರತ್ತು..!

• ಉದಯವಾಹಿನಿ, ಬೆಂಗಳೂರು

ಪ್ರಾದೇಶಿಕ ಉದ್ವಿಗ್ನತೆ ಹಾಗೂ ವಿಮಾನ ಕಾರ್ಯಾಚರಣೆಯಲ್ಲಾದ ಭಾರಿ ವ್ಯತ್ಯಯದಿಂದಾಗಿ ಸೌದಿ ಅರೇಬಿಯಾದಲ್ಲಿ ಕರಾವಳಿ ಕರ್ನಾಟಕ ಹಾಗೂ ನೆರೆಯ ಕಾಸರಗೋಡಿನ 500ಕ್ಕೂ ಹೆಚ್ಚು ಉಮ್ರಾ ಯಾತ್ರಾರ್ಥಿಗಳು ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ.

ಸಂಕಷ್ಟದಲ್ಲಿರುವ ಯಾತ್ರಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಸ್ಥಳೀಯ ಟೂರ್ ಆಪರೇಟರ್‌ಗಳು ಮತ್ತು ರಾಜಕೀಯ ಮುಖಂಡರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ತುರ್ತು ಹಸ್ತಕ್ಷೇಪಕ್ಕೆ ಮನವಿ ಮಾಡಿದ್ದಾರೆ.

ಯಾತ್ರಿಕರ ಕುಟುಂಬಸ್ಥರು ಆತಂಕ ವ್ಯಕ್ತಪಡಿಸಿದ್ದು, ಸುಮಾರು 500 ಮಂದಿಯನ್ನು ತಾಯ್ನಾಡಿಗೆ ಕರೆತರಲು ರಿಯಾದ್ ಅಥವಾ ಜೆದ್ದಾಕ್ಕೆ ವಿಮಾನಗಳನ್ನು ಹಾರಿಸಲು ಇಂಡಿಗೊ, ಆಕಾಶ ಏರ್ ಮತ್ತು ಏರ್ ಇಂಡಿಯಾಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಅನುಮತಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಯಾತ್ರಿಕರೊಂದಿಗೆ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ. ಹಜ್ ಸಮಿತಿಯ ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳು ಇಂದು ಸೌದಿ ಅರೇಬಿಯಾದಲ್ಲಿ ಸಿಲುಕಿರುವ ಯಾತ್ರಿಕರನ್ನು ಭೇಟಿಯಾಗಿ ನೆರವು ನೀಡುವ ಭರವಸೆ ನೀಡಿದ್ದಾರೆ.

ಸೌದಿ ರಿಯಾಲ್‌ಗೆ ಹೋಲಿಸಿದರೆ ಭಾರತೀಯ ರೂಪಾಯಿಯ ವಿನಿಮಯ ಮೌಲ್ಯ ಕಡಿಮೆ ಇರುವುದರಿಂದ ಒಬ್ಬರಿಗೆ ದಿನಕ್ಕೆ ಊಟಕ್ಕಾಗಿ ಸುಮಾರು 1,500 ರೂಪಾಯಿ ಖರ್ಚಾಗುತ್ತಿದೆ. ಅಗತ್ಯಬಿದ್ದರೆ ಆಹಾರದ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಇತರ ನೆರವಿನ ಅಗತ್ಯವಿರುವ ಯಾತ್ರಿಕರಿಗಾಗಿ ಸಹಾಯವಾಣಿಯನ್ನೂ ಆರಂಭಿಸಲಾಗುತ್ತಿದೆ. ಖಾಸಗಿ ಪ್ರವಾಸ ನಿರ್ವಾಹಕರ ಮೂಲಕ ಇಂಡಿಗೊ, ಆಕಾಶ ಏರ್ ಮತ್ತು ಏರ್ ಇಂಡಿಯಾ ವಿಮಾನಗಳಲ್ಲಿ ಯಾತ್ರಿಕರು ಸೌದಿ ಅರೇಬಿಯಾಕ್ಕೆ ತೆರಳಿದ್ದರು. ಆದರೆ, ಅಲ್ಲಿಗೆ ತಲುಪಿದ ಬಳಿಕ ಏಜೆಂಟರು ಅವರನ್ನು ಅತಂತ್ರ ಸ್ಥಿತಿಯಲ್ಲಿ ಬಿಟ್ಟು ತೆರಳಿದ್ದಾರೆ. ಅಕ್ಟೋಬರ್ 24 ಮತ್ತು 27ರಂದು ವಿಮಾನಗಳ ಮೂಲಕ ಯಾತ್ರಿಕರನ್ನು ವಾಪಸ್ ಕರೆತರಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದ್ದಾರೆ.


ಉದಯವಾಹಿನಿ ಚಿತ್ರ

ಬೆಂಗಳೂರು ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು ನ.1ಕ್ಕೆ ಚಾಲನೆ!

• ಉದಯವಾಹಿನಿ, ಬೆಂಗಳೂರು

ಭಾರತದ ಎರಡನೇ ವಂದೇ ಭಾರತ್ ಸ್ಲೀಪರ್' ರೈಲು ಸೇವೆಯಾದ ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ರೈಲನ್ನು ನವೆಂಬರ್ 1 ರಂದು ಪ್ರಾರಂಭಿಸಲು ನಿರ್ಧರಿಸಲಾಗಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಈ ಸೇವೆಯಿಂದಾಗಿ ಎರಡೂ ನಗರಗಳ ನಡುವಿನ ಪ್ರಯಾಣದ ಸಮಯವು ಸುಮಾರು 24 ಗಂಟೆಗಳಿಂದ 16 ಗಂಟೆಗಳಿಗೆ ಇಳಿಕೆಯಾಗಲಿದ್ದು, ಆರು ರಿಂದ ಎಂಟು ಗಂಟೆಗಳಷ್ಟು ಸಮಯ ಉಳಿತಾಯವಾಗಲಿದೆ ಎಂದು ಸೋಮಣ್ಣ ಹೇಳಿದರು.

ಉದಯವಾಹಿನಿ ಚಿತ್ರ

ರೈಲಿನಲ್ಲಿ 16 ಸಂಪೂರ್ಣ ಹವಾನಿಯಂತ್ರಿತ ಬೋಗಿಗಳಿದ್ದು, ಒಟ್ಟು 823 ಬರ್ತ್‌ಗಳ (ಮಲಗುವ ವ್ಯವಸ್ಥೆ) ಸೌಲಭ್ಯವಿರುತ್ತದೆ. ಇದು ಎರಡೂ ನಗರಗಳ ನಡುವೆ ರಾತ್ರಿ ಪ್ರಯಾಣಕ್ಕೆ ಅನುಕೂಲ ಒದಗಿಸಲಿದೆ ಎಂದು ಅವರು ವಿವರಿಸಿದರು.ಈ ರೈಲು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ನಡುವೆ ಸಂಚರಿಸಲಿದ್ದು, ವಾರದಲ್ಲಿ ಆರು ದಿನಗಳ ಕಾಲ ಕಾರ್ಯನಿರ್ವಹಿಸಲಿದೆ. ಬೆಂಗಳೂರಿನಿಂದ ಸಂಜೆ 7.50 ಕ್ಕೆ ಹೊರಟು, ಮರುದಿನ ಬೆಳಿಗ್ಗೆ 11.55 ಕ್ಕೆ ಮುಂಬೈ ತಲುಪಲಿದೆ. ಈ ಪ್ರಯಾಣಕ್ಕೆ ಸುಮಾರು 16 ಗಂಟೆ 5 ನಿಮಿಷಗಳು ಬೇಕಾಗುತ್ತವೆ. ಮರಳುವ ಪ್ರಯಾಣದಲ್ಲಿ, ಈ ರೈಲು ಮುಂಬೈನಿಂದ ರಾತ್ರಿ 8.10 ಕ್ಕೆ ಹೊರಟು, ಮರುದಿನ ಬೆಳಿಗ್ಗೆ 11.55 ಕ್ಕೆ ಬೆಂಗಳೂರು ತಲುಪಲಿದೆ.

ಫೋಟೋಗ್ರಾಫರ್‌ನ್ನು ಅಟ್ಟಾಡಿಸಿ ಸುಲಿಗೆ; ಅಪ್ರಾಪ್ತರ ಸಹಿತ ಐವರ ಬಂಧನ

• ಉದಯವಾಹಿನಿ, ಬೆಂಗಳೂರು

ಫೋಟೋಗ್ರಾಫರನ್ನು ಅಟ್ಟಾಡಿಸಿ ಸುಲಿಗೆಗೈದಿದ್ದ ಐವರು ಅಪ್ರಾಪ್ತ ಆರೋಪಿಗಳನ್ನು ಜ್ಞಾನ ಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗಗನ್, ಮನೋಜ್, ತೇಜಸ್ ಹಾಗೂ ಇಬ್ಬರು ಅಪ್ರಾಪ್ತರನ್ನು ಬಂಧಿಸಲಾಗಿದೆ. ಅಕ್ಟೋಬರ್ 15ರ ರಾತ್ರಿ ಜ್ಞಾನ ಭಾರತಿ ಠಾಣೆ ವ್ಯಾಪ್ತಿಯ ಅಮ್ಮ ಆಶ್ರಮದ ರಸ್ತೆಯಲ್ಲಿ ಈ ಘಟನೆ ನಡೆದಿತ್ತು. ಕೇರಳದ ಕಣ್ಣೂರಿನಿಂದ ಬೆಂಗಳೂರಿಗೆ ಬಂದಿಳಿದಿದ್ದ ಫೋಟೋಗ್ರಾಫರ್ ಮಲ್ಲಿಕಾರ್ಜುನ್ ಎಂಬುವರನ್ನು ಅಟ್ಟಾಡಿಸಿದ್ದ ಆರೋಪಿಗಳು ಬಳಿಕ ಅವರ ಮೇಲೆ ಹಲ್ಲೆ ನಡೆಸಿ ಚಿನ್ನದ ಉಂಗುರ, ಮೊಬೈಲ್ ಫೋನ್ ಮತ್ತಿತರ ವಸ್ತುಗಳನ್ನು ಕಸಿದುಕೊಂಡು ಪರಾರಿಯಾಗಿದ್ದರು. ಆರೋಪಿಗಳ ಈ ಸಂಪೂರ್ಣ ಕೃತ್ಯ ಸಮೀಪದ ಕಟ್ಟಡವೊಂದರ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಅಲ್ಲದೆ ಬೆಂಗಳೂರಿನ ಕೆಲವೆಡೆ ಸುರಕ್ಷತೆಯ ಕುರಿತು ಗಂಭೀರ ಆತಂಕ ವ್ಯಕ್ತವಾಗಿತ್ತು. ದರೋಡೆಗೊಳಗಾಗಿದ್ದ ಫೋಟೋಗ್ರಾಫರ್ ಮಲ್ಲಿಕಾರ್ಜುನ್ ಅವರಿಂದ ದೂರು ಪಡೆದ ಜ್ಞಾನ ಭಾರತಿ ಠಾಣೆ ಪೊಲೀಸರು, ಸಿಸಿಟಿವಿಯಲ್ಲಿ ಸೆರೆಯಾಗಿದ್ದ ಸ್ಪಷ್ಟ ದೃಶ್ಯಾವಳಿಗಳ ಆಧಾರದ ಮೇಲೆ ಐವರೂ ಆರೋಪಿಗಳನ್ನು ಬಂಧಿಸಿರುವುದಾಗಿ ತಿಳಿಸಿದ್ದಾರೆ. ಕಳ್ಳರೆಂಬ ಅನುಮಾನಕ್ಕೆ ಅಮಾಯಕರ ಮೇಲೆ ಹಲ್ಲೆ, ಪ್ರಕರಣ ದಾಖಲು ಕಳ್ಳರು ಎಂಬ ಅನುಮಾನದಿಂದ ಅಮಾಯಕರಿಬ್ಬರ ಮೇಲೆ ಸ್ಥಳೀಯರು ಹಲ್ಲೆ ನಡೆಸಿರುವ ಘಟನೆ ಸಿಟಿ ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿದೆ. ಅಕ್ಟೋಬರ್ 19ರಂದು ಸಂಜೆ ಆರ್.ಟಿ. ಸ್ಟ್ರೀಟ್ ಬಳಿ ಗಲಾಟೆ ನಡೆದಿದ್ದು, ಶಾಹಿದ್ ಹಾಗೂ ಫರ್ದೀನ್ ಪಾಷಾ ಎಂಬ ಯುವಕರ ಮೇಲೆ ಸ್ಥಳೀಯರು ಹಲ್ಲೆ ನಡೆಸಿದ್ದಾರೆ. ವಾಹನಕ್ಕೆ ಅಡ್ಡ ಬಂದ ವಿಚಾರಕ್ಕೆ ಶಾಹೀನ್ ಹಾಗೂ ಫರ್ದೀನ್ ಪಾಷಾ ನಡುವೆ ರಸ್ತೆಯಲ್ಲಿ ವಾಗ್ವಾದವುಂಟಾಗಿದೆ. ಇಬ್ಬರು ಜಗಳವಾಗುತ್ತಿದ್ದ ವೇಳೆ ಅಲ್ಲಿದ್ದ ಅಪರಿಚಿತ ವ್ಯಕ್ತಿಯೊಬ್ಬ ಕಳ್ಳರು ಬಂದಿದ್ದಾರೆ ಎಂದು ಕೂಗಾಡಿ, ಯುವಕರನ್ನು ಕಳ್ಳರೆಂದು ಬಿಂಬಿಸಿದ್ದಾನೆ. ಇದನ್ನು ನಂಬಿದ ಸ್ಥಳೀಯರು ಕೂಡಲೇ ಶಾಹಿದ್ ಹಾಗೂ ಫರ್ದೀನ್ ಪಾಷಾನನ್ನು ಅಟ್ಟಾಡಿಸಿ ಮನಬಂದಂತೆ ಹಲ್ಲೆ ನಡೆಸಿದ್ದಾರೆ.

ಈ ವೇಳೆ ಶಾಹಿದ್ ಮೇಲೆ ಗಂಭೀರ ಹಲ್ಲೆ ನಡೆಸಲಾಗಿದ್ದು, ಅವರ ಮೊಬೈಲ್ ಫೋನ್‌ನ್ನು ಸಹ ಒಡೆದು ಹಾಕಲಾಗಿದೆ. ಘಟನೆಯ ದೃಶ್ಯಾವಳಿಗಳು ಸಮೀಪದ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ಹಲ್ಲೆಗೊಳಗಾದ ಶಾಹಿದ್ ಅವರು ಸಿಟಿ ಮಾರ್ಕೆಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಹೊಟ್ಟೆಪಾಡಿಗಾಗಿ ನಗರಗಳತ್ತ ಮುಖ ಮಾಡಿದ ಕುಟುಂಬಗಳು..!

ಬೆಳೆ ನಷ್ಟ ಮತ್ತು ಆದಾಯದ ಕೊರತೆಯಿಂದ ಬದುಕು ನಡೆಸುವುದೇ ಕಷ್ಟವಾಗಿರುವ ಹಿನ್ನೆಲೆಯಲ್ಲಿ, ವಿವಿಧ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ತಲೆದೋರಿರುವ ತೀವ್ರ ಬರಗಾಲದ ಪರಿಸ್ಥಿತಿ ಗ್ರಾಮೀಣ ಭಾಗದ ಜನರ ಜೀವನವನ್ನು ತಲ್ಲಣಗೊಳಿಸಿದೆ. ಹಳ್ಳಿಗಳಲ್ಲಿ ಉದ್ಯೋಗ ಮತ್ತು ಕುಡಿಯುವ ನೀರಿಲ್ಲದೆ ಕಂಗಾಲಾದ ನೂರಾರು ಕುಟುಂಬಗಳು ಮನೆಗಳಿಗೆ ಬೀಗ ಹಾಕಿ, ಜೀವನೋಪಾಯಕ್ಕಾಗಿ ಬೆಂಗಳೂರು ಸೇರಿದಂತೆ ವಿವಿಧ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

1 ಕುಡಿಯುವ ನೀರಿಗೂ ಹಾಹಾಕಾರ ಎದುರಾಗಿದೆ
2 ಬದುಕು ನಡೆಸುವುದೇ ಕಷ್ಟವಾಗಿರುವ ಹಿನ್ನೆಲೆ
3 ಪರಿಸ್ಥಿತಿ 1972ರ ಬರಗಾಲಕ್ಕಿಂತಲೂ ಭೀಕರವಾಗಿದೆ

ಯಾದಗಿರಿ ಜಿಲ್ಲೆಯ ಪುಟ್ಪಕ್ ಗ್ರಾಮದಲ್ಲಿ ತೀವ್ರ ಬರದಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದು, ಕುಡಿಯುವ ನೀರಿಗೂ ಹಾಹಾಕಾರ ಎದುರಾಗಿದೆ. ಬೆಳೆ ನಷ್ಟ ಮತ್ತು ಆದಾಯದ ಕೊರತೆಯಿಂದ ಬದುಕು ನಡೆಸುವುದೇ ಕಷ್ಟವಾಗಿರುವ ಹಿನ್ನೆಲೆಯಲ್ಲಿ, ಗ್ರಾಮಸ್ಥರು ಉದ್ಯೋಗ ಅರಸಿ ಬೆಂಗಳೂರು, ಹೈದರಾಬಾದ್, ಮುಂಬೈ ಸೇರಿದಂತೆ ವಿವಿಧ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದರಿಂದ ಗ್ರಾಮದಲ್ಲಿ ವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಉಳಿಯುವಂತಾಗಿದೆ. ಗ್ರಾಮದಲ್ಲಿರುವ ನಾಲ್ಕು ಕೊಳವೆಬಾವಿಗಳ ಪೈಕಿ ಈಗಾಗಲೇ ಒಂದು ಬತ್ತಿಹೋಗಿದೆ. ಮುಂದಿನ ಒಂದು ಅಥವಾ ಎರಡು ತಿಂಗಳಲ್ಲಿ ಉಳಿದ ಕೊಳವೆಬಾವಿಗಳಲ್ಲೂ ನೀರು ಸಿಗದಂತಾಗಬಹುದು ಎಂಬ ಆತಂಕ ಗ್ರಾಮಸ್ಥರನ್ನು ಕಾಡುತ್ತಿದೆ.70 ವರ್ಷದ ಮರೇಪ್ಪ ಅವರು ಮಾತನಾಡಿ, ಗ್ರಾಮದ ಪರಿಸ್ಥಿತಿ 1972ರ ಬರಗಾಲಕ್ಕಿಂತಲೂ ಭೀಕರವಾಗಿದೆ. ಇದು 1972ರ ಬರಗಾಲಕ್ಕಿಂತಲೂ ಮೀರಿದ ಸಂಕಷ್ಟ ಎಂದು ಅವರು ಸ್ಥಳೀಯ ಭಾಷೆಯಲ್ಲಿ ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ. ಸುತ್ತಮುತ್ತಲಿನ ಗ್ರಾಮಗಳೂ ಬರದಿಂದ ತತ್ತರಿಸಿರುವುದರಿಂದ ಬೇರೆಡೆ ನೀರು ಹುಡುಕುವುದೂ ಕಷ್ಟವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಪುಟ್ಪಕ್ ಗ್ರಾಮ ಪಂಚಾಯಿತಿಯ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭೀಮರಾಯ ಅವರು ಮಾತನಾಡಿ, ಗ್ರಾಮದ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದಿರುವುದಾಗಿ ತಿಳಿಸಿದ್ದಾರೆ. ಗ್ರಾಮದ ಬಹುತೇಕ ಕುಟುಂಬಗಳು ಎರಡು ಅಥವಾ ಮೂರು ಎಕರೆಗಳಷ್ಟು ಸಣ್ಣ ಪ್ರಮಾಣದ ಜಮೀನು ಹೊಂದಿವೆ. ಕೃಷಿಯಿಂದ ಬರುವ ಆದಾಯ ಅಷ್ಟಕ್ಕಷ್ಟೇ ಇರುವುದರಿಂದ ಅನೇಕರು ಉದ್ಯೋಗ ಅರಸಿ ಹೈದರಾಬಾದ್, ಬೆಂಗಳೂರು ಮತ್ತು ಮುಂಬೈ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಬರದ ತೀವ್ರತೆ ಹೆಚ್ಚಾಗಿದೆ ಎಂದು ಗ್ರಾಮಸ್ಥರು ಹೇಳಿದ್ದಾರೆ. ಪುಟ್ಪಕ್ ಗ್ರಾಮದಲ್ಲಿ ಸುಮಾರು 5,000 ಮತದಾರರಿದ್ದು, ಅವರಲ್ಲಿ ಸುಮಾರು 3,500 ಮಂದಿ ಉದ್ಯೋಗಕ್ಕಾಗಿ ವಲಸೆ ಹೋಗಿದ್ದಾರೆ. ಇದರಿಂದ ವಯಸ್ಸಾದ ತಂದೆ-ತಾಯಿಗಳು ಹಾಗೂ ಶಾಲೆಗೆ ಹೋಗುವ ಮಕ್ಕಳು ಗ್ರಾಮದಲ್ಲೇ ಉಳಿಯುವಂತಾಗಿದೆ. ಕೆಲವು ಕುಟುಂಬಗಳು ಮಕ್ಕಳನ್ನೂ ತಮ್ಮೊಂದಿಗೆ ಕರೆದುಕೊಂಡು ಗ್ರಾಮ ತೊರೆದಿವೆ. ಪುಟ್ಪಕ್ ಗ್ರಾಮದಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿರುವ ಪುಟ್ಪಾಕ್ ತಾಂಡಾ (ಜವಾಹರನಗರ)ದಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ. ಇಲ್ಲಿನ ಶೇ.70ರಷ್ಟು ವಯಸ್ಕರು ಉದ್ಯೋಗ ಹುಡುಕಿಕೊಂಡು ಬೇರೆಡೆಗೆ ವಲಸೆ ಹೋಗಿದ್ದಾರೆ.

ಉದಯವಾಹಿನಿ ಚಿತ್ರ

> ನನ್ನ ಹಿರಿಯ ಮಗ ಪತ್ನಿಯೊಂದಿಗೆ ಮುಂಬೈಗೆ ಕೂಲಿ ಕೆಲಸಕ್ಕಾಗಿ ಹೋಗಿದ್ದಾನೆ. ಆದರೆ, ಆತ ನಮಗೆ ಹಣ ಕಳುಹಿಸುವುದಿಲ್ಲ. ಕಿರಿಯ ಮಗನಿಗೆ ಕೇವಲ 14 ವರ್ಷ. ಅವನು ಶಾಲೆಗೆ ಹೋಗುತ್ತಾನೆ. ಜತೆಗೆ, ಕುಟುಂಬದ ಖರ್ಚು ನಿಭಾಯಿಸಲು ಸಣ್ಣಪುಟ್ಟ ಕೆಲಸಗಳನ್ನೂ ಮಾಡುತ್ತಾನೆ ಎಂದು ತಮ್ಮ ಸಂಕಷ್ಟವನ್ನು ವಿವರಿಸಿದ್ದಾರೆ.
> - ಪಾರ್ವತಮ್ಮ ಗುರ್ರಾಳ್

> ಮುಂದಿನ 15 ದಿನಗಳಲ್ಲಿ ಮಳೆಯಾದರೆ ಶೇ.30ರಿಂದ 40ರಷ್ಟು ಇಳುವರಿ ದೊರೆಯುವ ಸಾಧ್ಯತೆಯಿದೆ. ಮಳೆಯಾಗದಿದ್ದರೆ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂದು ಅವರು ಹೇಳಿದ್ದಾರೆ. ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿಕೊಂಡಿರುವ ರೈತರಿಗೆ ವಿಮಾ ಪರಿಹಾರ ದೊರೆಯಲಿದೆ ಎಂದೂ ತಿಳಿಸಿದ್ದಾರೆ.-ಕೃಷಿ ಅಧಿಕಾರಿ ಮಲ್ಲಿಕಾರ್ಜುನ

ಬೈಕ್ ಅಪಘಾತ:ಕಾರು ನಿಲ್ಲಿಸಿ ನೆರವಿಗೆ ಧಾವಿಸಿದ ಶಾಸಕ ಹೆಚ್.ಟಿ.ಮಂಜು

• **ಉದಯವಾಹಿನಿ, ಕೆ.ಆರ್.ಪೇಟೆ**

ದ್ವಿಚಕ್ರ ವಾಹನ ಸವಾರರೊಬ್ಬರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ರಸ್ತೆಯಲ್ಲಿ ನರಳುತ್ತಿದ್ದನ್ನು ಗಮನಿಸಿದ ಶಾಸಕ ಹೆಚ್.ಟಿ.ಮಂಜು ಅವರು ತಕ್ಷಣ ನೆರವಿಗೆ ಧಾವಿಸಿ ಮಾನವೀಯತೆ ಮೆರೆದಿದ್ದಾರೆ.

ತಾಲ್ಲೂಕಿನ ಕಸಬಾ ಹೋಬಳಿಯ ಹಿರಿಕಳಲೆ ಗ್ರಾಮದ ಸಮೀಪ ಆರು ಗಂಟೆ ಸಮಯದಲ್ಲಿ ಶಾಸಕ ಹೆಚ್.ಟಿ.ಮಂಜು ಅವರು ಕ್ಷೇತ್ರದ ಪ್ರವಾಸ ಮುಗಿಸಿ ಅದೇ ಮಾರ್ಗವಾಗಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಗಮನೇನಹಳ್ಳಿ ಗ್ರಾಮದ ವ್ಯಕ್ತಿಯೊಬ್ಬರು ಆಕಸ್ಮಿಕ ಅಪಘಾತಕ್ಕೀಡಾಗಿ ಗಾಯಗೊಂಡು ರಸ್ತೆ ಬದಿಯಲ್ಲಿ ನರಳಾಡುತ್ತಿದ್ದನ್ನು ಗಮನಿಸಿದ್ದಾರೆ. ತಕ್ಷಣವೇ ತಮ್ಮ ಕಾರಿನಿಂದ ಕೆಳಗಿಳಿದ ಶಾಸಕರು ಗಾಯಾಳುವಿನ ಪರಿಸ್ಥಿತಿಯನ್ನು ಗಮನಿಸಿ ಆತನಿಗೆ ಅಗತ್ಯ ನೆರವು ನೀಡಲು ಮುಂದಾಗಿದ್ದು ತಕ್ಷಣವೇ ತಮಗಾಗಿ ಆಂಬ್ಯುಲೆನ್ಸ್‌ಗೆ ಕರೆ ಮಾಡಿ ಗಾಯಗೊಂಡ ವ್ಯಕ್ತಿಯನ್ನು ತುರ್ತಾಗಿ ಆಸ್ಪತ್ರೆಗೆ ಸಾಗಿಸಲು ನೆರವು ನೀಡಿದ್ದಾರೆ.

ಅಪಘಾತದ ಸಂದರ್ಭದಲ್ಲಿ ಗಾಯಾಳುವಿಗೆ ಸಕಾಲದಲ್ಲಿ ನೆರವು ದೊರಕಿಸುವ ನಿಟ್ಟಿನಲ್ಲಿ ಶಾಸಕರು ತೋರಿದ ಕಾಳಜಿಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಾಡುಪ್ರಾಣಿ ಬೇಟೆಗೆ ಯತ್ನ: ಐವರ ಸೆರೆ

• **ಉದಯವಾಹಿನಿ, ಬಂಗಾರಪೇಟೆ**

ತಾಲ್ಲೂಕಿನ ಕಾಮಸಮುದ್ರ ಹಾಗೂ ಬೂದಿಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಾಡಬಂದೂಕು ಬಳಸಿ ಕಾಡುಪ್ರಾಣಿಗಳ ಬೇಟೆಯಾಡಲು ಯತ್ನಿಸುತ್ತಿದ್ದ ಐವರನ್ನು ಪೊಲೀಸರು ಬಂಧಿಸಿದ್ದಾರೆ. ಇದೇ ವೇಳೆ ಪರವಾನಗಿ ಇಲ್ಲದೆ ನಾಡಬಂದೂಕು ತಯಾರಿಸಿ ಮಾರಾಟ ಮಾಡುತ್ತಿದ್ದ ಜಾಲದ ಮೇಲೂ ದಾಳಿ ನಡೆಸಿ, ಶಸ್ತ್ರಾಸ್ತ್ರ ತಯಾರಿಕಾ ಸಾಮಗ್ರಿಗಳನ್ನು ಜಪ್ತಿ ಮಾಡಿ, ಒಬ್ಬರನ್ನು ವಶಕ್ಕೆ ಪಡೆಯಲಾಗಿದೆ.

ತಾಲ್ಲೂಕಿನ ಗರುಡಕೆಂಪನಹಳ್ಳಿ ಗ್ರಾಮದ ನಿವಾಸಿಗಳಾದ ಬಾಲಾಜಿ (26), ಚಂದ್ರಪ್ಪ (32), ಚಂದ್ರಶೇಖರ (28), ಉಮಾಪತಿ (29) ಹಾಗೂ ವೆಂಕಟಪ್ಪ (55) ಬಂಧಿತ ಆರೋಪಿಗಳು. ಜೊತೆಗೆ ಅಕ್ರಮವಾಗಿ ಬಂದೂಕು ತಯಾರಿಸುತ್ತಿದ್ದ ಪಲಮಡುಗು ಗ್ರಾಮದ ಪ್ರಕಾಶ್ ಆರ್ (31) ಅವರನ್ನು ವಶಕ್ಕೆ ಪಡೆದಿದ್ದು, ಮತ್ತೊಬ್ಬ ಆರೋಪಿ ರಾಮಾಂಜಾನಿ ತಲೆ ಮರೆಸಿಕೊಂಡಿದ್ದಾರೆ.

ವಶಕ್ಕೆ ಪಡೆದ ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಅ.21ರಂದು ಬೆಳಗ್ಗೆ 6.20ರ ವೇಳೆಗೆ ಕಾಮಸಮುದ್ರ ಸಠಪದ್ಧಿನ ಬಲಮದ ರಸ್ತೆಯ ಸಮೀಪದಿರುವ ಅರಣ್ಯ ಪ್ರದೇಶದಲ್ಲಿ ಕೆಲವರು ಬಂದೂಕು ಹಿಡಿದುಕೊಂಡು ವನ್ಯಜೀವಿಗಳ ಬೇಟೆಗೆ ಸಂಚು ಹೂಡಿರುವ ಬಗ್ಗೆ ಜಿಲ್ಲಾ ಪೊಲೀಸ್ ಕಚೇರಿಯ ವಿಶೇಷ ತಂಡಕ್ಕೆ ಖಚಿತ ಮಾಹಿತಿ ಲಭ್ಯವಾಗಿತ್ತು.

ಇದರಿಂದ ತಕ್ಷಣವೇ ಕಾರ್ಯಪ್ರವೃತ್ತರಾದ ತಂಡದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಅನುಮಾನಾಸ್ಪದವಾಗಿ ಬಂದೂಕು ಬ್ಯಾಗ್‌ಗಳೊಂದಿಗೆ ಓಡಾಡುತ್ತಿದ್ದ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಆರೋಪಿಗಳಿಂದ ಮೂರು ಚಾಲ್ತಿಯಲ್ಲಿದ್ದ ನಾಡಬಂದೂಕು, ಗನ್‌ಪೌಡರ್, ಸೀಸದ ಗುಂಡು, ಟಾರ್ಚ್ ಲೈಟ್ ಹಾಗೂ ಬೇಟೆಗೆ ಬಳಸುವ ಇತರೆ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ.

ಮಿನಿ ನ್ಯೂಸ್

ಅ.25ಕ್ಕೆ ರಾಜ್ಯ ಮಟ್ಟದ ಒಕ್ಕಲಿಗರ ವಧು-ವರರ ವೇದಿಕೆಯ ಸಮಾವೇಶ

• **ಉದಯವಾಹಿನಿ, ಕೆ.ಆರ್.ನಗರ**

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲ್ಲೂಕು ಒಕ್ಕಲಿಗರ ಸಂಘ ಹಾಗೂ ಟೌನ್ ಒಕ್ಕಲಿಗ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಧು-ವರರ ಸಮಾವೇಶ ಕಾರ್ಯಕ್ರಮವನ್ನು ಅ.25ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಕೆ.ಮಧುಚಂದ್ರ ಹೇಳಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಕರೆಯಲಾದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು ನೇಗಿಲಯೋಗಿ ಸೇವಾ ಟ್ರಸ್ಟ್ ಮೈಸೂರು ನಗರದಲ್ಲಿ ಕೇಂದ್ರ ಸ್ಥಾನ ಹೊಂದಿದ್ದು ಎಲ್ಲಾ ತಾಲ್ಲೂಕುಗಳಲ್ಲಿ ಶಾಖೆಯನ್ನು ಆರಂಭಿಸಿ ಒಕ್ಕಲಿಗ ಸಮಾಜ ಮೌಢ್ಯತೆಯಿಂದ ದೂರ ಬಂದು ಆಧುನಿಕ ಜಗತ್ತಿನಲ್ಲಿ ಸ್ಪರ್ಧೆ ಆದ ಸೇವೆ ನೀಡುವಂತೆ ಟ್ರಸ್ಟ್ ಪ್ರೇರಣೆ ಮಾಡುತ್ತಿದೆ ಎಂದರು.

ರಾಜ್ಯ ಮಟ್ಟದ ವಧು-ವರರ ವೇದಿಕೆಯ ಸಮಾವೇಶ ಮಾಡುವ ಮೂಲಕ ಕಂಕಣ ಸಂಬಂಧ ಬೆಸೆಯುವುದರ ಜತೆಗೆ ಸಮಾಜವನ್ನು ಸದೃಢವಾಗಿ ಕೊಂಡೊಯ್ಯುವ ಕೆಲಸವನ್ನು ಟ್ರಸ್ಟ್ ಮಾಡುತ್ತಿದ್ದು ಇದಕ್ಕೆ ಒಕ್ಕಲಿಗ ಸಮಾಜದ ಬಂಧುಗಳು ಸಹಕಾರ ನೀಡಬೇಕು ಎಂದು ಕೋರಿದರು.

ವಧು-ವರರ ಸಮಾವೇಶ ಮಾಡಿ ಯುವಕ-ಯುವತಿರಿಗೆ ಕಂಕಣ ಭಾಗ್ಯ ದೊರಕಿಸಿಕೊಡುವ ಕೆಲಸ ಮಾಡುವುದಲ್ಲದೆ ಟ್ರಸ್ಟ್ ವತಿಯಿಂದ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ ಅಧ್ಯಕ್ಷ ಎಸ್.ಕೆ.ಮಧುಚಂದ್ರ ದೇಶ ಮತ್ತು ರಾಜ್ಯದ ಅಭಿವೃದ್ಧಿಗೂ ಟ್ರಸ್ಟ್ ತನ್ನದೇ ಆದ ಸಲಹೆ-ಸೂಚನೆ ನೀಡಲಾಗುತ್ತದೆ ಎಂದು ತಿಳಿಸಿದರು.

ಭೂಸ್ವಾಧೀನಕ್ಕೆ ಹಣದ ಅದಲು ಬದಲಿ ಭೂಮಿ ನೀಡಲು ರೈತರ ಒತ್ತಾಯ

ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತಿರುವುದರಿಂದ ಈ ಯೋಜನೆಯನ್ನು ನಾವು ಸ್ವಾಗತಿಸುತ್ತೇವೆ

• **ಉದಯವಾಹಿನಿ, ಹುಳಿಯಾರು**

1 ಸಮೀಕ್ಷೆಯಲ್ಲಿ ಭಾರೀ ಲೋಪ ಎಸಗಲಾಗಿದೆ

2 ವಿವರ ಕೈಬಿಟ್ಟು ಅನೇಕ ರೈತರಿಗೆ ಅನ್ಯಾಯ

3 ಜಾಗ ಬಿಟ್ಟು ಕೊಡಿ, ಒಳ್ಳೆ ಬೆಲೆ ಕೊಡುತ್ತೇವೆ

ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಯ ನಿಮಿತ್ತ ಹುಳಿಯಾರು ಭಾಗದಲ್ಲಿ ಕೈಗೊಳ್ಳಲಾಗಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳ ಗೊಂದಲದ ಹಾಗೂ ಬೇಜವಾಬ್ದಾರಿ ಧೋರಣೆಯಿಂದ ರೈತರಿಗೆ ತೀವ್ರ ಸ್ವರೂಪದ ಅನ್ಯಾಯವಾಗಿದೆ ಎಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾವುದೇ ಮುನ್ಸೂಚನೆ ಅಥವಾ ಸಮರ್ಪಕ ಮಾಹಿತಿ ನೀಡದೆ, ರೈತರ ತೋಟಗಳಲ್ಲಿನ ಮರ-ಗಿಡಗಳು ಹಾಗೂ ಬೆಳೆಗಳ ಸಮೀಕ್ಷೆಯಲ್ಲಿ ಭಾರೀ ಲೋಪ ಎಸಗಲಾಗಿದೆ ಎಂದು ಕೃಷಿಕ ಸಮಾಜದ ತಾಲ್ಲೂಕು ಉಪಾಧ್ಯಕ್ಷ ಎಂ.ಸಿ.ಬಸವರಾಜು ದೂರಿದ್ದಾರೆ.

ಭದ್ರಾ ಮೇಲ್ದಂಡೆ ಯೋಜನೆಗೆ ಮರಾಠಿಪಾಳ್ಯ, ಭಟ್ಟರಹಳ್ಳಿ ಜಮೀನು ಸ್ವಾದೀನಕ್ಕೆ ಒಳಪಡುತ್ತದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಕಲ್ಪಿಸುತ್ತಿರುವುದರಿಂದ ಈ ಯೋಜನೆಯನ್ನು ನಾವು ಸ್ವಾಗತಿಸುತ್ತೇವೆ. ಅಲ್ಲದೆ ಈ ಯೋಜನೆಗೆ ಭೂಮಿ ಬಿಟ್ಟು ಕೊಡಲು ನಾವು ಸಿದ್ದರಿದ್ದೇವೆ. ಆದರೆ ಭೂಮಿಯ ಬೆಲೆ ಹಾಗೂ ಮರಗಳಿಗೆ ಪರಿಹಾರ ನಿಗದಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿದರೆ ಮಾತ್ರ, ಎಂದು ತಿಳಿಸಿದ್ದಾರೆ.

ಏಳೆಂಟು ವರ್ಷಗಳ ಹಿಂದೆ ಜಮೀನು ಸರ್ವೆಗೆ ಬಂದಿದ್ದಾಗ ಜಮೀನಿನಲ್ಲಿ ದಾಳಿಂಬೆ, ಅಡಿಕೆ, ತೆಂಗು, ನೇರಳೆ, ಮಾವು, ನಿಂಬೆ, ಸೀಬೆ, ಬಾಳೆ ಸೇರಿದಂತೆ ಅನೇಕ ಗಿಡಗಳು ಇದ್ದವು. ಅಧಿಕಾರಿಗಳು ಮರಗಳ ಸಂಖ್ಯೆಯನ್ನು ಕಡಿಮೆ ಬರೆದು, ಬೋರ್‌ವೆಲ್‌ಗಳು ಮತ್ತು ಪೈಪ್‌ಲೈನ್‌ಗಳ ವಿವರಗಳನ್ನು ಕೈಬಿಟ್ಟು ಅನೇಕ ರೈತರಿಗೆ ಅನ್ಯಾಯ ಮಾಡಿದ್ದಾರೆ. ಅಲ್ಲದೆ ಪರಿಹಾರದ ಹಣವನ್ನೂ ಸಹ ಅವೈಜ್ಞಾನಿಕವಾಗಿ ನಮೂದಿಸಿದ್ದಾರೆ. ಒಂದು ಗುಂಟೆ ಜಮೀನಿಗೆ ಮಾರುಕಟ್ಟೆಯಲ್ಲಿ 60 ರಿಂದ 70 ಸಾವಿರ ಇದ್ದು ಇವರು ಮಾತ್ರ ಏಳೆಂಟು ಸಾವಿರ ಪರಿಹಾರ ಘೋಷಿಸಿದ್ದಾರೆ. ಹಾಗಾಗಿ ನಮಗೆ ಪರಿಹಾರದ ಹಣಕ್ಕೆ ಬದಲಾಗಿ ನಾವು ಕಳೆದುಕೊಂಡ ಭೂಮಿಯಷ್ಟೆ ಈಗಿರುವ ಹೈವೆ ರಸ್ತೆಗೆ ಸಮೀಪದಲ್ಲೇ ಬದಲಿ ಭೂಮಿ ಕೊಡಲಿ ಎಂದು ಒತ್ತಾಯಿಸಿದ್ದಾರೆ.

ರೈತ ರಘುಸ್ವಾಮಿ ಡಿ.ಎಸ್. ಮಾತನಾಡಿ, ಸರ್ಕಾರಿ ಜಮೀನಿನಲ್ಲಿ ಭದ್ರಾ ಕಾಮಗಾರಿ ನಡೆಯುವಾಗ ''ರೈತರಿಗೆ ಅನುಕೂಲವಾಗಲಿ, ಜಾಗ ಬಿಟ್ಟು ಕೊಡಿ, ನಾವೇ ಒಳ್ಳೆ ಬೆಲೆ ಕೊಡುತ್ತೇವೆ'' ಎಂದು ಅಧಿಕಾರಿಗಳು ಭರವಸೆ ನೀಡಿ ತಮ್ಮ ಒಡೆತನದ 1 ಎಕರೆ 66 ಕುಂಟೆ ಜಮೀನಲ್ಲಿನ ಮಾವು, 50 ಹುಣಸೆ ಮರಗಳು, 400 ಅಡಿಕೆ ಮರಗಳು, 50 ತೇಗ ಹಾಗೂ 120 ತೆಂಗಿನ ಮರಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ಜೆಸಿಬಿ ಬಳಸಿ ನಾಶಪಡಿಸಿದರು. ಅಲ್ಲದೆ ಭೂಮಿಯ ಮಣ್ಣು ಸಹ ಹೊಡೆದುಕೊಂಡರು.

ಆದರೆ 19-1 ನಕ್ಷೆಯಲ್ಲಿ ಈ ಯಾವ ಮರಗಳ ಉಲ್ಲೇಖವನ್ನೂ ಮಾಡದೆ ಇಂಜಿನಿಯರ್ ಶಿವಸ್ವಾಮಿ ಅವರು ಅನ್ಯಾಯವೆಸಗಿದ್ದಾರೆ ಎಂದು ಆರೋಪಿಪಿದರಲ್ಲದೆ ಖುದ್ದಾಗಿ ಬಂದು ನಷ್ಟವಾಗಿರುವ ಮರಗಳನ್ನು ಮತ್ತು ಜಮೀನನ್ನು ಸರಿಪಡಿಸಿಕೊಡಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಉದಯವಾಹಿನಿ ಚಿತ್ರ

ಅಡಿಕೆ ಗಿಡ ಮತ್ತು ಇತರೆ ತೆಂಗಿನ ಮರಗಳಿಗೆ ಕೇವಲ 2,000 ದಿಂದ 3,000 ರೂ. ನೀಡಿ ಕೈ ತೊಳೆದುಕೊಳ್ಳಲಾಗಿದೆ. 30-40 ವರ್ಷಗಳ ಕಾಲ ಬೆಳೆದು ಉತ್ತಮ ಆದಾಯ ತರುವ ಫಲವತ್ತಾದ ಮರಗಳಿಗೆ ಇಷ್ಟು ಕಡಿಮೆ ಬೆಲೆ ನಿಗದಿ ಮಾಡಿರುವುದು ಸರಿಯಲ್ಲ ಎಂದಿದ್ದಾರೆ. ಮರಾಠಿಪಾಳ್ಯದ ಸಿದ್ದೇಶ್

ಇಂತಹ ತಾಂತ್ರಿಕ ಹಾಗೂ ಗೊಂದಲಮಯ ಅಳತೆಯಿಂದಾಗಿ ಅಧಿಕಾರಿಗಳು ಬೇರೆ ಯಾರಿಗೋ ನೋಟಿಸ್ ನೀಡುತ್ತಿದ್ದಾರೆ. ಆದರೆ ನಿಜವಾದ ಜಮೀನು ಹೊಂದಿರುವ ಸ್ಥಳೀಯ ರೈತರಿಗೆ ಯಾವುದೇ ನೋಟಿಸ್ ಸಿಕ್ಕಿಲ್ಲ. ಇದರಿಂದ ಅರ್ಹ ರೈತರು ಪರಿಹಾರದಿಂದ ವಂಚಿತರಾಗುತ್ತಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ.

- ರೈತ ಚಂದ್ರಶೇಖರ್

ಒಳಮೀಸಲಾತಿ ಸಂಪೂರ್ಣ ಜಾರಿಗೆ ಆಗ್ರಹ : ಸಚಿವ ಕೆ.ಎಚ್. ಮುನಿಯಪ್ಪಗೆ ದಲಿತ ಸಂಘರ್ಷ ಸಮಿತಿಯಿಂದ ಮನವಿ

• **ಉದಯವಾಹಿನಿ, ಗುಂಡ್ಲುಪೇಟೆ**

ಉದ್ಯೋಗ ಮತ್ತು ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಒಳಮೀಸಲಾತಿಯನ್ನು ಸಂಪೂರ್ಣವಾಗಿ ಜಾರಿಗೊಳಿಸಿ, ಮಾದಿಗ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ಬಣದ ವತಿಯಿಂದ ಸಮಾಜ ಕಲ್ಯಾಣ ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು.

ಉದ್ಯೋಗ ಮತ್ತು ಶಿಕ್ಷಣದಲ್ಲಿ ಪ್ರವರ್ಗ ಎ ಅಡಿಯಲ್ಲಿ ಮಾದಿಗ ಸಂಬಂಧಿತ ಜಾತಿಗಳಿಗೆ ಶೇ. 5.25 ರಷ್ಟು ಒಳಮೀಸಲಾತಿ ಜಾರಿಗೊಳಿಸಲಾಗಿದ್ದರೂ, ಮೂರುಕ್ಕಿಂತ ಕಡಿಮೆ ಹುದ್ದೆಗಳು ಬಂದ ಸಂದರ್ಭದಲ್ಲಿ ಎಸ್‌ಸಿ ಸಾಮಾನ್ಯ ಎಂದು ಪರಿಗಣಿಸುವುದರಿಂದ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಹೀಗಾಗಿ ಎಸ್‌ಸಿ ಸಾಮಾನ್ಯ ವರ್ಗೀಕರಣವನ್ನು ತೆಗೆದುಹಾಕಿ, ಶೇ. 5.25 ರ ಒಳಮೀಸಲಾತಿ ವ್ಯಾಪ್ತಿಯಲ್ಲೇ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಮನವಿ ಮಾಡಿದರು.

ಉದಯವಾಹಿನಿ ಚಿತ್ರ

ಇದೇ ವೇಳೆ ಬ್ಯಾಕ್‌ಲಾಗ್ ಹುದ್ದೆಗಳು, ಹೊರಗುತ್ತಿಗೆ ಹಾಗೂ ನೇರ ನೇಮಕಾತಿಗಳಲ್ಲಿಯೂ ಒಳಮೀಸಲಾತಿ ಅನ್ವಯಿಸಬೇಕು. ಎಸ್‌ಸಿ/ಎಸ್‌ಪಿ ಯೋಜನೆಗಳ ಅನುಷ್ಠಾನದಲ್ಲಿ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿಯೂ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ಸಾಮಾಜಿಕ ನ್ಯಾಯ ಒದಗಿಸಬೇಕು.

ಒಳಮೀಸಲಾತಿ ಜಾರಿಯಲ್ಲಿ ಯಾವುದೇ ತಾರತಮ್ಯಕ್ಕೆ ಅವಕಾಶ ನೀಡದೆ, ಅರ್ಹ ಸಮುದಾಯಗಳಿಗೆ ನ್ಯಾಯಯುತವಾಗಿ ಅವಕಾಶ ಕಲ್ಪಿಸಬೇಕೆಂದು ದಲಿತ ಸಂಘರ್ಷ ಸಮಿತಿ ಮುಖಂಡರು ಸಚಿವರನ್ನ ಒತ್ತಾಯಿಸಿದರು.

ಸಾವಿನಂಚಿನಲ್ಲಿದ್ದ ಮೂಕಜೀವಕ್ಕೆ ಮರುಜೀವ ನೀಡಿದ ಹನುಮ ಸೇವಾ ಸಮಿತಿ

• **ಉದಯವಾಹಿನಿ, ಗುಂಡ್ಲುಪೇಟೆ**

ರಸ್ತೆ ಅಪಘಾತದಲ್ಲಿ ಒಂದು ಕೋತಿ ಮೃತಪಟ್ಟಿದೆ, ಅದರ ಅಂತ್ಯಸಂಸ್ಕಾರ ಮಾಡಬೇಕೆಂದು ನಮಗೆ ಕರೆ ಬಂದಿತ್ತು. ಆ ಕರೆ ಸ್ವೀಕರಿಸಿ ಸ್ಥಳಕ್ಕೆ ಹೋದಾಗ ಕೋತಿಯ ಸ್ಥಿತಿಯನ್ನು ಕಂಡು ಅದು ಮೃತಪಟ್ಟಿರಬಹುದೆಂದು ಭಾವಿಸಿದೆವು. ಅಂತ್ಯಸಂಸ್ಕಾರ ಮಾಡಲು ಮುಂದಾದ ನಮಗೆ, ಆ ಮೂಕಜೀವದ ದೇಹದಲ್ಲಿ ಇನ್ನೂ ಸ್ವಲ್ಪ ಉಸಿರು ಉಳಿದಿರುವುದು ಗಮನಕ್ಕೆ ಬಂತು ಎಂದು ಸಾವಿನ ದವಡೆಯಲ್ಲಿದ್ದ ಮರಿಕೋತಿಯನ್ನ ರಕ್ಷಿಸಿದ ಹನುಮ ಸೇವಾ ಸಮಿತಿಯ ವಿಶು ಘಟನೆಯ ಮಾಹಿತಿ ಹಂಚಿಕೊಂಡರು.

ಸಾಯಿತೆಂದು ಭಾವಿಸಿದ ಜೀವದಲ್ಲಿ ಇನ್ನೂ ಬದುಕಿನ ಆಸೆ ಉಳಿದಿತ್ತು : ಆ ಕ್ಷಣದಲ್ಲಿ ಅಂತ್ಯಸಂಸ್ಕಾರದ ಆಲೋಚನೆ ಬದಿಗಿಟ್ಟು, ಆ ಜೀವವನ್ನು ಉಳಿಸಲೇಬೇಕೆಂಬ ಸಂಕಲ್ಪದೊಂದಿಗೆ ತಕ್ಷಣ ಚಿಕಿತ್ಸೆಗೆ ವ್ಯವಸ್ಥೆ ಮಾಡಲು ಮುಂದಾದೆವು. ಅಂದು ಭಾನುವಾರವಾಗಿದ್ದರಿಂದ ಪಶು ಆಸ್ಪತ್ರೆಯಲ್ಲಿ ವೈದ್ಯರು ಲಭ್ಯವಿರಲಿಲ್ಲ. ಆದರೂ, ಭರವಸೆ ಕಳೆದುಕೊಳ್ಳದೆ ಪಶು ಆಸ್ಪತ್ರೆಯ ವೈದ್ಯರ ಸಲಹೆಯಂತೆ ಔಷಧಿಗಳನ್ನು ತಂದು ಚಿಕಿತ್ಸೆ ನೀಡಿದೆವು. ಇಷ್ಟಕ್ಕೇ ನಮ್ಮ ಪ್ರಯತ್ನ ನಿಲ್ಲಲಿಲ್ಲ, ಸತತ ಹತ್ತು ದಿನಗಳ ಕಾಲ ಬೇಗೂರಿನ ಪಶು ಆಸ್ಪತ್ರೆಯಲ್ಲಿ ಆ ಕೋತಿಗೆ ಚಿಕಿತ್ಸೆ ಕೊಡಿಸಲಾಯಿತು. ಅದರ ಆರೋಗ್ಯ ಸುಧಾರಿಸಲಿ, ಮತ್ತೆ ಮೊದಲಿನಂತೆ ಓಡಾಡಲಿ ಎಂಬ ಆಶಯದೊಂದಿಗೆ ನಿರಂತರ ಆರೈಕೆ ಮಾಡಿದೆವು.ಇಂದು ಆ ಕೋತಿ ಸಂಪೂರ್ಣವಾಗಿ ಚೇತರಿಸಿಕೊಂಡು ಆರೋಗ್ಯದಿಂದಿರುವುದನ್ನು ಕಂಡಾಗ ಮನಸ್ಸು ತುಂಬಿ ಬರುತ್ತದೆ. ಆ ಮೂಕಜೀವ ಮತ್ತೆ ಬದುಕಿನತ್ತ ಮರಳಿರುವುದನ್ನು ನೋಡುವುದಕ್ಕಿಂತ ದೊಡ್ಡ ಸಂತೋಷ ಮತ್ತೊಂದಿಲ್ಲ. ನಾವು ಮಾಡಿದ ಪ್ರಯತ್ನಕ್ಕೆ ಭಗವಂತನ ಕೃಪೆಯೂ ಜೊತೆಗೂಡಿ, ಒಂದು ಅಮೂಲ್ಯ ಜೀವವನ್ನು ಉಳಿಸುವ ಸೌಭಾಗ್ಯ ನಮ್ಮದಾಯಿತು. ಕೆಲವೊಮ್ಮೆ ನಮ್ಮ ಕೈಯಿಂದ ನಡೆಯುವ ಪುಟ್ಟ ಸಹಾಯವೂ ಮತ್ತೊಂದು ಜೀವಕ್ಕೆ ಹೊಸ ಬದುಕನ್ನು ನೀಡಬಲ್ಲದು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಮಾತನಾಡಲು ಬಾರದ ಪ್ರಾಣಿಗಳಿಗೂ ನೋವಿದೆ, ಜೀವಿಸುವ ಆಸೆಯಿದೆ, ಪ್ರೀತಿ ಮತ್ತು ಆರೈಕೆಯ ಅಗತ್ಯವಿದೆ. ಅವುಗಳ ನೋವಿಗೆ ಸ್ಪಂದಿಸುವ ಹೃದಯ ನಮ್ಮಲ್ಲಿದ್ದರೆ, ಅದಕ್ಕಿಂತ ದೊಡ್ಡ ಮಾನವೀಯತೆ ಮತ್ತೊಂದಿಲ್ಲ. ಈ ಪುಣ್ಯ ಕಾರ್ಯದಲ್ಲಿ ನಮಗೆ ಮಾರ್ಗದರ್ಶನ ನೀಡಿ ಸಹಕರಿಸಿದ ಪಶು ಆಸ್ಪತ್ರೆಯ ವೈದ್ಯರಿಗೆ, ಕೋತಿಯನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡು ಪ್ರೀತಿಯಿಂದ ಆರೈಕೆ ಮಾಡಿದ ಶುಭ ಅಮ್ಮನವರಿಗೆ ಹಾಗೂ ಹಗಲಿರುಳು ಸೇವಾ ಮನೋಭಾವದಿಂದ ಕೈಜೋಡಿಸಿದ ಹನುಮ ಸೇವಾ ಸಮಿತಿಯ ಎಲ್ಲಾ ಕಾರ್ಯಕರ್ತರಿಗೆ ಹೃದಯಪೂರ್ವಕ ಧನ್ಯವಾದಗಳು. ನಿಮ್ಮೆಲ್ಲರ ಸಹಕಾರ ಮತ್ತು ಕಾಳಜಿಯಿಂದ ಒಂದು ಮೂಕಜೀವಕ್ಕೆ ಮರುಜೀವ ದೊರೆತಿದೆ. ನಮ್ಮ ಪಾಲಿಗೆ ಇದು ಕೇವಲ ಒಂದು ಕೋತಿಯ ಜೀವ ಉಳಿಸಿದ ಘಟನೆಯಲ್ಲ ಕರುಣೆ, ಪ್ರೀತಿ ಮತ್ತು ಮಾನವೀಯತೆ ಗೆದ್ದ ಕ್ಷಣವಾಗಿದೆ ಎಂದು ಹನುಮ ಸೇವಾ ಸಮಿತಿ ಯುವಕರು ಸಂತಸ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

ಗಂಧದಗುಡಿ ಫೌಂಡೇಶನ್, ಪಾಲಿಕೆ ಸಹಯೋಗದಲ್ಲಿ ಸ್ವಚ್ಛತಾ ಅಭಿಯಾನ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

92.7 ಬಿಗ್ ಎಫ್ ಎಂ, ಗಂಧದಗುಡಿ ಫೌಂಡೇಶನ್ (ರಿ.) ಹಾಗೂ ಮೈಸೂರು ಮಹಾನಗರ ಪಾಲಿಕೆಯ ಸಹಯೋಗದಲ್ಲಿ ಸ್ವಚ್ಛ ದಸರಾ 2026 ಕಾರ್ಯಕ್ರಮವನ್ನು ಮೈಸೂರಿನ ಕೋಟೆ ಆಂಜನೇಯ ದೇವಸ್ಥಾನದ ಆವರಣ ಹಾಗೂ ಮೈಸೂರು ಅರಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಯೋಜಿಸಲಾಯಿತು.

ದಸರಾ ಹಬ್ಬದ ಸಂದರ್ಭದಲ್ಲಿ ಮೈಸೂರಿನ ಸ್ವಚ್ಛತೆಯನ್ನು ಕಾಪಾಡುವುದು, ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಸ್ವಚ್ಛತಾ ಕಾರ್ಯಗಳಲ್ಲಿ ಸಾರ್ವಜನಿಕರ ಸಹಭಾಗಿತ್ವವನ್ನು ಹೆಚ್ಚಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು. ಸ್ವಚ್ಛತೆಯ ಕುರಿತು ಜನಜಾಗೃತಿ ಮೂಡಿಸುವ ಮೂಲಕ ಮೈಸೂರನ್ನು ಭಾರತದ ಸ್ವಚ್ಛ ನಗರಗಳ ಪಟ್ಟಿಯಲ್ಲಿ ಮತ್ತೆ ಪ್ರಥಮ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ನೇಪಥ್ಯ ರಂಗತಂಡದ ವತಿಯಿಂದ ಸ್ವಚ್ಛತೆಯ ಮಹತ್ವವನ್ನು ಸಾರುವ ಬೀದಿ ನಾಟಕವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ 92.7 ಬಿಗ್ ಎಫ್ ಎಂನ ಆರ್ ಜೆ ವಿಶ್ವಾಸ್, ಆರ್ ಜೆ ಪ್ರದೀಪ್ ನೆನಪಿನ ನಾವಿಕ, ಆರ್ ಜೆ ವಿಕ್ಕಿ, ಆರ್ ಜೆ ದುಷ್ಯಂತ್ ಹಾಗೂ ಆರ್ ಜೆ ಅಂಟೋ ಭಾಗವಹಿಸಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಕುರಿತು ಜಾಗೃತಿ ಮೂಡಿಸಿದರು. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಪಾರಂಪರಿಕ ಕಟ್ಟಡಗಳ ಆಯುಕ್ತರಾದ ಶಿವರಾಜ್ ಪಿ. ಹಾಗೂ ಕನ್ನಡ ಚಿತ್ರರಂಗದ ನಟ ವಸಿಷ್ಠ ಸಿಂಹ ಅವರು ಭಾಗವಹಿಸಿ ಸ್ವಚ್ಛ ದಸರಾ ಅಭಿಯಾನಕ್ಕೆ ಬೆಂಬಲ ನೀಡಿದರು.

ಧಮ್ಮ ಪಯಣಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ

• **ಉದಯವಾಹಿನಿ, ಕೊಳ್ಳೇಗಾಲ**

ಅಂತರರಾಷ್ಟ್ರೀಯ ಬೌದ್ಧ ಮಹಾ ಸಮ್ಮೇಳನ ಸಂಬಂಧ ಧಮ್ಮ ಪಯಣಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಪ್ರತಿಮೆಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಮಾಲಾರ್ಪಣೆ ಮಾಡುವ ಮೂಲಕ ಧಮ್ಮ ಪಯಣದ ಜೊತೆ ತೆರಳಿದರು.

ಈ ವೇಳೆ ಮಾತನಾಡಿದ ಶಾಸಕರು, ಇದೇ ತಿಂಗಳ 2425 ರಂದ ನಡೆಯುವ ಅಂತರರಾಷ್ಟ್ರೀಯ ಬೌದ್ಧ ಸಮ್ಮೇಳನದ ಕಾರ್ಯಕ್ರಮದ ಅಂಗವಾಗಿ ಇಂದು ಬೌದ್ಧ ಬಿಕ್ಕುಗಳು, ಉಪನ್ಯಾಕರು ಹಾಗೂ ವಿವಿಧ ಧರ್ಮಧ ಮುಖಂಡರು ಇತರರು ಧಮ್ಮ ಪಯಣವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಅದೇ ರೀತಿ ಬೌದ್ಧ ಮಹಾ ಸಮ್ಮೇಳನ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ಜನರು ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ನಂತರ ಅಂಬೇಡ್ಕರ್ ಪ್ರತಿಮೆಯಿಂದ ಶಾಸಕ ಎ.ಆರ್.ಕೃಷ್ಣಮೂರ್ತಿ ರವರ ನೇತೃತ್ವದಲ್ಲಿ ಹೊರಟ ಕಾಲ್ನಡಿಗೆ ಪಯಣ ಡಾ.ಅಂಬೇಡ್ಕರ್ ರಸ್ತೆ, ಡಾ.ರಾಜ ಕುಮಾರ ರಸ್ತೆ, ಡಾ.ವಿಷ್ಣುವರ್ಧನ್ ರಸ್ತೆ, ಅಚ್ಗಾಲ್ ರಸ್ತೆ, ಬಾಪುನಗರ, ಮುಡಿಗುಂಡ, ಉತ್ತಂಬಳ್ಳಿ ಮೂಲಕ ಚಾ.ನಗರದ ಅಂಬೇಡ್ಕರ್ ಕ್ರೀಡಾಂಗಣದವರೆಗೆ ಸಾಗಿತು. ಧಮ್ಮ ಪಯಣವನ್ನು ಅಲ್ಲಲ್ಲಿ ಗ್ರಾಮದ ಮುಖಂಡರು ಹಾರ ಸ್ವಾಗತ ಮಾಡಿದರು.

ದತ್ತಾತ್ರೇಯ ಮಂದಿರದಲ್ಲಿ ಲೋಕಕಲ್ಯಾಣಾರ್ಥ ಚಂಡಿಕಾಹೋಮ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ನಗರದ ಶ್ರೀ ದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟ್ ವತಿಯಿಂದ ನವರಾತ್ರಿ ಪ್ರಯುಕ್ತ ಲೋಕ ಕಲ್ಯಾಣಾರ್ಥ ಆಯೋಜಿಸಿದ್ದ ''ಚಂಡಿಕಾ ಹೋಮ ಅತ್ಯಂತ ಯಶಸ್ವಿಯಾಗಿ ನಡೆಯಿತು. ಜೀವನದ ಅಡೆತಡೆಗಳನ್ನು ನಿವಾರಿಸಲು, ಉತ್ತಮ ಆರೋಗ್ಯ, ಸಮೃದ್ಧಿ, ಶತ್ರು ವಿಜಯ ಹಾಗೂ ನಕಾರಾತ್ಮಕ ಶಕ್ತಿಗಳ ನಿವಾರಣೆಗಾಗಿ ಹಾಗೂ ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ, ಜೀವನ ದಲ್ಲಿ ಎದುರಾಗುವ ಆರ್ಥಿಕ ನಷ್ಟ ಹಾಗೂ ಕಷ್ಟಗಳ ನಿವಾರಣೆ, ಮಾಟ, ಮಂತ್ರ ಮತ್ತು ನಕಾರಾತ್ಮಕ ಶಕ್ತಿಗಳಿಂದ ರಕ್ಷಣೆ ಶತ್ರುಗಳ ಮೇಲೆ ಜಯ ಮತ್ತು ಮಾನಸಿಕ ನೆಮ್ಮದಿ ಮತ್ತು ಲೋಕಕಲ್ಯಾಣಕ್ಕಾಗಿ ಈ ಚಂಡಿಕಾ ಹೋಮವನ್ನು ಶ್ರದ್ಧಾ ಭಕ್ತಿಯಿಂದ ಮಾಡಲಾಗುತ್ತದೆ ಎಂದು ಶ್ರೀ ದತ್ತಾತ್ರೇಯ ದೇವಾಲಯದ ಪ್ರಧಾನ ಅರ್ಚಕರಾದ ವೇದ ಬ್ರಹ್ಮ ಎನ್.ಬಾಲಚಂದ್ರ ಸ್ವಾಮೀಜಿ ತಿಳಿಸಿದರು.

ಸುಮಾರು 500ಕ್ಕೂ ಅಧಿಕ ಮಂದಿ ಭಕ್ತರು ಚಂಡಿಕಾ ಹೋಮ ಕಾರ್ಯಕ್ರಮದಲ್ಲಿ ಭಾಗವಹಿಸಿ ದ್ದರು. ಚಂಡಿಕಾ ಹೋಮ ನಂತರ ತೀರ್ಥ ಪ್ರಸಾದ ವಿನಿಯೋಗಿಸಿ ಟ್ರಸ್ಟ್ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಉದಯವಾಹಿನಿ ಚಿತ್ರ

ಶ್ರೀದತ್ತಾತ್ರೇಯ ಸಮಾಜ ಸಾಧು ಮಠ ಟ್ರಸ್ಟ್ ಅಧ್ಯಕ್ಷರಾದ ವಿ.ಕೃಷ್ಣಮೂರ್ತಿ, ಉಪಾಧ್ಯಕ್ಷರಾದ ಜಿ.ಪಿ. ಕ್ಯಾತಪ್ಪ ಕಾರ್ಯದರ್ಶಿ ಪಿ.ವಿ. ರಾಮಚಂದ್ರರೆಡ್ಡಿ ಖಜಾಂಚಿ ಜಿ.ಎಸ್. ಶ್ರೀನಾಥ್ ಟ್ರಸ್ಟಿಗಳಾದ ಪಿ. ಎನ್. ಕೃಷ್ಣಪ್ಪ,, ಹೆಚ್. ಶ್ರೀನಿವಾಸ್ ಆರ್ ಓ ಪ್ರಭಾಕರ್, ಎಂ ಕೃಷ್ಣಪ್ಪ ವಿ ಸುಬ್ರಹ್ಮಣ್ಯಚಾರಿ, ಡಿ.ಎಸ್.ಆನಂದರೆಡ್ಡಿ ಬಾಬು, ರಂಗಪ್ಪ, ಹರಿಕುಮಾರ್, ನಾಗಭೂಷಣ್ ಸೇರಿದಂತೆ ಇನ್ನಿತರರು ಇದ್ದರು.

ಜಂಬೂ ಸವಾರಿಗೆ ಪುಷ್ಪಾರ್ಚನೆ ಪ್ರೋಟೋಕಾಲ್‌ನಲ್ಲಿ ಸಿಎಂ ಪತ್ನಿ ಹೆಸರು ಇರಲಿಲ್ಲ

• **ಉದಯವಾಹಿನಿ, ಮೈಸೂರು**

ಮುಖ್ಯಮಂತ್ರಿಯಾಗಿ ಡಿಕೆ ಶಿವಕುಮಾರ್ ಅವರು ಮೊದಲ ಬಾರಿಗೆ ಜಂಜೂಸವಾರಿಗೆ ಪುಷ್ಪಾರ್ಚನೆ ಮಾಡಿದ್ದು, ದಸರಾ ಕೂಡ ಯಶಸ್ವಿಯಾಗಿ ನೆರವೇರಿದೆ. ದಸರಾ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಿಎಂ ಪತ್ನಿ ಪುಷ್ಪಾರ್ಚನೆ ಮಾಡಿದ್ದು, ಇದು ಶಿಷ್ಟಾಚಾರದ ಉಲ್ಲಂಘನೆಯಾಗಿದೆ ಎಂಬ ಆರೋಪ ಕೇಳಿಬಂದಿದೆ. ಈ ಸಂಬಂಧ ಪ್ರತಿಕ್ರಿಯಿಸಿರುವ ಯತೀಂದ್ರ ಸಿದ್ದರಾಮಯ್ಯ, ಶಿಷ್ಟಾಚಾರ ಪಟ್ಟಿಯಲ್ಲಿ ಮುಖ್ಯಮಂತ್ರಿಗಳ ಪತ್ನಿ ಹೆಸರು ಇರಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರೋಟೋಕಾಲ್ ಪಟ್ಟಿಯಲ್ಲಿ ಸಿಎಂ ಪತ್ನಿ ಹೆಸರು ಇರಲಿಲ್ಲ. ಆದ್ರೂ ಸಿಎಂ ಪತ್ನಿ ಉಷಾ ಶಿವಕುಮಾರ್ ಅವರು ಪುಷ್ಪಾರ್ಚನೆ ಮಾಡಿರುವುದು ತಪ್ಪೇನಿಲ್ಲ. ಅವರು ದೇವಿಗೆ ಪುಷ್ಪಾರ್ಚನೆ ಮಾಡಿದ್ದಾರೆ ಅಷ್ಟೇ. ಸರ್ಕಾರದ ಕೆಲಸವನ್ನೇನು ಮಾಡಿಲ್ವಲ್ಲ? ಹೀಗಾಗಿ ಶಿಷ್ಟಾಚಾರ ಉಲ್ಲಂಘನೆಯಾದ್ರೂ ತಪ್ಪೇನಿಲ್ಲ ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ. ಇನ್ನೂ ನಂದಿ ಕಂಬ ಪೂಜೆ ವೇಳೆ ಸಚಿವರನ್ನ ತಡೆದ ವಿಚಾರ ಕುರಿತು ಮಾತನಾಡಿ, ಸಚಿವರನ್ನ ತಡೆಯಬಾರದಿತ್ತು. ಐಜಿಪಿ ದರ್ಜೆಯ ಅಧಿಕಾರಿ ಯಾಕೆ ಈ ರೀತಿ ಮಾಡಿದ್ರು ಗೊತ್ತಿಲ್ಲ. ಪೊಲೀಸರು ಓವರ್ ಬೋರ್ಡ್ ಆಗಿ ವರ್ತಿದ್ದಾರೆ. ಸರ್ಕಾರ ತನಿಖೆಗೆ ಸೂಚನೆ ನೀಡಿದೆ, ತನಿಖೆ ನಡೆಯುತ್ತಿದೆ. ಶಿಷ್ಟಾಚಾರದ ಪ್ರಕಾರ ಮಂತ್ರಿಗಳನ್ನ ತಡೆಯಬಾರದಿತ್ತು ಎಂದಿದ್ದಾರೆ.

ಸಚಿವರನ್ನ ತಡೆಯಲು ಯಾರಾದರೂ ಸೂಚನೆ ಕೊಟಿದ್ರಾ ಎಂಬ ಪ್ರಶ್ನೆಗೆ ಉತ್ತರಿಸಿ, ಈ ಬಗ್ಗೆ ನಮಗೆ ಗೊತ್ತಿಲ್ಲ. ಈ ವಿಚಾರವಾಗಿಯೇ ತನಿಖೆ ನಡೆಯುತ್ತಿದೆ. ತನಿಖಾ ತಂಡದ ಮುಂದೆ ಅಧಿಕಾರಿ ಉತ್ತರ ಕೊಡುತ್ತಾರೆ. ಮೂವರು ಕೂಡ ದಲಿತ ಸಚಿವರು. ಸಚಿವರಾದ ಬಾಲಕೃಷ್ಣ, ಪುಟ್ಟರಂಗಶೆಟ್ಟಿ ಅವರನ್ನೂ ತಡೆದಿದ್ರು. ನಾನೇ ಸಿಎಂಗೆ ಹೇಳಿ ಬಿಡಿಸಿದ್ದೇನೆ ಎಂದು ಹೇಳಿದ್ದಾರೆ.

ಸಂಪ್ರದಾಯದ ಅಂಗವಾಗಿ ಬನ್ನಿ ಮರಕ್ಕೆ ಅಂಬು ಹೊಡೆದು ಆಚರಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹನೂರು**

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿಜಯದಶಮಿ ಪಥ ಸಂಚಲನ ಉತ್ಸವವು ಹನೂರಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಹನೂರು ಪಟ್ಟಣದ ದೇವಾಂಗಪೇಟೆಯ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿ ಆರ್.ಎಸ್.ಎಸ್ ಕಾರ್ಯಕರ್ತರು ವಿಜಯದಶಮಿ ಉತ್ಸವದಲ್ಲಿ ಪಾಲ್ಗೊಂಡು, ಗಣವೇಶದಲ್ಲಿ ದಂಡವನ್ನು ಹಿಡಿದು ಪಥ ಸಂಚಲನ ನಡೆಸಿದರು.

ಪಥಸಂಚಲನವು ದೇವಾಂಗಪೇಟೆಯ ಆಂಜನೇಯ ದೇವಸ್ಥಾನದ ಮುಂಭಾಗದಿಂದ ಆರಂಭವಾಗಿ, ಮಠದ ಬೀದಿ ಪಟ್ಟಣದ ಮುಖ್ಯ ರಸ್ತೆಗೆ ಬಂದು, ಪೊಲೀಸ್ ಠಾಣೆ ಮುಂಭಾಗದ ಅಂಬೇಡ್ಕರ್ ವೃತ್ತವನ್ನು ಬಳಸಿಕೊಂಡು ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯಲ್ಲಿ ಸಾಗಿ, ಬಂಡಳ್ಳಿ ರಸ್ತೆಯಲ್ಲಿ ಚಲಿಸಿ, ಬೆಟ್ಟಳ್ಳಿ ಮಾರಮ್ಮ ದೇವಸ್ಥಾನದ ಮಾರ್ಗವಾಗಿ ವಾಸವಿ ಮಹಲ್, ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಮುಂಭಾಗದ ಕೆಂಪೇಗೌಡ ವೃತ್ತವನ್ನು ಬಳಸಿ ಮತ್ತೆ ದೇವಾಂಗಪೇಟೆ ರಸ್ತೆಗೆ ಬಂದು ಸಮಾಪ್ತಿಗೊಂಡಿತು. ನಂತರ ಸೇರಿದ್ದ ಸ್ವಯಂಸೇವಕರು ಭಾರತಮಾತೆ, ಸಂಘ ಸಂಸ್ಥಾಪಕರು ಹಾಗೂ ಭಗವದ್ವಜಕ್ಕೆ ಗೌರವ ವಂದನೆ ಸಮರ್ಪಣೆ ಮಾಡಿ ಕಾರ್ಯಕ್ರಮ ಸಂಪನ್ನಗೊಳಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಪ್ರಚಾರಕರಾದ ವೇಣು, ಜಿಲ್ಲಾ ಸಹಕಾರ್ಯವಾಹ ಬೆಂಡರಹಳ್ಳಿ ಶಿವಕುಮಾರ್, ತಾಲ್ಲೂಕು ಕಾರ್ಯವಾಹ ಹರಿಪ್ರಸಾದ್, ಬಿ.ಜೆ.ಪಿ ಮಂಡಲ ಅಧ್ಯಕ್ಷ ವೃಷಭೇಂದ್ರ ಸ್ವಾಮಿ, ಬೆಟ್ಟ ಮುರುಗೇಶ್, ರಾಜೇಂದ್ರ, ಕೃಷ್ಣಮೂರ್ತಿ, ಮೂರ್ತಿ, ರಾಚಪ್ಪ, ಮಹೇಶ್, ಶಿವಕುಮಾರ್, ಜಡೇಸ್ವಾಮಿ, ಜಗದೀಶ್, ವೆಂಕಟೇಶ್, ವಿಜಯ್, ಕೃಷ್ಣೇಗೌಡ, ಸಿದ್ದಪ್ಪ, ವೆಂಕಟೇಗೌಡ, ಚಂದ್ರು ಸೇರಿದಂತೆ ಸ್ವಯಂಸೇವಕರು ಭಾಗವಹಿಸಿದ್ದರು.

ಪರಿಸರ ಜೀವವೈವಿಧ್ಯತೆಯನ್ನು ಉಳಿಸಿ ಬೆಳೆಸುವುದರಿಂದ ಸುಸ್ಥಿರ ಅಭಿವೃದ್ಧಿ

ಹವಾಮಾನ ಬದಲಾವಣೆಯ ಕ್ರಮಗಳು, ಜಲ ಜೀವರಾಶಿಗಳು, ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಜೀವ ಪರಿಸರ ಸಮತೋಲನೆಯ ಬಗ್ಗೆ ಕ್ರಮಗಳ ಕುರಿತು ವಿವರಿಸಲಾಗಿದೆ

• **ಉದಯವಾಹಿನಿ, ಚಾಮರಾಜನಗರ**

ಅರಣ್ಯ ಉಳಿಸಿ, ವನ್ಯಜೀವಿ ರಕ್ಷಿಸಿ ಮತ್ತು ಪರಿಸರ ಜೀವ ವೈವಿಧ್ಯತೆಯನ್ನು ಬೆಳೆಸುವ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧಿಸಲಾಗುತ್ತದೆ ಎಂದು ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಹೆಚ್.ಕೆ. ವಿನುತ ಅವರು ತಿಳಿಸಿದರು.

1 ಹವಾಮಾನ ಬದಲಾವಣೆಯ ಕ್ರಮಗಳು

2 ಪರಿಚಯಾತ್ಮಕ ತರಬೇತಿ ಕಾರ್ಯಾಗಾರ

3 ಪಶ್ಚಿಮ ಮತ್ತು ಪೂರ್ವ ಘಟ್ಟಗಳು

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಯ ಸಿ ವೃಂದದ ನೌಕರರಿಗೆ ಅಕ್ಟೋಬರ್ 16 ಮತ್ತು 17ರಂದು ಹಮ್ಮಿಕೊಂಡಿದ್ದ ಎರಡು ದಿನಗಳ ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ಪರಿಚಯಾತ್ಮಕ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅರಣ್ಯ ಪಾಲಕರಾದ ಆರ್. ಶ್ವೇತ ಅವರು ಮಾತನಾಡಿ ಪಶ್ಚಿಮ ಘಟ್ಟಗಳು ಜೀವವೈವಿಧ್ಯತೆಗೆ ಸಂಬಂಧಿಸಿದ ಅರಣ್ಯ ಪ್ರದೇಶದಿಂದ ಕೂಡಿದ್ದು, ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಸಂಪರ್ಕಿಸುವ ಎರಡೂ ಪರ್ವತ ವ್ಯವಸ್ಥೆಗಳ ನಡುವಿನ ವನ್ಯಜೀವಿ ಅರಣ್ಯ ಪ್ರದೇಶವು ಸಂಪರ್ಕ ಕೊಂಡಿಯಾಗಿದೆ. ಒಣ ಎಲೆ ಉದುರುವ ಕಾಡುಗಳು, ತೇವಾಂಶವುಳ್ಳ ಅರಣ್ಯಗಳು, ಶೋಲಾ ಕಾಡುಗಳು ಹಾಗೂ ಹುಲ್ಲುಗಾವಲುಗಳಲ್ಲಿ 250ಕ್ಕೂ ಹೆಚ್ಚು ಪಕ್ಷಿ ಪ್ರಭೇದಗಳು ಕಂಡುಬರುತ್ತವೆ ಎಂದರು.

ಉದಯವಾಹಿನಿ ಚಿತ್ರ

ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಬಿ.ಎನ್. ಮಾನಸ ಅವರು ಮಾತನಾಡಿ ಪ್ರವಾಸಿ ಸ್ಥಳಗಳಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನ, ಬಿಳಿಗಿರಿರಂಗನಾಥಸ್ವಾಮಿ ಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಮಲೆಮಹದೇಶ್ವರ ಬೆಟ್ಟ ಹಾಗೂ ಭರಚುಕ್ಕಿ ಜಲಪಾತಗಳು ಸೇರಿವೆ. ಶಿವನಸಮುದ್ರದ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳು ಕಾವೇರಿ ನದಿಯ ಎರಡು ಭಾಗಗಳಾಗಿ ವಿಭಜನೆಯಾಗುವಾಗ ಜಲಪಾತಗಳು ಸೃಷ್ಟಿಯಾಗುತ್ತವೆ ಎಂದು ತಿಳಿಸಿದರು.

ಸಹಾಯಕ ಸಾಂಖಿಕ ಇಲಾಖೆಯ ಬಿ. ಕಿರಣಕುಮಾರ ಮಾತನಾಡಿ ಅರಣ್ಯದಲ್ಲಿ ಸೋಲಿಗರು, ಬೆಟ್ಟಕುರುಬ ಹಾಗೂ ಜೇನು ಕುರುಬ ವಾಸಿಸುವ ಆದಿವಾಸಿ ಸಮುದಾಯಗಳು ವನ್ಯಜೀವಿಗಳೊಂದಿಗೆ ನಿಕಟ ಸಂಬಂಧ ಹೊಂದಿ ಸಾಂಪ್ರದಾಯಿಕ ಜೀವನಶೈಲಿ ರೂಡಿಸಿಕೊಂಡಿವೆ. ಜೇನು ಸಂಗ್ರಹಣೆ, ಅರಣ್ಯ ಕಿರು ಉತ್ಪನ್ನಗಳ ಸಂಗ್ರಹಣೆ ಮತ್ತು ಕೃಷಿ ಇವರ ಸಾಂಪ್ರದಾಯಿಕ ಜೀವನೋಪಾಯ ಜೀವವೈವಿಧ್ಯದ ಕುರಿತು ಪಾರಂಪರಿಕ ಜ್ಞಾನ ಹೊಂದಿದ್ದಾರೆ ಎಂದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್.ಆರ್. ಪ್ರಕಾಶ ಅವರು ಮಾತನಾಡಿ ಅರಣ್ಯ ಪ್ರದೇಶಗಳ ವಿಘಟನೆ ಮತ್ತು ಮಾನವ ವನ್ಯಜೀವಿ ಸಂಘರ್ಷ, ಕಾಡ್ಗಿಚ್ಚು ಮತ್ತು ಹವಾಮಾನ ಬದಲಾವಣೆಯ ಪರಿಣಾಮಗಳು, ಅಕ್ರಮ ಬೇಟೆ ಮತ್ತು ವನ್ಯಜೀವಿಗಳ ಸಂರಕ್ಷಣೆಯ ಸವಾಲುಗಳನ್ನು ಯೋಜನಾಬದ್ಧವಾಗಿ ನಿರ್ವಹಿಸುವ ಅಗತ್ಯವಿದೆ ಎಂದು ತಿಳಿಸಿದರು.

ಜಿಲ್ಲಾ ತರಬೇತಿ ಸಂಸ್ಥೆಯ ಉಪ ಪ್ರಾಚಾರ್ಯ ಎಂ.ಡಿ ಆರಬೀ, ಬೋಧಕ ಕುಮಾರಸ್ವಾಮಿ ಸೇರಿದಂತೆ ಕಾರ್ಯಾಗಾರದಲ್ಲಿ ವಿವಿಧ ಇಲಾಖೆಯ ನೌಕರರು ಇದ್ದರು.

ಭಾರತದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಭೂಮಿಯ ಮೇಲೆ ಲಭ್ಯವಿರುವ ಸಂಪನ್ಮೂಲಗಳ ಜವಾಬ್ದಾರಿಯುತ ಬಳಕೆ, ಹವಾಮಾನ ಬದಲಾವಣೆಯ ಕ್ರಮಗಳು, ಜಲ ಜೀವರಾಶಿಗಳು, ಜೀವವೈವಿಧ್ಯತೆಯ ಸಂರಕ್ಷಣೆ ಮತ್ತು ಜೀವ ಪರಿಸರ ಸಮತೋಲನೆಯ ಬಗ್ಗೆ ಕ್ರಮಗಳ ಕುರಿತು ವಿವರಿಸಲಾಗಿದೆ -ಪ್ರಾಚಾರ್ಯರಾದ ಹೆಚ್.ಕೆ.ವಿನುತ

ಅಭಿವೃದ್ಧಿ ಗುರಿಗಳಿಗೆ ಸಂಬಂಧಿಸಿದಂತೆ ಉಪನ್ಯಾಸ

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಡಾ. ಹೆಚ್.ಎಂ ಸುದರ್ಶನ ಹಾಗೂ ಡಾ. ಹೆಚ್.ಎಂ. ಸಿದ್ದರಾಮ ಅವರು ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಸಂಬಂಧಿಸಿದಂತೆ ಉಪನ್ಯಾಸ ನೀಡಿದರು.

ಅಂತರಾಳದಿಂದ..
EDITORIAL

ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆ ಗ್ರಾಹಕರ ಸುರಕ್ಷೆಗಿರಲಿ ಆದ್ಯತೆ



ದೇಶವಿಂದು ಡಿಜಿಟಲ್ ಯುಗದಲ್ಲಿ ದಾಪುಗಾಲಿಡುತ್ತಿರುವ ಸಂದರ್ಭದಲ್ಲಿ ಡಿಜಿಟಲ್ ಸುರಕ್ಷೆ ಎಂಬುದು ಬಲುದೊಡ್ಡ ಸವಾಲಾಗಿ ಪರಿಣಮಿಸಿದೆ. ದೇಶದ ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರ ಈಗಾಗಲೇ ಬಹುತೇಕ ಡಿಜಿಟಲ್‌ಗೆ ಹೊರಳಿಕೊಂಡಿದ್ದು, ಕಳೆದ ಕೆಲವು ತಿಂಗಳುಗಳಿಂದೀಚೆಗೆ ಬ್ಯಾಂಕಿಂಗ್ ವಲಯದಲ್ಲಾಗಿರುವ ಸೈಬರ್ ದಾಳಿ, ಮಾಹಿತಿ ಸೋರಿಕೆ ಪ್ರಕರಣಗಳು ನಮ್ಮ ಡಿಜಿಟಲ್ ಭದ್ರತ ವ್ಯವಸ್ಥೆಯನ್ನು ಇನ್ನಷ್ಟು ಸಶಕ್ತಗೊಳಿಸಬೇಕಾದ ಅನಿವಾರ್ಯತೆಯನ್ನು ಬೊಟ್ಟು ಮಾಡಿ ತೋರಿಸಿವೆ.

ತಂತ್ರಜ್ಞಾನದ ಪ್ರಗತಿಯ ಜತೆಯಲ್ಲಿ ಗ್ರಾಹಕರ ಗೌಪ್ಯ ಮಾಹಿತಿಗಳ ಸುರಕ್ಷೆಯೂ ಆರ್‌ಬಿಐ ಮತ್ತು ಸರಕಾರದ ಆದ್ಯತೆಯಾಗಬೇಕು ಎಂಬುದನ್ನು ಈ ಬೆಳವಣಿಗೆಗಳು ಸಾರಿ ಹೇಳಿವೆ. ಪ್ರಸಕ್ತ ವರ್ಷದ ಜುಲೈ ತಿಂಗಳಿನಲ್ಲಿ ಬ್ಯಾಂಕ್ ಆಫ್ ಬರೋಡಾದ ಪ್ರಕರಣದಿಂದ ಹಿಡಿದು ಇತ್ತೀಚಿನ ಎಚ್‌ಡಿಎಫ್‌ಸಿಯಂಥ ಪ್ರಕರಣಗಳು ದೇಶದ ಬ್ಯಾಂಕಿಂಗ್ ವಲಯದಲ್ಲಿನ ಡಿಜಿಟಲ್ ಸುರಕ್ಷೆಯ ಕುರಿತಂತೆ ಕೆಲವು ಅನುಮಾನಗಳು ಮೂಡುವಂತೆ ಮಾಡಿವೆ.

ಈ ಪ್ರಕರಣಗಳಲ್ಲಿ ಸಂಬಂಧಿತ ಬ್ಯಾಂಕ್‌ಗಳ ಒಟ್ಟಾರೆ ಕಾರ್ಯನಿರ್ವಹಣೆ, ಆರ್ಥಿಕ ಚಟುವಟಿಕೆ ಹಾಗೂ ಗ್ರಾಹಕರ ಮೇಲೆ ಯಾವುದೇ ತೆರನಾದ ಪ್ರತಿಕೂಲ ಪರಿಣಾಮ ಬೀರಿಲ್ಲ ಎಂಬುದು ಸಮಾಧಾನಕರ ವಿಷಯವಾದರೂ ಬ್ಯಾಂಕಿಂಗ್ ವ್ಯವಸ್ಥೆಯ ಪಾಲಿಗೆ ಈ ಸೈಬರ್ ದಾಳಿಗಳು ಎಚ್ಚರಿಕೆಯ ಕರೆಗಂಟೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಲಿ ಪ್ರಕರಣಗಳಲ್ಲಿ ಸೀಮಿತ ಸಂಖ್ಯೆಯ ಗ್ರಾಹಕರ ವೈಯಕ್ತಿಕ ಮಾಹಿತಿಗಳು ಸೋರಿಕೆಯಾಗಿದ್ದು, ಸಂಬಂಧಿತ ಬ್ಯಾಂಕ್ ಗಳು ಹಾಗೂ ಸೈಬರ್ ಭದ್ರತ ಸಂಸ್ಥೆಗಳ ತ್ವರಿತ ಕಾರ್ಯಾಚರಣೆಯಿಂದಾಗಿ ಗ್ರಾಹಕರು ವಂಚನೆಗೊಳಗಾಗುವುದು ತಪ್ಪಿದೆ. ಹಾಗೆಂದು ಈ ಪ್ರಕರಣಗಳನ್ನು ನಿರ್ಲಕ್ಷಿಸಲಾಗದು. ಇಂದು ಬಹುತೇಕ ಹಣಕಾಸು ಸೇವೆಗಳು ಡಿಜಿಟಲ್ ವೇದಿಕೆಯ ಮೂಲಕವೇ ನಡೆಯುತ್ತಿರುವುದರಿಂದ ಸೈಬರ್‌ಸುರಕ್ಷೆ ಮತ್ತು ಗ್ರಾಹಕರ ಗೌಪ್ಯ ಮಾಹಿತಿಗಳ ರಕ್ಷಣೆಯ ಸವಾಲುಗಳನ್ನು ಬ್ಯಾಂಕಿಂಗ್ ಕ್ಷೇತ್ರ ಇನ್ನಷ್ಟು ಸಮರ್ಥವಾಗಿ ನಿಭಾಯಿಸಬೇಕು.

ಡಿಜಿಟಲ್ ಸುರಕ್ಷೆಗೆ ಸಂಬಂಧಿಸಿದ ಸಮಸ್ಯೆ, ಸವಾಲುಗಳು ಆಯಾಯ ಬ್ಯಾಂಕ್‌ಗೆ ಮಾತ್ರ ಸೀಮಿತವಾಗಿರದೆ ದೇಶದ ಬ್ಯಾಂಕಿಂಗ್ ವಲಯ ಮತ್ತು ಆರ್ಥಿಕ ವ್ಯವಸ್ಥೆಗೇ ಸಂಬಂಧಿಸಿದ್ದಾಗಿದೆ. ಜನರು ಯಾವ ನಂಬಿಕೆ, ವಿಶ್ವಾಸದಿಂದ ಬ್ಯಾಂಕ್‌ಗಳಲ್ಲಿ ವ್ಯವಹಾರ ನಡೆಸುತ್ತಾರೆಯೋ ಅದನ್ನು ಉಳಿಸಿಕೊಂಡು ಅವರಿಗೆ ಇನ್ನಷ್ಟು ಸುಲಲಿತ ಸೇವೆ ಒದಗಿಸಿಕೊಡುವುದರಿಂದಲಷ್ಟೇ ಬ್ಯಾಂಕ್‌ನ ಶ್ರೇಯೋಭಿವೃದ್ಧಿ ಸಾಧ್ಯ ಎಂಬುದನ್ನು ಮರೆಯಬಾರದು. ಸೈಬರ್ ದಾಳಿ, ಮಾಹಿತಿ ಸೋರಿಕೆಯಂತಹ ಪ್ರಕರಣಗಳನ್ನು ಕೇವಲ ತಾಂತ್ರಿಕ ದೋಷವೆಂದು ಪರಿಗಣಿಸಲು ಸಾಧ್ಯವಿಲ್ಲ. ಇದೇ ವೇಳೆ ಇಂತಹ ವಿಷಯಗಳಲ್ಲಿ ಬ್ಯಾಂಕ್‌ಗಳು ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಜತೆಯಲ್ಲಿ ಗ್ರಾಹಕರಿಗೆ ಈ ಬಗ್ಗೆ ನಿರಂತರವಾಗಿ ಅರಿವು ಮೂಡಿಸಬೇಕು. ತಾಂತ್ರಿಕ ಇಲ್ಲವೇ ಆಡಳಿತಾತ್ಮಕ ಲೋಪಗಳಿಂದ ನಡೆಯುವ ಸಣ್ಣಪುಟ್ಟ ಘಟನೆಗಳನ್ನೂ ಇಡೀ ಬ್ಯಾಂಕಿಂಗ್ ಕ್ಷೇತ್ರ ಗಂಭೀರವಾಗಿ ಪರಿಗಣಿಸುವುದರ ಜತೆಯಲ್ಲಿ ಸೈಬರ್ ಸುರಕ್ಷಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು. ತಂತ್ರಜ್ಞಾನ ಕ್ಷೇತ್ರದಲ್ಲಿ ದಿನೇದಿನೆ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಲೇ ಇರುವುದರಿಂದ ಅದಕ್ಕೆ ತಕ್ಕಂತೆ ಸೈಬರ್‌ಸುರಕ್ಷೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು.

ಡಿಜಿಟಲ್ ಸುರಕ್ಷೆ ಎನ್ನುವುದು ಸಮಗ್ರ ವ್ಯವಸ್ಥೆಯ ಸವಾಲು ಆಗಿರುವುದರಿಂದ ಇಂತಹ ಸಮಸ್ಯೆಗಳು ಎದುರಾದಾಗ ಸಂಬಂಧಿತ ಬ್ಯಾಂಕ್‌ನ ಯಾವುದೋ ಒಂದು ವಿಭಾಗದ ಲೋಪ ಎಂದು ಪರಿಗಣಿಸದೆ ಬ್ಯಾಂಕ್‌ನೊಂದಿಗೆ ವ್ಯಾವಹಾರಿಕ ಮತ್ತು ತಾಂತ್ರಿಕ ಸಂಬಂಧ ಹೊಂದಿರುವ ಸಂಸ್ಥೆಗಳ ಭದ್ರತೆಯನ್ನು ಕೂಡ ಅಷ್ಟೇ ಗಂಭೀರವಾಗಿ ಪರಿಗಣಿಸಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಾಗ ಮಾತ್ರ ಗ್ರಾಹಕರ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯ.

ಕೂಚಿಪುಡಿ ನಾಟ್ಯ ಪರಂಪರ ಹದಿಮೂರನೆಯ ನೃತ್ಯೋತ್ಸವ -2026

ಅಚ್ಚ ಶಾಸ್ತ್ರೀಯ ಕೂಚಿಪುಡಿಯ ನೃತ್ಯಶೈಲಿಯಲ್ಲಿ ನಾಲ್ಕುದಶಕಗಳಿಂದ ಪರಿಶ್ರಮಿಸುತ್ತಿರುವ ಆಚಾರ್ಯ ದೀಪಾ ನಾರಾಯಣನ್ ಶಶೀಂದ್ರನ್ ಸುಮಾರು ಐದುನೂರು ವರ್ಷಗಳ ಇತಿಹಾಸವುಳ್ಳ ಕೂಚಿಪುಡಿ ನೃತ್ಯಶೈಲಿಯ ಖ್ಯಾತ ಗುರು ಪದ್ಮಭೂಷಣ ಡಾ. ವೆಂಪಟಿ ಚಿನ್ನಸತ್ಯಂ ಅವರ ಎರಡನೆಯ ಪರಂಪರೆಗೆ ಸೇರಿದವರು. ಖ್ಯಾತ ಕೂಚಿಪುಡಿ ನಾಟ್ಯಗುರು-ನೃತ್ಯ ಕಲಾವಿದೆ, ಸಂಯೋಜಕಿಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿರುವ ಇವರು, ಕೂಚಿಪುಡಿ ಪರಂಪರ ಫೌಂಡೇಷನ್ ಟ್ರಸ್ಟ್‌ನ ಲೈಫ್ ಟ್ರಸ್ಟಿಯಾಗಿದ್ದು ತಮ್ಮ ಪರಿಣಿತ ಅಭಿನಯ-ಮನೋಜ್ಞ ನೃತ್ಯಪ್ರಸ್ತುತಿಗಳಿಂದ ಕಲಾರಸಿಕರ ಗಮನ ಸೆಳೆದಿದ್ದಾರೆ. ಶಂಕರಾಭರಣ ಚಲನಚಿತ್ರ ಖ್ಯಾತಿಯ ಮಂಜುಭಾರ್ಗವಿ ಅವರ ಪ್ರಧಾನಶಿಷ್ಯರಾಗಿ ಅವರಲ್ಲಿ ಸತತ ಮೂವತ್ತು ವರುಷಗಳು ನಾಟ್ಯಶಿಕ್ಷಣ ಪಡೆದು ಗುರುಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಅಗ್ಗಳಿಕೆ ಇವರದು.

ಭಾರತ ನೃತ್ಯೋತ್ಸವದ ಪ್ರತೀಕವಾದ ನಾಟ್ಯ ಪರಂಪರ ಉತ್ಸವ'ವು ಭಾರತ ಮಾತ್ರವಲ್ಲದೆ, ಯು ಎಸ್, ರಷ್ಯಾ, ತೈವಾನ್, ಕೆನಡಾ ಮುಂತಾದೆಡೆಗಳ ಕುಚಿಪುಡಿ ಮತ್ತು ಇನ್ನಿತರ ನೃತ್ಯಶೈಲಿಗಳ ಖ್ಯಾತ ಕಲಾವಿದರ ನೃತ್ಯ ಪ್ರದರ್ಶನಗಳನ್ನು ಅರ್ಪಿಸುತ್ತ ಬಂದಿರುವುದು ಹೆಗ್ಗಳಿಕೆಯ ಸಂಗತಿ.

ಇದೀಗ ನಾಟ್ಯ ಪರಂಪರ' ಹದಿಮೂರನೆಯ ಆವೃತ್ತಿಯ ನಾಟ್ಯ ಪರಂಪರಾ ಉತ್ಸವ 2026 ರ ಸಂಭ್ರಮಾಚರಣೆ ಇದೇ ತಿಂಗಳ 29 ಗುರುವಾರ ಸಂಜೆ 6 ಗಂಟೆಯಿಂದ ಮಲ್ಲೇಶ್ವರದ ಸೇವಾಸದನದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ಕುಚಿಪುಡಿ ಕುಟುಂಬದ ಹಿರಿಯ ಕುಚಿಪುಡಿ ಗುರುಗಳಾದ ಗುರು ಮಹಾಂಕಾಳಿ ರಾಮಚಂದ್ರ ಮೂರ್ತಿ ಅವರ ಕಲಾ ಸೇವೆಯನ್ನು ಗುರುತಿಸಿ ಗೌರವಿಸಲಾಗುವುದು, ನಂತರ-ಬೆಂಗಳೂರಿನ ಭರತನಾಟ್ಯ ಕಲಾವಿದ ಶ್ರೀ ಚಾರ್ಲ್ಸ್ ಎಂ ಅವರ ನೃತ್ಯ ಪ್ರದರ್ಶನ, ದೀಪಾ ಶಶೀಂದ್ರನ್ ಅವರ ಶಿಷ್ಯೆ ಐಶ್ವರ್ಯ ಕೆ.ಆರ್. ಅವರ ಕುಚಿಪುಡಿ ಏಕವ್ಯಕ್ತಿ ಪ್ರದರ್ಶನ, ಮತ್ತು ಅಭಯ ಲಕ್ಷ್ಮಿ ಅವರಿಂದ ಒಡಿಸ್ಸಿ ಹಾಗೂ ಚೆನ್ನೈನ ಕುಚಿಪುಡಿ ಆರ್ಟ್ ಅಕಾಡೆಮಿಯಿಂದ 'ಕಪಿಸೂತ್ರ' ನೃತ್ಯರೂಪಕ ಪ್ರದರ್ಶನಗಳು ಕಲಾ ರಸಿಕರ ಕಣ್ಮನ ಸೂರೆಗೊಳ್ಳುವುದು.

ಈ ನಯನ ಮನೋಹರವಾದ ಕಾರ್ಯಕ್ರಮವನ್ನು ಬೆಂಗಳೂರಿನ ಕೆ.ಪಿ.ಎಫ್. ಲೈಫ್ ಟ್ರಸ್ಟಿ, ಕುಚಿಪುಡಿ ನೃತ್ಯಜ್ಞೆ ಆಚಾರ್ಯ ದೀಪಾ ಶಶೀಂದ್ರನ್ ಆಯೋಜಿಸಿದ್ದಾರೆ.

ಪರೀಕ್ಷಾ ಸಂಭ್ರಮ
ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381
17

ತಲೆನೋವಿಗೆ ತುರ್ತು ತಂಪು

ಇಂತಹ ಸಂದರ್ಭದಲ್ಲಿ ಮೊದಲ ಪ್ರತಿಕ್ರಿಯೆ ವಿಶ್ರಾಂತಿ. ಕೋಣೆಯ ತೀಕ್ಷ್ಣ ಬೆಳಕನ್ನು ತಗ್ಗಿಸಿ, ಶಾಂತ ಮೂಲೆಯಲ್ಲಿ ಕುಳಿತು ಕಣ್ಣು ಮುಚ್ಚಿ. ಹಣೆ ಮತ್ತು ಕತ್ತಿನ ಹಿಂಭಾಗಕ್ಕೆ ತಣ್ಣೀರಿನಲ್ಲಿ ಅದ್ದಿದ ಟವೆಲ್ ಒತ್ತಿ, ಹತ್ತು ನಿಮಿಷ ಮೌನವಾಗಿ ಮಲಗಿ. ಆಳವಾಗಿ ಉಸಿರೆಳೆದು ನಿಧಾನವಾಗಿ ಬಿಡುತ್ತಾ ಭುಜ ಮತ್ತು ಹಣೆಯ ಸ್ನಾಯುಗಳನ್ನು ಸಡಿಲಗೊಳಿಸಿ. ಒಂದು ಲೋಟ ತಣ್ಣೀರನ್ನು ನಿಧಾನವಾಗಿ ಕುಡಿಯಿರಿ, ದೇಹಕ್ಕೆ ತಂಪು ನೀಡಿ.

ಪರೀಕ್ಷೆಯ ಒತ್ತಡದಲ್ಲಿ ಓದುತ್ತಿರುವಾಗ ಇದ್ದಕ್ಕಿದ್ದಂತೆ ತಲೆ ಭಾರವಾಗಿ, ಕಣ್ಣು ಉರಿಯತೊಡಗಿದರೆ ಪುಸ್ತಕವೇ ಮಂಜಾಗುತ್ತದೆ.

ನಿರ್ಜಲೀಕರಣ, ನಿದ್ರಾಹೀನತೆ, ತೀಕ್ಷ್ಣ ಬೆಳಕು ಮತ್ತು ಆತಂಕವೇ ಇದರ ಮೂಲ. ನೋವಿನೊಂದಿಗೆ ಓದಿದರೂ ಅಕ್ಷರಗಳು ಮನಸ್ಸು ಸೇರುವುದಿಲ್ಲ, ಶ್ರಮವೆಲ್ಲ ವ್ಯರ್ಥವಾಗುತ್ತದೆ. ಬೆರಳ ತುದಿಯಿಂದ ಹಣೆಯಿಂದ ನೆತ್ತಿಯತ್ತ ವೃತ್ತಾಕಾರದಲ್ಲಿ ಮೃದುವಾಗಿ ಮಸಾಜ್ ಮಾಡಿ. ಕತ್ತನ್ನು ನಿಧಾನವಾಗಿ ಬಲ-ಎಡಕ್ಕೆ ತಿರುಗಿಸಿ ಬಿಗಿತವನ್ನು ಕರಗಿಸಿ. ಜೋರಾದ ಶಬ್ದ, ಮೊಬೈಲ್ ಪರದೆಯ ಪ್ರಖರ ಬೆಳಕಿನಿಂದ ದೂರವಿರಿ, ಹಲ್ಲು ಬಿಗಿಯಾಗಿ ಕಡಿಯುವುದನ್ನು ತಪ್ಪಿಸಿ. ಈ ಸಣ್ಣ ಆರೈಕೆಗಳಿಂದ ಹದಿನೈದು ನಿಮಿಷದೊಳಗೆ ನೋವು ಇಳಿಮುಖವಾಗುತ್ತದೆ. ನೆನಪಿಡಿ, ಇದು ತಾತ್ಕಾಲಿಕ ಶಮನ ಮಾತ್ರ. ವಾರಕ್ಕೆ ಮೂರಕ್ಕಿಂತ ಹೆಚ್ಚು ಬಾರಿ ತಲೆನೋವು ಕಾಣಿಸಿಕೊಂಡರೆ ನಿರ್ಲಕ್ಷಿಸಬೇಡಿ. ನಿದ್ರೆ, ನೀರು, ಆಹಾರ ಕ್ರಮಬದ್ಧವಾಗಿದೆಯೇ ಎಂದು ಪರಿಶೀಲಿಸಿ, ಅಗತ್ಯವಿದ್ದರೆ ವೈದ್ಯರ ಸಲಹೆ ಪಡೆಯಿರಿ. ಆರೋಗ್ಯವೇ ಅಧ್ಯಯನದ ಅಡಿಪಾಯ.

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ವಿವೇಚನಾ ಶಕ್ತಿ ಇರುವ ಮಾನವನಿಗೆ ಮಾತ್ರ (ಪ್ರಾಣಿ ಪಕ್ಷಿಗಳ ಹೊರತುಪಡಿಸಿ) ಈ ಪಾಪ ಮತ್ತು ಪುಣ್ಯಗಳ ನಡುವೆ ಇರುವ ವ್ಯತ್ಯಾಸ ತಿಳಿಯುತ್ತದೆ ಹಾಗೂ ಪಾಪ ಮತ್ತು ಪುಣ್ಯ ಈ ಎರಡೂ ಕೂಡ ನಮ್ಮ ಕಣ್ಮುಂದೆ ಸದಾ ಸುಳಿದಾಡುತ್ತಿವೆ. ಪಾಪ ಮಾಡಿದರೆ ನರಕಕ್ಕೆ ಹೋಗುತ್ತೀರಿ ಅದೇ ಪುಣ್ಯ ಮಾಡಿದರೆ ಸ್ವರ್ಗಕ್ಕೆ ಹೋಗುತ್ತೀರಿ ಎಂಬ ಮಾತು ಸಮಾಜದಲ್ಲಿ ಹರಿದಾಡುತ್ತಾ ಈ ಮಾತು ಮೂಢನಂಬಿಕೆ ಎಂಬ ಮೌಢ್ಯತೆಯಿಂದ ಹೊರ ಹೊಮ್ಮಿದೆ ಇದಕ್ಕೆ ಇತಿಮಿತಿ ಇಲ್ಲ. ಪಾಪ ಮತ್ತು ಪುಣ್ಯಗಳ ಮಧ್ಯೆ ಮೂರಕ್ಷರ ಇರುವ ದೇವರನ್ನ ಎಳೆದುಕೊಂಡು ಮಧ್ಯದಲ್ಲಿ ನಿಲ್ಲಿಸುತ್ತೇವೆ. ಎಲ್ಲದಕ್ಕೂ ದೇವರನ್ನ ಬಲಿ ಕೊಡುತ್ತೇವೆ ದೇವರು ಏನು ಪಾಪ ಮಾಡಿದ್ದನು. ದೇವರ ಮತ್ತು ಧರ್ಮದ ಹೆಸರಿನಲ್ಲಿ ಏನೇನು ಶೋಷಣೆ ನಡೆಯುತ್ತಿದೆ ಎಂಬುದನ್ನು ಯಾರೂ ಸಹ ಊಹಿಸಲು ಸಾಧ್ಯವಾಗಿಲ್ಲ.

ಪಾಪದ ಕೆಲಸವನ್ನು ಮಾಡಿ ಪಾಪ ಕಟ್ಟಿಕೊಳ್ಳಬೇಡ ! ಪುಣ್ಯದ ಕೆಲಸವನ್ನು ಮಾಡಿ ಪುಣ್ಯ ಕಟ್ಟಿಕೋ !

ದೇವರು ವಿಸ್ಮಯ, ನಿಗೂಢ,ಪವಾಡ ಒಂದು ತರಹ ಅಗೋಚರ ಒಟ್ಟಾರೆ ದೇವರು ಸರ್ವಶಕ್ತ, ಸರ್ವವ್ಯಾಪಿ, ದಯಾಮಯಿ ಮಿಗಿಲಾಗಿ ಜೀವಕೋಟಿ ಜೀವರಾಶಿವುಳ್ಳ ಜೀವಗಳೆಲ್ಲರನ್ನೂ ಕಾಪಾಡಿ ರಕ್ಷಿಸುವ ಒಂದು ಶಕ್ತಿ ಅದೇ ವಿಶ್ವಶಕ್ತಿ. ಒಂದು ವೇಳೆ ದೇವರು ಪ್ರತ್ಯಕ್ಷವಾಗಿ ಕಾಣುವುದಾಗಿದ್ದರೆ ಮಾನವ ಸದಾ ಪುಣ್ಯದ ಕೆಲಸವನ್ನು ಮಾಡುತ್ತಿದ್ದನು. ಆದರೇನು ಬಂತು ದೇವರು ಮಾನವನಿಗೆ ಪ್ರತ್ಯಕ್ಷವಾಗಿ ಕಾಣದಿದ್ದಕ್ಕೆ ಕೆಲವರು ಬರೀ ಪಾಪದ ಕೃತ್ಯಗಳನ್ನು ಮಾಡಿ ಪಾಪ ಕಟ್ಟಿಕೊಳ್ಳುತ್ತಾರೆ.ಬಾಲ್ಯ ಮತ್ತು ಯೌವನದಲ್ಲಿ ಮಾಡುವ ಕೆಲವು ಪಾಪಗಳಿಗೆ ದೇವರ ಲೆಕ್ಕದಲ್ಲಿ ಕ್ಷಮೆ ಇದೆ ಅದೇ ಮುಪ್ಪಿನಲ್ಲಿ ಮಾಡುವ ಪಾಪಗಳಿಗೆ ಯಾವ ದೇವರ ಅಥವಾ ಮನುಷ್ಯನ ಲೆಕ್ಕದಲ್ಲಿ ಕ್ಷಮೆ ಇಲ್ಲ. ಕುಟುಂಬ,ಸಮಾಜ ಹಾಗೂ ರಾಷ್ಟ್ರದಲ್ಲಿ ಪುಣ್ಯದ ಕೆಲಸವನ್ನು ಮಾಡಲೂ ಸಹ ಈ ಪುಣ್ಯ ಭೂಮಿಯ ಮೇಲೆ ಭರಪೂರಾವಕಾಶಗಳಿವೆ. ಅದೇ ರೀತಿ ಈ ಪುಣ್ಯಭೂಮಿಯಲ್ಲಿಯೂ ಸಹ ಪಾಪದ ಕೆಲಸವನ್ನು ಮಾಡಲೂ ಬಹಳಷ್ಟು ಅವಕಾಶವಿದೆ. ಆದರೆ ಆಯ್ಕೆ ನಿಗೂಢ ಹಾಗೂ ವಿಸ್ಮಯ. ಮಾನವನಿಗೆ ಹುಟ್ಟಿನಿಂದ ಕೊನೆಯವರೆಗೂ ಸಂಸ್ಕಾರದ ಜೊತೆಗೆ ಶಿಕ್ಷಣ ದೊರಕಿಸಿಕೊಟ್ಟರೂ ಸಹ ತನ್ನ ನಡವಳಿಕೆಯನ್ನು ಬದಲಾಯಿಸಿಕೊಳ್ಳಲಿಲ್ಲ. ಕುಟುಂಬ,ಪದವಿ,ಅಧಿಕಾರ ಇವುಗಳ ಮೇಲೆ ವ್ಯಾಮೋಹ ಬಿಟ್ಟು ಬದುಕುವ ದಾರಿ ಮಾರ್ಗವನ್ನು ಮಾನವ ಕಂಡುಹಿಡಿದುಕೊಂಡರೆ ಬಹುಶಃ ಪಾಪದ ಕೃತ್ಯಗಳನ್ನ ಮಾಡಲು ಸ್ವಲ್ಪಮಟ್ಟಿಗಾದರೂ ಹಿಂದೇಟು ಹಾಕುತ್ತಾರೆ.ಇಷ್ಟೆಲ್ಲಾ ಪಾಪದ ಕೃತ್ಯಗಳ ಅನಾಹುತಕ್ಕೆ ಮೂಲ ಕಾರಣ ಮಾನವನಿಗೆ ಮಾನವನೇ ಮೇಲ್ವಿಚಾರಕ ಆದರೆ ದೇವರಲ್ಲ ಎಂತಹ ವಿಪರ್ಯಾಸ.ಒಟ್ಟಾರೆ ಫಲಾಪೇಕ್ಷೆ ಪಡದೇ ತನ್ನ ಕರ್ತವ್ಯವನ್ನ ನಿಷ್ಠೆ, ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಾ ಪುಣ್ಯದ ಕೆಲಸವನ್ನು ಮಾಡಿ ಪುಣ್ಯ ಕಟ್ಟಿಕೊಳ್ಳಬೇಕು ಪಾಪದ ಕೆಲಸವನ್ನು ಮಾಡಿ ಪಾಪಿಗಳಾಗ ಬಾರದು ಕಾರಣ ಬದುಕು ಅನಿಶ್ಚಿತ, ಸಾವು ನಿಶ್ಚಿತ ಎಂಬುದನ್ನ ಮಾನವ ತನಗೆ ಅರಿವು ಇರುವ ವಾಸ್ತವಿಕ ಸತ್ಯಾಂಶವನ್ನು ಮನಗಾಣಬೇಕು. ಆತ್ಮಸಾಕ್ಷಿ,ಹೃದಯಸಾಕ್ಷಿ ಮತ್ತು ಮನ:ಸ್ಸಾಕ್ಷಿಯಾಗಿ ಹಾಗೂ ಆತ್ಮಬಲ, ಮನೋಬಲ ಹಾಗೂ ಹೃದಯಬಲದಿಂದ ನಂಬಿ ಪುಣ್ಯದ ಕೆಲಸವನ್ನು ಮಾಡಿ ಬದುಕುವುದೇ ನಿಜವಾದ ಸಾರ್ಥಕದ ಬದುಕು ಆ ಬದುಕಿನಿಂದಲೇ ನಾವುಗಳು ಸಾಕ್ಷಾತ್ಕಾರಗೊಳ್ಳಬೇಕು.

ಪುಣ್ಯದ ಕೆಲಸವನ್ನು ಮಾಡುವ ಪುಣ್ಯಾತ್ಮರು ಪುಣ್ಯಭೂಮಿಯಲ್ಲಿ ಕೆಲವರು ನೆಲೆಸಿ ನೆಲೆ ಕಂಡುಕೊಂಡಿದ್ದಾರೆ. ಇನ್ನುಳಿದ ಇರುವ ಜನರಿಗೆ ಸಕಲಿಷ್ಟು ವಿದ್ಯೆ, ಬುದ್ಧಿಗಳನ್ನ ಕಲಿಸಿ ಮನುಷ್ಯರಾದರೂ ಸಹ ಮನುಷ್ಯತ್ವವನ್ನು ಮರೆತು ಪಾಪದ ಕೃತ್ಯದಲ್ಲಿ ತೊಡಗಿಕೊಂಡು ಪಾಪಿಗಳಾಗಿ ಪಾಪಗ್ರಸ್ತರಾಗಿದ್ದಾರೆ. ಇಂದಿನ ಕಾಲಘಟ್ಟದಲ್ಲಿ ವಾಸ್ತವಿಕ ಸತ್ಯಾಂಶ ತಿಳಿಯುವುದಾದರೆ ಅನಕ್ಷರಸ್ಥರಿಗಿಂತ ಅಕ್ಷರಸ್ಥರಿಂದಲೇ ಪಾಪದ ಕೆಲಸ ಮಾಡಿ ಪಾಪದ ಮೂಟೆಯನ್ನು ಹೊತ್ತುಕೊಂಡಿರುತ್ತಾರೆ ಇಂಥವರಿಂದ ನಾಗರೀಕ ಸಮಾಜದಲ್ಲಿ ನಾಗರೀಕರು ತಲೆತಗ್ಗಿಸುತ್ತಾ ಅನಾಗರೀಕ ಸಮಾಜವನ್ನು ಹುಟ್ಟು ಹಾಕುತ್ತಾರೆ.

ರಾಮಾಯಣ
21. ಹನುಮಂತನು ಅಕಂಪನನನ್ನು ಕೊಂದುದು

• ಹಿಂದಿನ ಸಂಚಿಕೆಯಿಂದ

121ನೆಯ ಅಧ್ಯಾಯ

ಮನಸ್ಸಿಗೆ ತೋಚಿದಂತೆ ಅಸಂಬದ್ಧವಾದ ವೀರಾವೇಶದ ಮಾತುಗಳನ್ನೊರೆಯುತ್ತ ದೈತ್ಯನಾಯಕನು ನಾಲ್ದೆಸೆಯನ್ನು ನೋಡುತ್ತ, ಉರಗಪತಿಯಂತೆ ನಿಟ್ಟುಸಿರ್ಗರೆಯುತ್ತ, ತನ್ನ ಕೋಪವನ್ನು ಶಮನ ಮಾಡಿಕೊಳ್ಳಲು ಸಾಧ್ಯವಾಗದೆ, ತನಗೆ ಆಪ್ತನಾದ ವೀರಾಗ್ರಣಿ ಅಕಂಪನನನ್ನು ಕರೆದು ಗೌರವಿಸಿ, ''ನನಗೆ ಹಿತವನ್ನು ಬಯಸಿ, ನನ್ನ ಮನೋರಥವನ್ನು ಪೂರ್ತಿಗೊಳಿಸುವ ರೀತಿಯಲ್ಲಿ ಉಪಾಯಗಳನ್ನು ಆಲೋಚಿಸುತ್ತ, ನಾನು ದುಃಖಿತನಾದರೆ ದುಃಖಿಗೊಳ್ಳುತ್ತ. ಹರ್ಷಗೊಂಡರೆ ಹರ್ಷಗೊಳ್ಳುತ್ತ ಸತತವೂ ಯಾರಿರುತ್ತಾರೆಯೋ ಅವರೇ ಮಿತ್ರರೆಂದು ಹಿರಿಯರು ಹೇಳುವುದುಂಟು. ನೀನು ನನಗೆ ಇಂತಹ ಮಿತ್ರನಾಗಿರುವೆ. ಮನುಷ್ಯನ ಹೆಂಡತಿಯನ್ನು ಕರೆತಂದ ಕಾರಣದಿಂದ ನನ್ನ ಪಟ್ಟಣವನ್ನು ವನಚರರು ಬಂದು ಆಕ್ರಮಿಸಿದ್ದಾರೆ. ಅವರೊಡನೆ ಸಂಧಾನ ಮಾಡಿಕೊಳ್ಳುವುದು ನಮ್ಮ ಘನತೆಗೆ ತಕ್ಕುದಲ್ಲ. ಸುಮ್ಮನಿದ್ದರೆ ಆ ಪ್ಲವಗರಿಂದ ಉಪಟಳಗಳು ತಪ್ಪುವುದಿಲ್ಲ. ಅದೂ ಅಲ್ಲದೆ, ಅದು ದಿನದಿನಕ್ಕೆ ಹೆಚ್ಚುವುದರಲ್ಲಿ ಸಂಶಯವಿಲ್ಲ. ಆದ್ದರಿಂದ, ಮಿತ್ರನೇ, ಇದಕ್ಕೇನು ಉಪಾಯ ಎಂಬುದನ್ನು ಆಲೋಚನೆ ಮಾಡಿ ನನಗೆ ಹೇಳು ಎಂದು ದಶಕಂಧರನು ಮೂದಲಿಸಲು, ದಾನವನ ತಾಮಸಬುದ್ಧಿಗೆ ಅಚ್ಚರಿಗೊಂಡು, ಈ ನಿಷ್ಠುರಕ್ಕೆ ತಕ್ಕುದಾದುದನ್ನು ಹೇಳುತ್ತೇನೆ, ಬಂದದ್ದು ಬರಲಿ ಎಂದುಕೊಂಡು ಅಕಂಪನನು ಈ ರೀತಿ ಹೇಳಿದ ದೇವಾಸುರಸಮೂಹವು ಸಮರಭೂಮಿಯಲ್ಲಿ ತಮ್ಮ ಜೀವಗಳನ್ನುಳುಹಿಕೊಳ್ಳಲು ಸಾಧ್ಯವಾಗದಾದಾಗ ಯಾವಾವ ಸ್ವರೂಪವನ್ನು ಪಡೆದರೆಂಬುದು ಗೊತ್ತಲ್ಲವೇ? ಯಾರು ಯಾವ ಭೂಮಿಯಲ್ಲಿ ಯಾರನ್ನು ಎದುರಿಸಿ ನಿಲ್ಲಬಲ್ಲ, ಯಾವ ಯಾವ ಅವಸ್ಥೆಗಳನ್ನು ಹೊಂದುತ್ತಾನೆ ಎಂಬುದನ್ನು ನನಗೆ ತೋಚಿದಂತೆ ಬಿನ್ನವಿಸಿಕೊಳ್ಳುತ್ತೇನೆ, ಜೀಯ, ಆ ಕಪಿಗಳು ಲಘುಬುದ್ಧಿಯಿಂದ ಸಾಯುವುದಕ್ಕೆಂದು ಈ ಭೂಮಿಗೆ ಬಂದರೇ ಹೊರತು ತ್ರಿದಶದಲ್ಲಣ ರಾವಣಾಸುರನನ್ನು ಗೆಲ್ಲಲು ಸಾಧ್ಯವೇ? ಅವನ ವಿಷಯವನ್ನರಿಯದೇ ಬಂದಿದ್ದಾರೆ. ಈ ವೀರನು ಕೋಪಗೊಂಡರೆ ಹದಿನಾಲ್ಕು ಲೋಕಗಳನ್ನೂ ಮುಳುಗಿಸಬಲ್ಲ ಕಟ್ಟಾಳು ಎಂಬುದನ್ನರಿಯದೆ ಬಂದು ಎಂತು ಉಳಿಯಬಲ್ಲರು'' : ಎಂದು ದೈತ್ಯೇಂದ್ರ ವಿಕ್ರಮವನ್ನು ಅಕಂಪನನು ಪರಿಪರಿಯಾಗಿ ಬಣ್ಣಿಸಿದ. ''ಮೃತ್ಯುವಿನ ಗಂಟಲನ್ನೊತ್ತಿ ಹಲ್ಲುಗಳನ್ನು ಮುರಿದು, ಅಗ್ನಿ ನಿರುತಿಗಳ ಗರ್ವಭಂಗವನ್ನು ಮಾಡುವ ತಮ್ಮ ಚಿತ್ರಕ್ಕೆ ಇಓ ನಡೆಯುವ ಕೋಟ್ಯನುಕೋಟಿ ಯೋಧರು ಶಸ್ತ್ರಗಳನ್ನು ಹಿಡಿದು ಸಿದ್ಧರಾಗಿದ್ದಾರೆ.ಅದರಿಂದ ಈ ಶಾಖಾಮೃಗಗಳ ಜೊತೆಗೆ ಟರಿಹದ ಮನುಷ್ಯರೇನು ತಾನೇ ಮಾಡಬಲ್ಲರು, ಅಹಹಾ! ಅಸಂಖ್ಯ ಮಂದಿ ಹೆಸರಾಂತ ದೈತ್ಯನಾಯಕರಿದ್ದಾರೆ ಯಾರಿಗೆ ಅಪ್ಪಣೆ ಕೊಟ್ಟರೂ ನಿಮಿಷಮಾತದಲ್ಲಿ ಹೋಗಿ ಮನುಜಕೋಡಗಗಳನ್ನು ಸಂಹರಿಸಿ ಬರುತ್ತಾರೆ, ಅದಕ್ಕೇಕೆ ಚಿಂತೆ ಅಸುರೇಂದ್ರನು ಹೇಳಿದುದು ನಡೆಯುವುದಲ್ಲದೆ ಭೂಮಿಸ್ವರ್ಗಪಾತಾಳಗಳಲ್ಲಿ ನಿನಗೆ ಇದಿರಾದವರು ಯಾರಿದ್ದಾರೆ, ದನುಜೇಶ ಎಂದು ಅಕಂಪನನು ತನಗನುಗುಣವಾದ ಮಾತುಗಳನ್ನೇ ನುಡಿದುದನ್ನು ಕೇಳಿದ ಮೂರ್ಯರರಸನು ಅನ ಭುಜಗಳನ್ನು ಹಿಡಿದು ಅಭಿಮಾನದಿಂದ ' ಅಲುಗಾಡಿಸಿ, ಹೀಗೆ ನುಡಿದ ವಿವೇಕ ಹುಟ್ಟುವುದೇನು ಸುಲಭವೇ? ರಾಜಸಭೆಯಲ್ಲಿ ರಾಜನ ಆಂತರ್ಯವನ್ನರಿತು ಮಾತನಾಡದೆ ಮನಬಂದಂತೆ ನುಡಿಯುವವರೇ ಹೆಚ್ಚು ಆದರೆ ನೀನು ಉತ್ಸಾಹದಾಯಕವಾದ ಮಾತುಗಳನ್ನಾಡಿದ್ದೀಯೆ, ಅಂತಹವನು ನೀನೊಬ್ಬನಾದರೂ ಇದ್ದೀಯಲ್ಲ! ಎಂದು ಅವನಿಗೆ ಅಮೂಲ್ಯವಾದ ವಸ್ತ್ರಾಭರಣಗಳನ್ನಿತ್ತು ಸನ್ಮಾನ ಮಾಡಿ ಹೊಗಳಿ ಆನಂತರ, ನೀನೇ ಹೋಗಿ ಪ್ರವಗಸಂತತಿಯನ್ನು ತರಿದು ಈಡಾಡಿ ಬಾ ಎಂದು ಅಪ್ಪಣೆ ಮಾಡಿದ ಒಡೆಯನ ಆಜ್ಞೆಯನ್ನು ಅನುಸರಿಸಿ ಅಕಂಪನನು ಎದ್ದು ಕೈಮುಗಿದು ಹೊರಹೊರಟ. ಚತುರಂಗಸೈನ್ಯವನ್ನು ಒಗ್ಗೂಡಿಸಿ, ದಿವ್ಯ ರಥವನ್ನೇರಿ, ಎಲ್ಲಾ ಬಗೆಯ ಆಯುಧಗಳನ್ನೂ ಜೊತೆಯಲ್ಲಿರಿಸಿಕೊಂಡು, ಮುಖದಲ್ಲಿ ವೀರರಸ ಉಕ್ಕುತ್ತಿರಲು ಅತಿಶಯೋತ್ಸಾಹದಿಂದ ಆಟೋಪದಿಂದ ಮುಂಬರಿದು ಬರಲು ಬೆಟ್ಟಗಳು ಅದುರಿದುವು, ಅಮರತತಿಯು ಬೆಗಡುಗೊಂಡಿತು. ಹೀಗೆ ಅಕಂಪನನು ಹಿಂದುಮುಂದರಿಯದ ಕಾರ್ಯದ ಆವೇಶದಿಂದ ಅಸುರವಾಹಿನಿಯೊಡನೆ, ಜಯಸಿರಿಯನ್ನು ಗಳಿಸುತ್ತೇನೆ ಎಂಬ ಭರವಸೆಯಿಂದ ನಗರದಿಂದ ಹೊರಟ. ಅಷ್ಟರಲ್ಲಿ ಅವನ ಎಡಗಣ್ಣು ಅದುರಿತು, ಮೃಗಪಕ್ಷಿಗಳು ವಿಕಾರವಾದ ಧ್ವನಿಯಿಂದ ಕೂಗಾಡಿದುವು, ಸೂರ್ಯನು ಮೋಡಗಳ ಹಿಂದೆ ಮರೆಯಾದ – ಈ ಪರಿಯ ಅಪಶಕುನಗಳಾದುವು. ಈ ಉತ್ಪಾತಗಳನ್ನು ರಕ್ಕಸನು ಮನಸಿಗೆ ತಂದುಕೊಳ್ಳದೆ ಮಹಾ ವೀರತ್ವದ ಮಾರ್ಗವನ್ನು ಅನುಸರಿಸಿ, ಸಮುದ್ರವು ದಡವನ್ನು ಮೀರಿ ಉಕ್ಕುವಂತೆ, ರಕ್ಕಸನು ದೈತ್ಯಬಲದೊಡನೆ ಬಂದು ಬತ್ತೀಸಾಯುಧಗಳಿಂದ ವಾನರರ ಮೇಲೆ ಕಿನಿಸಿನಿಂದ ದಾಳಿಮಾಡಿದ. ಅವನನ್ನು ನೋಡಿದರೆ ಕಾಲನ ಭೃತ್ಯನಂತೆ ನಿರ್ಭೀತಿಯಿಂದ ಹೋರಾಟ ಮಾಡುವವನಂತಿದ್ದ. ಈ ರೀತಿ ದಾನವನು ಸಕಲ ಸನ್ನಾಹಗಳಿಂದ ವಾನರ ಬಲದ ನಡುವೆ ನುಗ್ಗಿ ಬರಲು, ಸ್ವಾಭಿಮಾನಿಗಳೂ ನಿರ್ಭೀತರೂ ಆದ ವಾನರಯೋಧರು ಬಂಡೆಗಳಿಂದಲೂ ಮರಗಳಿಂದಲೂ ದಾನವರ ಮೇಲೆ ಬಿದ್ದರು.

ಮುಂದುವರೆಯುವುದು

ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಚಾಣಕ್ಯ ನೀತಿ: ಈ 5 ವಿಚಾರಗಳನ್ನು ಗೌಪ್ಯವಾಗಿಡಿ!

ಎಲ್ಲವನ್ನೂ ಎಲ್ಲರ ಮುಂದೆ ಹೇಳಬಾರದು ಎಲ್ಲಿ ಮಾತನಾಡಬೇಕು, ಎಲ್ಲಿ ಮೌನವಾಗಿರಬೇಕು ಎಂಬುದನ್ನು ತಿಳಿದವನೇ ನಿಜವಾದ ಬುದ್ಧಿವಂತಮಾನವ ಜೀವನದಲ್ಲಿ ಬುದ್ಧಿವಂತಿಕೆ ಎಂದರೆ ಕೇವಲ ಜ್ಞಾನವಿರುವುದಲ್ಲ; ಯಾವ ವಿಚಾರವನ್ನು ಯಾರೊಂದಿಗೆ ಹಂಚಿಕೊಳ್ಳಬೇಕು ಎಂಬ ವಿವೇಕವೂ ಆಗಿದೆ. ಪ್ರಾಚೀನ ಭಾರತದ ಮಹಾನ್ ರಾಜನೀತಿಜ್ಞ ಚಾಣಕ್ಯನ ನೀತಿಗಳು ಇಂದಿಗೂ ಬದುಕಿಗೆ ಮಾರ್ಗದರ್ಶನ ನೀಡುತ್ತವೆ. ಅವುಗಳ ಸಾರವನ್ನು ಗಮನಿಸಿದರೆ, ವೈಯಕ್ತಿಕ ಜೀವನದಲ್ಲಿ ಕೆಲವು ವಿಚಾರಗಳನ್ನು ಗೌಪ್ಯವಾಗಿಟ್ಟುಕೊಳ್ಳುವುದು ನಮ್ಮ ನೆಮ್ಮದಿ ಮತ್ತು ಯಶಸ್ಸಿಗೆ ಸಹಕಾರಿಯಾಗುತ್ತದೆ.

ಮುಂದಿನ ಗುರಿಗಳು: ನಮ್ಮ ಕನಸುಗಳು ಮತ್ತು ಯೋಜನೆಗಳನ್ನು ಸಾಧಿಸುವ ಮೊದಲೇ ಎಲ್ಲರಿಗೂ ಹೇಳಬೇಕಾಗಿಲ್ಲ. ಮಾತಿಗಿಂತ ಸಾಧನೆ ದೊಡ್ಡದು. ಗುರಿಯನ್ನು ಘೋಷಿಸುವುದಕ್ಕಿಂತ ಅದನ್ನು ತಲುಪಲು ಶ್ರಮಿಸುವುದು ಮುಖ್ಯ.

ಕುಟುಂಬದ ಸಮಸ್ಯೆಗಳು: ಪ್ರತಿಯೊಂದು ಕುಟುಂಬದಲ್ಲಿಯೂ ಸಮಸ್ಯೆಗಳು ಸಹಜ. ಅವುಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಬದಲು, ವಿಶ್ವಾಸಾರ್ಹ ವ್ಯಕ್ತಿಗಳೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವುದು ಉತ್ತಮ.

ಆರ್ಥಿಕ ವಿಚಾರಗಳು: ನಮ್ಮ ಆದಾಯ, ಉಳಿತಾಯ ಮತ್ತು ಆಸ್ತಿಯ ವಿವರಗಳನ್ನು ಅನಗತ್ಯವಾಗಿ ಎಲ್ಲರೊಂದಿಗೆ ಹಂಚಿಕೊಳ್ಳಬಾರದು. ಹಣಕಾಸಿನ ವಿಚಾರದಲ್ಲಿ ಗೌಪ್ಯತೆ ಮತ್ತು ವಿವೇಚನೆ ಎರಡೂ ಅಗತ್ಯ.

ವೈಯಕ್ತಿಕ ದುರ್ಬಲತೆಗಳು: ನಮ್ಮ ಭಯ, ನೋವು ಮತ್ತು ಭಾವನೆಗಳನ್ನು ಅರ್ಥಮಾಡಿಕೊಳ್ಳುವವರೊಂದಿಗೆ ಹಂಚಿಕೊಳ್ಳುವುದು ತಪ್ಪಲ್ಲ. ಆದರೆ ಅವುಗಳನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯಿರುವವರ ಮುಂದೆ ಎಲ್ಲವನ್ನೂ ಬಿಚ್ಚಿಡಬಾರದು.

ಮುಂದಿನ ನಡೆ ಮತ್ತು ಉಪಕಾರಗಳು: ನಮ್ಮ ಮುಂದಿನ ನಿರ್ಧಾರಗಳನ್ನು ಪ್ರತಿಯೊಬ್ಬರಿಗೂ ವಿವರಿಸುವ ಅಗತ್ಯವಿಲ್ಲ. ಹಾಗೆಯೇ ಮಾಡಿದ ಉಪಕಾರಗಳನ್ನು ಪದೇಪದೇ ಹೇಳಿಕೊಳ್ಳದೆ, ಪ್ರತಿಫಲದ ನಿರೀಕ್ಷೆಯಿಲ್ಲದೆ ಸಹಾಯ ಮಾಡುವುದು ಉತ್ತಮ ಗುಣ.

ಬುದ್ಧಿವಂತಿಕೆ ಎಂದರೆ ಎಲ್ಲವನ್ನೂ ಮರೆಮಾಚುವುದಲ್ಲ; ಯಾವ ವಿಚಾರವನ್ನು ಎಲ್ಲಿ, ಯಾರೊಂದಿಗೆ ಹಂಚಿಕೊಳ್ಳಬೇಕು ಎಂಬುದನ್ನು ಅರಿಯುವುದು.

ಎಲ್ಲರನ್ನೂ ಅನುಮಾನಿಸಬಾರದು, ಆದರೆ ವಿವೇಚನೆಯಿಲ್ಲದೆ ಎಲ್ಲರನ್ನೂ ನಂಬಲೂಬಾರದು.

ನೆನಪಿರಲಿ: ಮಾತು ನಮ್ಮ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ ಮೌನ ನಮ್ಮ ವಿವೇಕವನ್ನು ತೋರಿಸುತ್ತದೆ. ಸಾಧನೆ ನಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತದೆ.

ಶೀತ-ನೆಗಡಿ-ಕೆಮ್ಮಿಗೆ ಮನೆಯಲ್ಲೇ ಮಾಯಾ ಮದ್ದು!

ಋತುಮಾನ ಬದಲಾದಾಗ ಶೀತ, ಕೆಮ್ಮು ಮತ್ತು ಗಂಟಲು ನೋವು ಸಾಮಾನ್ಯವಾಗಿ ಬರುತ್ತದೆ.

ಇವುಗಳಿಗೆ ಜನರು ಔಷಧಿ ತೆಗೆದುಕೊಳ್ಳುತ್ತಾರೆ. ಕೆಲವರು ಮನೆಮದ್ದುಗಳನ್ನೂ ಬಳಸುತ್ತಾರೆ. ಅವುಗಳಲ್ಲಿ ಒಂದು ಶುಂಠಿ ಮತ್ತು ತುಳಸಿ ಚಹಾ . ಶೀತ ಮತ್ತು ಕೆಮ್ಮು ಬಂದಾಗ ಇದನ್ನು ಸಾಮಾನ್ಯವಾಗಿ ಕುಡಿಯುತ್ತಾರೆ.

ಇದನ್ನು ಬಹಳ ಹಿಂದಿನಿಂದಲೂ ಮನೆಮದ್ದಾಗಿ ಬಳಸುತ್ತಾ ಬಂದಿದ್ದಾರೆ. ಜಿಂಜರಾಲ್‌ಗಳಂತಹ ಸಕ್ರಿಯ ವಸ್ತುಗಳು ಇರುವುದರಿಂದ ಶುಂಠಿ ಮತ್ತು ತುಳಸಿಯನ್ನು ಉರಿಯೂತ ಕಡಿಮೆ ಮಾಡಲು ನೈಸರ್ಗಿಕ ಮದ್ದು ಎಂದು ಗುರುತಿಸುತ್ತಾರೆ. ತುಳಸಿಯಲ್ಲೂ ಹಲವು ಉಪಯುಕ್ತ ರಾಸಾಯನಿಕಗಳು ಇವೆ.

ಆದರೆ ಈ ಗಿಡಮೂಲಿಕೆಗಳಿಂದ ಮಾಡಿದ ಚಹಾ ಸಾಮಾನ್ಯ ಶೀತ ಅಥವಾ ಕೆಮ್ಮನ್ನು ಚೆನ್ನಾಗಿ ಗುಣಪಡಿಸುತ್ತದೆ ಎಂದು ಹೇಳಲು ಸಾಕಷ್ಟು ಪುರಾವೆಗಳಿಲ್ಲ.

ಆದ್ದರಿಂದ ಇವುಗಳ ಪ್ರಯೋಜನ ಸೀಮಿತವಾಗಿದೆ.

ಹೊಟ್ಟೆಯ ಕೊಬ್ಬು ಕರಗಿಸಲು ಮಜ್ಜಿಗೆ ಸಹಾಯಕವೇ? ತೂಕ ಇಳಿಸುವವರು ತಿಳಿಯಬೇಕಾದ ವಿಷಯಗಳು

ತೂಕ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿರುವವರು ಆಹಾರದ ಜೊತೆಗೆ ತಾವು ಕುಡಿಯುವ ಪಾನೀಯಗಳ ಬಗ್ಗೆಯೂ ಗಮನ ಹರಿಸುವುದು ಮುಖ್ಯ. ಹೆಚ್ಚಿನ ಸಕ್ಕರೆ ಹೊಂದಿರುವ ಪಾನೀಯಗಳ ಬದಲಿಗೆ ಮಜ್ಜಿಗೆಯನ್ನು ಸೇವಿಸುವುದು ಉತ್ತಮ ಆಯ್ಕೆಯಾಗಬಹುದು. ಅದರಲ್ಲೂ ಮಜ್ಜಿಗೆಗೆ ಸ್ವಲ್ಪ ಜೀರಿಗೆ ಪುಡಿ ಸೇರಿಸಿ ಕುಡಿಯುವುದರಿಂದ ರುಚಿಯ ಜೊತೆಗೆ ಕೆಲವು ಪೌಷ್ಟಿಕ ಪ್ರಯೋಜನಗಳೂ ದೊರೆಯುತ್ತವೆ. ಆದರೆ ಇದನ್ನು ಕುಡಿದ ಮಾತ್ರಕ್ಕೆ ಹೊಟ್ಟೆಯ ಸುತ್ತಲಿನ ಕೊಬ್ಬು ಕರಗುತ್ತದೆ ಎಂಬುದಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳಿಲ್ಲ.

ಸಾಮಾನ್ಯವಾಗಿ ಮಜ್ಜಿಗೆ ಮೊಸರಿನಿಂದ ತಯಾರಿಸುವ ಪಾನೀಯವಾಗಿದ್ದು, ಅದರಲ್ಲಿರುವ ಪೌಷ್ಟಿಕಾಂಶಗಳು ತಯಾರಿಸುವ ವಿಧಾನವನ್ನು ಅವಲಂಬಿಸಿರುತ್ತವೆ. ಜೀರಿಗೆಯಲ್ಲಿ ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿರುವ ಕೆಲವು ಸಂಯುಕ್ತಗಳಿವೆ. ಜೀರಿಗೆಯ ಸೇವನೆ ದೇಹದ ತೂಕದ ಮೇಲೆ ಪರಿಣಾಮ ಬೀರುತ್ತದೆಯೇ ಎಂಬುದರ ಕುರಿತು ಕೆಲವು ಅಧ್ಯಯನಗಳು ನಡೆದಿವೆ. ಆದರೆ ಈ ಫಲಿತಾಂಶಗಳು ಎಲ್ಲರಿಗೂ ಅನ್ವಯಿಸುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಮಜ್ಜಿಗೆಗೆ ಹುರಿದು ಪುಡಿ ಮಾಡಿದ ಜೀರಿಗೆಯನ್ನು ಸೇರಿಸುವುದರಿಂದ ರುಚಿಕರವಾದ ಪಾನೀಯವನ್ನು ತಯಾರಿಸಬಹುದು. ಸಕ್ಕರೆ ಸೇರಿಸದೆ ಕುಡಿಯುವುದರಿಂದ ಅನಗತ್ಯ ಸಕ್ಕರೆ ಸೇವನೆಯನ್ನು ತಪ್ಪಿಸಬಹುದು. ಹೊಟ್ಟೆಯ ಸುತ್ತಲಿನ ಕೊಬ್ಬನ್ನು ಕಡಿಮೆ ಮಾಡಲು ಯಾವುದೇ ಒಂದು ಪಾನೀಯ ಮಾತ್ರ ಸಾಕಾಗುವುದಿಲ್ಲ. ದೇಹದ ತೂಕ ಇಳಿಸಲು ಆಹಾರದ ಮೂಲಕ ಪಡೆಯುವ ಶಕ್ತಿ ಮತ್ತು ದೇಹವು ಬಳಸುವ ಶಕ್ತಿಯ ನಡುವೆ ಸಮತೋಲನ ಅಗತ್ಯ. ಹೆಚ್ಚಿನ ಕ್ಯಾಲೊರಿ ಹೊಂದಿರುವ ಸಿಹಿ ಪಾನೀಯಗಳ ಬದಲಿಗೆ ಮಜ್ಜಿಗೆ ಕುಡಿಯುವುದರಿಂದ ಒಟ್ಟಾರೆ ಕ್ಯಾಲೊರಿ ಸೇವನೆಯನ್ನು ಕಡಿಮೆ ಮಾಡಿಕೊಳ್ಳಲು ನೆರವಾಗಬಹುದು. ಆದರೆ ಸಾಮಾನ್ಯ ಆಹಾರದ ಜೊತೆಗೆ ಹೆಚ್ಚುವರಿಯಾಗಿ ಮಜ್ಜಿಗೆ ಕುಡಿದರೆ ಕೊಬ್ಬು ಕರಗುತ್ತದೆ ಎಂದು ಭಾವಿಸಬಾರದು. ಆರೋಗ್ಯಕರ ಆಹಾರ, ನಿಯಮಿತ ವ್ಯಾಯಾಮ ಮತ್ತು ಸಾಕಷ್ಟು ನಿದ್ರೆ ತೂಕ ನಿಯಂತ್ರಣಕ್ಕೆ ಮುಖ್ಯವಾಗಿವೆ. ಒಂದು ಲೋಟ ಮಜ್ಜಿಗೆಗೆ ಕಾಲು ಚಮಚದಷ್ಟು ಹುರಿದು ಪುಡಿ ಮಾಡಿದ ಜೀರಿಗೆಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ರುಚಿಗಾಗಿ ಸ್ವಲ್ಪ ಕೊತ್ತಂಬರಿ ಸೊಪ್ಪು ಅಥವಾ ಪುದೀನಾ ಸೇರಿಸಬಹುದು. ಅಗತ್ಯವಿದ್ದರೆ ನೀರು ಬೆರೆಸಿ ತೆಳುವಾಗಿಸಬಹುದು. ಸಕ್ಕರೆ ಸೇರಿಸದಿರುವುದು ಉತ್ತಮ. ರಕ್ತದೊತ್ತಡ ಇರುವವರು ಉಪ್ಪನ್ನು ಮಿತವಾಗಿ ಬಳಸಬೇಕು.

ಹಾಲಿನ ಉತ್ಪನ್ನಗಳನ್ನು ಸೇವಿಸಿದಾಗ ಹೊಟ್ಟೆ ಉಬ್ಬರ ಅಥವಾ ಅತಿಸಾರ ಉಂಟಾಗುವವರು ಮಜ್ಜಿಗೆಯನ್ನು ಮಿತವಾಗಿ ಸೇವಿಸಬೇಕು. ಅಧಿಕ ರಕ್ತದೊತ್ತಡ ಇರುವವರು ಉಪ್ಪಿನ ಪ್ರಮಾಣದ ಬಗ್ಗೆ ಗಮನ ಹರಿಸಬೇಕು. ಮಧುಮೇಹ ಅಥವಾ ಮೂತ್ರಪಿಂಡದ ಸಮಸ್ಯೆ ಇರುವವರು ತಮ್ಮ ಆರೋಗ್ಯಕ್ಕೆ ಅನುಗುಣವಾಗಿ ಆಹಾರವನ್ನು ಆಯ್ಕೆ ಮಾಡಿಕೊಳ್ಳಲು ವೈದ್ಯರ ಸಲಹೆ ಪಡೆಯುವುದು ಉತ್ತಮ.

ಲವಂಗದ ನೀರನ್ನು ಕುಡಿಯೋದ್ರಿಂದ ಲಭಿಸುವ ಪ್ರಯೋಜನಗಳೇನು ಗೊತ್ತೇ?

ಗಾತ್ರದಲ್ಲಿ ಸಣ್ಣದಾಗಿದ್ದರೂ, ಲವಂಗವು ಅದ್ಭುತ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಹೌದು ಭಾರತೀಯ ಪಾಕಪದ್ಧತಿಯಲ್ಲಿ ಹೇರಳವಾಗಿ ಬಳಸಲಾಗುವ ಲವಂಗ ಕೇವಲ ಮಸಾಲೆ ಪದಾರ್ಥ ಮಾತ್ರವಲ್ಲ ಆರೋಗ್ಯದ ನಿಧಿಯೂ ಆಗಿದೆ. ಉತ್ಕರ್ಷಣ ನಿರೋಧಕ ಗುಣಗಳಿಂದ ಸಮೃದ್ಧವಾಗಿರುವ ಈ ಮಸಾಲೆ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು, ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಲು ಸಹಕಾರಿಯಾಗಿದೆ. ಆದ್ದರಿಂದಲೇ ಸಾಂಪ್ರದಾಯಿಕ ಔಷಧದಲ್ಲಿಯೂ ಇದನ್ನು ಬಳಸಲಾಗುತ್ತದೆ. ಇಷ್ಟೆಲ್ಲಾ ಆರೋಗ್ಯ ಪ್ರಯೋಜನಗಳನ್ನು ಹೊಂದಿರುವ ಲವಂಗವನ್ನು ಒಂದು ಗ್ಲಾಸ್ ನೀರಿಗೆ ಹಾಕಿ ರಾತ್ರಿ ಮಲಗುವ ಮುನ್ನ ಕುಡಿದರೆ ದೇಹಕ್ಕೆ ಏನೆಲ್ಲಾ ಲಾಭಗಳು ಲಭಿಸುತ್ತವೆ ಎಂಬುದನ್ನು ನೋಡೋಣ ಬನ್ನಿ. ಅನೇಕ ಜನರು ರಾತ್ರಿಯಲ್ಲಿ ಹೊಟ್ಟೆಯುಬ್ಬರ ಮತ್ತು ಗ್ಯಾಸ್‌ನಂತಹ ಜೀರ್ಣಕಾರಿ ಸಮಸ್ಯೆಗಳನ್ನು ಅನುಭವಿಸುತ್ತಾರೆ. ನೀವು ಈ ಸಮಸ್ಯೆಗಳಿಂದ ಬಳಲುತ್ತಿದ್ದರೆ, ಲವಂಗದ ನೀರನ್ನು ಕುಡಿಯುವುದರಿಂದ ಈ ಸಮಸ್ಯೆಗೆ ಪರಿಹಾರವನ್ನು ಪಡೆಯಬಹುದು. ಇದಲ್ಲದೆ ಲವಂಗವು ಅತಿಸಾರ ಮತ್ತು ಎದೆಯುರಿ ಮುಂತಾದ ಲಕ್ಷಣಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ನಿಮ್ಮ ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು ನೀವು ರಾತ್ರಿ ಮಲಗುವ ಮುನ್ನ ಲವಂಗದ ನೀರನ್ನು ಸೇವನೆ ಮಾಡಬಹುದು.

ಲವಂಗವು ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿದ್ದು, ಇದರ ನೀರನ್ನು ಕುಡಿಯುವುದರಿಂದ ಹಾನಿಕಾರಕ ಸೋಂಕುಗಳ ವಿರುದ್ಧ ಹೋರಾಡುವ ನಿಮ್ಮ ದೇಹದ ಸಾಮರ್ಥ್ಯವ ಹೆಚ್ಚುತ್ತದೆ. ಲವಂಗದಲ್ಲಿರುವ ಯುಜೆನಾಲ್ ಅಂಶ ಬಾಯಿಯ ಆರೋಗ್ಯಕ್ಕೂ ಅಪಾರ ಪ್ರಯೋಜನಗಳನ್ನು ನೀಡುತ್ತವೆ. ಯುಜೆನಾಲ್ ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು, ಬಾಯಿಯಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ತಡೆಯಲು ಸಹಾಯ ಮಾಡುತ್ತದೆ.

ಮುಂಚೂಣಿಗೆ ತಂದದ್ದಕ್ಕೆ ಆನೆ 'ಸೋಮಣ್ಣ' ಬೆದರಿತೇ?

ಸೋಮಣ್ಣ ಆನೆ ಮೆರವಣಿಗೆಯಲ್ಲಿ ಮುಂದೆ ಇದ್ದು, ಗಮನ ಸೆಳೆಯಲಿ ಎಂದು ಜನಪ್ರತಿನಿಧಿಯೊಬ್ಬರು ಅರಣ್ಯಾಧಿಕಾರಿಗಳ ಮೇಲೆ ಒತ್ತಡ ಹಾಕಿದ್ದರು

• **ಉದಯವಾಹಿನಿ ಶಿವಮೊಗ್ಗ:**

ಶಿವಮೊಗ್ಗ ದಸರಾ ಜಂಬೂಸವಾರಿ ವೇಳೆ ಅಂಬಾರಿ ಹೊತ್ತಿದ್ದ ಆನೆ 'ಸೋಮಣ್ಣ'ನನ್ನು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು

1 : ಅದನ್ನು ಆನೆ 'ಬಹದ್ದೂರ್' ಹಿಂಬಾಲಿಸಿತ್ತು
2 : ಮೈ ಕೊಡವಿದ್ದರಿಂದ ಅಂಬಾರಿ ಕೆಳಗೆ ಬಿದ್ದಿತು
3 : ದೇವಿಗೆ ಹಾಕಲಾಗಿದ್ದ ಚಿನ್ನಾ ಸುರಕ್ಷಿತವಾಗಿವೆ

ಆನೆಗಳ ಸಾಲಿನಿಂದ ಮುಂದಕ್ಕೆ ಕರೆತಂದಿದ್ದು ಅವಘಡಕ್ಕೆ ಕಾರಣ ಎಂಬುದು ಸಕ್ರೆಬೈಲು ಆನೆ ಶಿಬಿರದ ಮಾವುತ ಕಾವಾಡಿಗಳ ಅಳಲು. ಶಿವಪ್ಪ ನಾಯಕನ ಅರಮನೆ ಮುಂಭಾಗದಿಂದ ಮೆರವಣಿಗೆ ಹೊರಟಾಗ ಆನೆ ಸಾಗರ ಮುಂದೆ ಇತ್ತು. ಅದರ ಹಿಂದೆ ಅಂಬಾರಿ ಹೊತ್ತಿದ್ದ ಸೋಮಣ್ಣ ಇದ್ದ. ಅದನ್ನು ಆನೆ 'ಬಹದ್ದೂರ್' ಹಿಂಬಾಲಿಸಿತ್ತು. ಅಲ್ಲಿಂದ ಜೈನ ಮಂದಿರದವರೆಗೂ ಮೆರವಣಿಗೆ ಸಾಂಗವಾಗಿ ನಡೆದಿತ್ತು. 'ಸೋಮಣ್ಣ ಆನೆ ಮೆರವಣಿಗೆಯಲ್ಲಿ ಮುಂದೆ ಇದ್ದು, ಅಂಬಾರಿ ಮುಂಚೂಣಿಯಲ್ಲಿ ಗಮನ ಸೆಳೆಯಲಿ ಎಂದು ಜನಪ್ರತಿನಿಧಿಯೊಬ್ಬರು ಅರಣ್ಯಾಧಿಕಾರಿಗಳ ಮೇಲೆ ಒತ್ತಡ ಹಾಕಿದ್ದರು. ಹೀಗಾಗಿ ಸಾಲಿನಲ್ಲಿ ಮಧ್ಯ ಇದ್ದ ಸೋಮಣ್ಣನನ್ನು ಮುಂದಕ್ಕೆ ಕರೆಸಿದರು. ಅದಕ್ಕೆ ನಮ್ಮ (ಮಾವುತ-ಕಾವಾಡಿ) ಒಪ್ಪಿಗೆ ಇರಲಿಲ್ಲ. ತಾಲೀಮಿನ ವೇಳೆ 'ಸೋಮಣ್ಣ' ಕುಮ್ಕಿ ಆನೆ ಆಗಿ ತರಬೇತಿ ಹೊಂದಿತ್ತು.

ಉದಯವಾಹಿನಿ ಚಿತ್ರ

ಅದು ಸಾಗರನ ಬೆನ್ನ ಹಿಂದೆಯೇ ಇರುತ್ತಿತ್ತು. ಆದರೆ ಇಲ್ಲಿ ಏಕಾಏಕಿ ಮುಂದೆ ಹಾಕಿದ್ದರಿಂದ ಅದಕ್ಕೆ ಅಭದ್ರತೆ ಶುರುವಾಯಿತು. ಶಬ್ದಕ್ಕೆ ಬೆದರಿ ತನ್ನ ಸ್ವಸ್ಥಾನಕ್ಕೆ ತೆರಳಲು ಹಿಂದಕ್ಕೆ ಹೊರಟಿದ್ದರಿಂದ ಅವಘಡ ನಡೆಯಿತು' ಎಂದು ಮಾವುತರೊಬ್ಬರು ವಾಸ್ತವತೆ ಬಿಚ್ಚಿಟ್ಟರು. ಅಂಬಾರಿಯಲ್ಲಿ ವಿರಾಜಮಾನವಾಗಿದ್ದ ಬೆಳ್ಳಿಯ ಚಾಮುಂಡೇಶ್ವರಿ ಮೂರ್ತಿಯ ಕೈ ಅವಘಡದ ವೇಳೆ ಮುರಿದಿದೆ. ಆದರೆ, ದೇವಿಗೆ

> ಜನಸಂದಣಿ ಮತ್ತು ಗದ್ದಲವನ್ನು ತಡೆಯುವ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ಆನೆಗಿದೆಯೇ ಎಂಬುದನ್ನು ಅಧಿಕಾರಿಗಳು ಖಚಿತಪಡಿಸಿಕೊಂಡ ನಂತರವೇ ಅನುಮತಿ ನೀಡಬೇಕು. ಕಾರ್ಯಕ್ರಮದ ಉದ್ದಕ್ಕೂ ಆನೆಗಳು ಹಾಗೂ ಸಾರ್ವಜನಿಕರ ಭದ್ರತೆಗೆ ಸೂಕ್ತ ರಕ್ಷಣಾತ್ಮಕ ವ್ಯವಸ್ಥೆಗಳನ್ನು ಮಾಡಿರಬೇಕು.
> -ಕೆ.ಟಿ.ಹನುಮಂತಪ್ಪ, ಶಿವಮೊಗ್ಗ ಸಿಸಿಎಫ್

ಹಾಕಲಾಗಿದ್ದ ಚಿನ್ನಾಭರಣ ಸುರಕ್ಷಿತವಾಗಿವೆ. ದೇವರ ದಯೆಯಿಂದ ಆನೆ ಹಿಂದಕ್ಕೆ ಮರಳಿತು. ಅದರ ಬದಲಿಗೆ ಮುಂದೆ ಸಾಗಿ ಜನ ಜಂಗುಳಿಯ ನಡುವೆ ನುಗ್ಗಿದ್ದರೆ ದೊಡ್ಡ ಮಟ್ಟದಲ್ಲಿ ಜೀವ ಹಾನಿ ಆಗುತ್ತಿತ್ತು ಎಂದು ಘಟನೆಯ ಪ್ರತ್ಯಕ್ಷದರ್ಶಿಯೂ ಆದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಬದರಿನಾಥ್ ಪ್ರತಿಕ್ರಿಯಿಸಿದರು.

'ಅರಿವಳಿಕೆ ಚುಚ್ಚುಮದ್ದು ಹೊಡೆದಾಗ ಅದು ಮೈ ಕೊಡವಿದ್ದರಿಂದ ಅಂಬಾರಿ ಕೆಳಗೆ ಬಿದ್ದಿತು. ಕೊನೆಯಲ್ಲಿ ದೇವಸ್ಥಾನದ ಆವರಣ ಪ್ರವೇಶಿಸಿದ ಆನೆ ಇಲ್ಲಿ ಯಾವುದೇ ಹಾನಿ ಮಾಡಲಿಲ್ಲ. ಸುಮ್ಮನೆ ನಿಂತುಕೊಂಡಿತು' ಎಂದು ಘಟನೆಯನ್ನು ನೆನಪಿಸಿಕೊಂಡರು. ಅದರ ಭಾಗವಾಗಿ ಮೆರವಣಿಗೆ ಸಂದರ್ಭದ ವಿಡಿಯೊ, ತಾಲೀಮಿನ ಸಂದರ್ಭದಲ್ಲಿನ ತರಬೇತಿಯ ರೀತಿಯ ಕುರಿತಾದ ವಿಡಿಯೊ ಸಾಕ್ಷ್ಯಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

> ಸಾಮಾನ್ಯವಾಗಿ ಆನೆಗಳು ನಡೆಯುತ್ತಲೇ ಇರಬೇಕು. ಆದರೆ ಇಲ್ಲಿ ವಾದ್ಯ, ಕಲಾ ತಂಡಗಳ ಪ್ರದರ್ಶನ ಕಾರಣಕ್ಕೆ ಗಂಟೆಗಟ್ಟಲೇ ಆನೆಗಳು ನಿಲ್ಲಬೇಕಾಯಿತು. ಭಾರ ಹೊತ್ತು ಹೆಚ್ಚು ಹೊತ್ತು ನಿಂತಿದ್ದರಿಂದಲೂ ಆನೆಗಳು ಬೆದರುತ್ತವೆ ಎಂದು ಅವರು ಹೇಳುತ್ತಾರೆ.
> -ಮಾವುತ ಕಾವಾಡಿ

ಶಿವಮೊಗ್ಗ ದಸರಾ ಅದ್ದೂರಿಯಾಗಿ ಯಶಸ್ಸು ಕಂಡಿದೆ. ಈ ನಡುವೆ ಒಂದು ಸಣ್ಣ ಅವಘಡ ಸಂಭವಿಸಿದ್ದು, ಅದಕ್ಕೆ ನಾವೆಲ್ಲರೂ ಹೊಣೆಗಾರರಾಗಿದ್ದೇವೆ' ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಹೇಳಿದರು. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಮೊದಲ ಬಾರಿ ಸೋಮಣ್ಣ ಆನೆಗೆ ಅಂಬಾರಿ ಹೊರಿಸಿದ್ದು. ಅದಕ್ಕೆ ಹೀಗಾಗಿರಬಹುದು. ಲೋಪಗಳಿದ್ದರೆ ತನಿಖೆ ನಡೆಯುತ್ತದೆ.

ಅನುಮಾನಗಳಿಗೆ ನಮ್ಮ ವಿರೋಧವಿಲ್ಲ. ಮುಂದಿನ ವರ್ಷವೂ ಅಂಬಾರಿ ನಡೆಯಬೇಕು. ದೇವಿಯ ಒಂದೂ ಆಭರಣ ವ್ಯತ್ಯಾಸವಾಗಿಲ್ಲ. ಎಲ್ಲವೂ ಇದೆ. ಪಾಲಿಕೆಯದ್ದೇ ನಾಗರಿಕರ ಹಣದಲ್ಲೇ ಹಾನಿಯ ನಷ್ಟ ಭರಿಸುವ ಕಾರ್ಯ ನಡೆಯುತ್ತದೆ' ಎಂದರು. 'ಚಾಮುಂಡೇಶ್ವರಿ ತಾಯಿ ನಮ್ಮೆಲ್ಲರನ್ನೂ ರಕ್ಷಿಸಿದ್ದಾಳೆ.

ಅರಣ್ಯ ಇಲಾಖೆಯವರು ಕೂಡ ನಿಷ್ಠೆಯಿಂದ ತಮ್ಮ ಕಾರ್ಯ ಮಾಡಿದ್ದಾರೆ. ರಕ್ಷಣಾ ಇಲಾಖೆ ಮತ್ತು ಸಂಘ ಸಂಸ್ಥೆಗಳು ನಮ್ಮೊಂದಿಗೆ ಕೈಜೋಡಿಸಿವೆ. ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ' ತಿಳಿಸಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ ಚಿಂಚೋಳಿ ಶಾಂತಿಯುತ ಮತದಾನ ! ಶೇ.90.44ರಷ್ಟು ಮತ ಚಲಾವಣೆ

• **ಉದಯವಾಹಿನಿ,ಚಿಂಚೋಳಿ:**

ಕರ್ನಾಟಕ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಯ ಮತದಾನ ಚಿಂಚೋಳಿ ತಾಲ್ಲೂಕಿನಲ್ಲಿ ಶಾಂತಿಯುತವಾಗಿ ಜರುಗಿದ್ದು,ಶೇ.90.44ರಷ್ಟು ಮತದಾನವಾಗಿದೆ. ಬೆಳಿಗ್ಗೆ 07ಗಂಟೆಯಿಂದ ಸಾಯಂಕಾಲದವರೆಗೆ ಕಾಂಗ್ರೆಸ್ ಬಿಜೆಪಿ ಪಕ್ಷದ ರಾಜಕೀಯ ಮುಖಂಡರು ಚಿಂಚೋಳಿ-ಸುಲೇಪೇಟ-ಐನಾಪೂರ ಮತಗಟ್ಟೆಗೆರೆ ಹೊರಗೆ ಶಾಮಿಯಾನ ಹಾಕಿಕೊಂಡು ಮತದಾರರಿಗೆ ಮತದಾನದ ಹೆಸರು ಮತ್ತು ಕ್ರಮಸಂಖ್ಯೆವುಳ್ಳ ಚೀಟಿಗಳು ನೀಡುತ್ತಾ ತಮ್ಮ ತಮ್ಮ ಅಭ್ಯರ್ಥಿಗಳ ಪರವಾಗಿ ಮತ ನೀಡುವಂತೆ ಮನವರಿಕೆ ಮಾಡುವುದು ಕಸರತ್ತು ಮಾಡುವುದು ಕಂಡುಬಂತ್ತು.

ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚಿಂಚೋಳಿ,ಐನಾಪುರ ಹಾಗೂ ಸುಲೇಪೇಟ ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯು ಶಾಂತಿಯುತವಾಗಿ ನಡೆಯಿತು,ಒಟ್ಟು 450 ಮತದಾರರ ಪೈಕಿ 407 ಮತದಾರರು ಮತದಾನದ ಹಕ್ಕು ಚಲಾಯಿಸಿದ್ದಾರೆ. ಇವರಲ್ಲಿ 283 ಪುರುಷರು ಹಾಗೂ 124 ಮಹಿಳೆಯರು ಮತದಾನ ಮಾಡಿದ್ದಾರೆ.

ಮತಗಟ್ಟೆವಾರು ವಿವರ:-ಚಿಂಚೋಳಿ ಮತಗಟ್ಟೆ ಸಂಖ್ಯೆ 96ರಲ್ಲಿ 131 ಪುರುಷರು,74 ಮಹಿಳೆಯರು ಸೇರಿ ಒಟ್ಟು 205 ಮತದಾರರು ಮತ ಚಲಾಯಿಸಿದ್ದಾರೆ,ಐನಾಪುರ

ಉದಯವಾಹಿನಿ ಚಿತ್ರ

ಮತಗಟ್ಟೆ ಸಂಖ್ಯೆ 97ರಲ್ಲಿ 73 ಪುರುಷರು,23 ಮಹಿಳೆಯರು ಸೇರಿ 96 ಮತದಾರರು ಮತದಾನ ಮಾಡಿದ್ದಾರೆ,ಸುಲೇಪೇಟ ಮತಗಟ್ಟೆ ಸಂಖ್ಯೆ 98ರಲ್ಲಿ 79 ಪುರುಷರು ಹಾಗೂ 27 ಮಹಿಳೆಯರು ಸೇರಿ ಒಟ್ಟು 106ಮತದಾರರು ಮತ ಚಲಾಯಿಸಿದ್ದಾರೆ.ತಾಲ್ಲೂಕಿನ ಮೂರು ಮತಗಟ್ಟೆಗಳಲ್ಲಿಯೂ ಮತದಾನ ಶಾಂತಿಯುತವಾಗಿ ಮುಕ್ತಾಯಗೊಂಡಿದ್ದು ಒಟ್ಟಾರೆ ಶೇ.90.44ರಷ್ಟು ಮತದಾನವಾಗಿದೆ.

ಮತದಾನದ ಮತಗಟ್ಟೆಗಳಿಗೆ ಮತದಾನ ವಿಕ್ಷಿಸಲು ಕ್ಷೇತ್ರದ ಶಾಸಕ ಡಾ.ಅವಿನಾಶ ಜಾಧವ ಮತ್ತು ಕಾಂಗ್ರೆಸ್ ಮುಖಂಡರು ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ಅವರು ಚಿಂಚೋಳಿ ಐನಾಪೂರ ಸುಲೇಪೇಟ ಮತಗಟ್ಟೆಗಳಿಗೆ ತೆರಳಿ ಮತದಾನದ ವಿವರ ಪಡೆದರು,ಕಾರ್ಯಕರ್ತರಿಗೆ ಭೇಟಿಯಾಗಿ ಮತದಾನದ ಕುರಿತು ಮಾಹಿತಿ ಪಡೆದುಕೊಂಡರು.

ಅನೀಲ ಜಮಾದಾರ,ಬಸವರಾ ಮಾಲಿ,ವಿಜಯಕುಮಾರ್ ಚೆಂಗಟಾ,ಅಬ್ದುಲ್ ಬಾಷೀದ್,ಶರಣುಪಾಟೀಲ್,ಕೆಎಂಬಾರಿ,ಲಕ್ಷ್ಮಣಆವುಂಟಿ,ಚಂದ್ರಶೇಖರ ಗುತ್ತೇದಾರ, ಪ್ರೇಮಸಿಂಗ್ ಜಾಧವ,ರಾಜು ಪವ್ಹಾರ,ಚಂದ್ರಶೇಟ್ಟಿ ಜಾಧವ,ಶ್ರೀಮಂತ ಕಟ್ಟಿಮನಿ,ರಾಮಶೇಟ್ಟಿ ಪವ್ಹಾರ,ಅಶೋಕ ಚವ್ಹಾಣ,ಬುರಾನ್ ಪಟೇಲ್,ಚಾಂದಪಾಷ ಮೋಮಿನ್,ರಜಾಕ್ ಪಟೇಲ,ಶಾಮರಾವ ಮಾದೇಶಿ,ಮಹೇಶ ಬೇಮಳಗಿ,ಶರಣು ಸೊಂತ,ಶರಣು ಮೆಡಿಕಲ್,ಅತೀಶ ಪವ್ಹಾರ,ಶಿವಕುಮಾರ ಸಜ್ಜನ, ಮಹಾರುದ್ರಪ್ಪಾ ದೇಸಾಯಿ,ನಾಗೇಶ,ಮುಕುಂದ ದೇಶಪಾಂಡೆ, ನಾಗುರಾವ ಬಾಸೂದೆ,ಅಂಬರೀಶ್ ಗಣಾಪೂರ,ರಾಜೇಂದ್ರ ವರ್ಮಾ,ರೇವಪ್ಪ ಉಪ್ಪಿನ,ಭೀಮಶೇಟ್ಟಿ ಮುರುಡಾ,ಹಣಮಂತ ಪೂಜಾರಿ,ಮಾಣಿಕರಾವ ಗುಲಗಂಜಿ,ರಾಮರೆಡ್ಡಿ ಪೋಲಿಸ್ ಪಾಟೀಲ,ಸೇರಿದಂತೆ ಬಿಜೆಪಿ ಕಾಂಗ್ರೆಸ್ ಕಾರ್ಯಕರ್ತರು ಪದಾಧಿಕಾರಿಗಳು ಇದ್ದರು.

ಜನಮನ ಸೂರೆಗೊಂಡ ವಿಶೇಷ ಭದ್ರಾರತಿ

• **ಉದಯವಾಹಿನಿ ಬಾಳೆಹೊನ್ನೂರು:**

ಪಟ್ಟಣದ ದುರ್ಗಾ ದೇವಿ ನವರಾತ್ರಿ ಪೂಜಾ ಸಮಿತಿಯು ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ, ಬುಧವಾರ ಭದ್ರಾ ನದಿ ತಟದಲ್ಲಿ ಆಯೋಜಿಸಿದ್ದ ಭದ್ರಾರತಿ ಧಾರ್ಮಿಕ ಕಾರ್ಯಕ್ರಮ ವೈಭವದಿಂದ ನಡೆಯಿತು.

ದುರ್ಗಾ ಸಮಿತಿಯಿಂದ 3ನೇ ಬಾರಿಗೆ ಭದ್ರಾ ನದಿಗೆ ವಿಶೇಷ ಪೂಜೆ ಸಲ್ಲಿಸಿ, ಕಳಶ ರೂಪದಲ್ಲಿ ಗಂಗೆಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಬಳಿಕ ಕಾಶಿ, ಹರಿದ್ವಾರ, ಋಷಿಕೇಶದಲ್ಲಿ ನಡೆಯುವ ಗಂಗಾರತಿ ಮಾದರಿಯಲ್ಲಿ ತುಂಬಿ ಹರಿಯುವ ಭದ್ರಾ ನದಿಗೆ ಪಂಚ ಅರ್ಚಕರ ಸಮ್ಮುಖದಲ್ಲಿ ದೂಪಾರತಿ, ಏಕಾರತಿ ನೆರವೇರಿಸಿ ಪಂಚಲೋಹದ ಆರತಿ ತಟ್ಟೆಯಲ್ಲಿ ಮೂರು ಬಾರಿ ಭದ್ರೆಗೆ ಆರತಿ ಬೆಳಗಲಾಯಿತು. ನಂತರ ಶಂಖ, ಜಾಗಟೆ, ಡಮರುಗ, ಚಾಮರದ ಸೇವೆ ಬಳಿಕ ಜನರು ಭದ್ರಾನದಿಯ ಒಡಲಿಗೆ ವಿವಿಧ ಪುಷ್ಪಗಳನ್ನು ಅರ್ಪಿಸಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಡಿ. ಮಹೇಂದ್ರ ಮಾತನಾಡಿ, 'ಮಲೆನಾಡು ಮತ್ತು ಬಯಲುಸೀಮೆಯ ರೈತರ ಜೀವನಾಡಿಯಾದ ಭದ್ರಾ ನದಿಗೆ 2 ವರ್ಷಗಳಿಂದ ಗಂಗಾರತಿ ಮಾದರಿಯಲ್ಲಿ, ಭದ್ರಾರತಿಯನ್ನು ನೆರವೇರಿಸಿದ್ದು ಸಮಸ್ತ ರೈತರು, ನದಿ ನೀರು ಬಳಕೆ ದಾರರಿಗೆ ಒಳಿತಾಗಲಿ ಎಂಬ ಆಶಯವನ್ನು ಸಮಿತಿ ಹೊಂದಿದೆ.

ಎಂ.ಬಿ.ಪಾಟೀಲರಿಂದ ಜನರೊಂದಿಗೆ ಬನ್ನಿ ವಿನಿಮಯ

• **ಉದಯವಾಹಿನಿ ವಿಜಯಪುರ, :**

'ಬನ್ನಿ ತಗೊಂಡು ಬಂಗಾರವಾಗೋಣ' ಎಂಬ ಗ್ರಾಮೀಣ ವಾಡಿಕೆಯಂತೆ ವಿಜಯದಶಮಿ ಅಂಗವಾಗಿ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಗುರುವಾರ ತಮ್ಮ ಗೃಹ ಕಚೇರಿಯಲ್ಲಿ ಕ್ಷೇತ್ರದ ಜನರು, ಜಿಲ್ಲೆಯ ಮುಖಂಡರು ಹಾಗೂ ಸಾರ್ವಜನಿಕರೊಂದಿಗೆ ಇಡೀ ದಿನ ಬನ್ನಿ ವಿನಿಮಯ ಮಾಡಿಕೊಂಡು ವಿಜಯದಶಮಿ ಶುಭಾಶಯ ಕೋರಿದರು. ಜಿಲ್ಲೆಯ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಪಕ್ಕದ ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳಿಂದಲೂ ಆಗಮಿಸಿದ್ದ ನೂರಾರು ಜನರು ಸಚಿವರೊಂದಿಗೆ ಬನ್ನಿ ವಿನಿಮಯ ಮಾಡಿಕೊಂಡು ಹಬ್ಬದ ಸಂಭ್ರಮದಲ್ಲಿ ಪಾಲ್ಗೊಂಡರು.

ಸಚಿವರ ಸ್ವಕ್ಷೇತ್ರದ ಜನರು ಹಾಗೂ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಉದಯವಾಹಿನಿ ಚಿತ್ರ

ಮಹಿಳೆಯರು, ರೈತರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ವಿಶೇಷಚೇತನರು ಸೇರಿದಂತೆ ಸಾವಿರಾರು ಜನರು ಸಚಿವರನ್ನು ಭೇಟಿಯಾಗಿ ವಿಜಯದಶಮಿ ಶುಭಾಶಯಗಳನ್ನು ಸಲ್ಲಿಸಿದರು. ಸಚಿವ ಎಂ.ಬಿ.ಪಾಟೀಲ ಅವರು ಬಂದಿದ್ದ ಪ್ರತಿಯೊಬ್ಬರೊಂದಿಗೆ ಆತ್ಮೀಯವಾಗಿ ಮಾತನಾಡಿ, ಉಭಯ ಕುಶಲೋಪರಿ ವಿಚಾರಿಸಿ, 'ಬನ್ನಿ,

> ಹಲವು ಹಾಲಿ ಹಾಗೂ ಮಾಜಿ ಶಾಸಕರು, ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಮತ್ತು ಸಚಿವರ ಕಚೇರಿ ಸಿಬ್ಬಂದಿ ಸೇರಿದಂತೆ ಗಣ್ಯರು ಸಚಿವರನ್ನು ಭೇಟಿಯಾಗಿ ಹಬ್ಬದ ಶುಭಾಶಯ ಕೋರಿದರು.

ಬಂಗಾರದಂತಿರೋಣ' ಎಂದು ಹಾರೈಸುತ್ತ ಬನ್ನಿ ನೀಡಿದರು.

ಈ ವೇಳೆ ರೈತರೊಂದಿಗೆ ಮಾತನಾಡಿದ ಸಚಿವರು, ಎಲ್ಲೆಡೆ ಸಮರ್ಪಕವಾಗಿ ಮಳೆಯಾಗದ ಪರಿಸ್ಥಿತಿ, ಪರಿಸರ ಸಂರಕ್ಷಣೆ ಹಾಗೂ ಗಿಡಗಳನ್ನು ನೆಡುವ ಅಗತ್ಯದ ಕುರಿತು ಸಲಹೆ ನೀಡಿದರು. ಜನರ ದಟ್ಟಣೆಯ ನಡುವೆಯೂ 'ಕೆರೆಗೆ ನೀರಿಲ್ಲ', 'ನಮ್ಮ ಕೆನಾಲ್‌ಗೆ ನೀರು ಹರಿಸಿಲ್ಲ' ಎಂಬ ರೈತರ ಮನವಿಗಳನ್ನು ಆಲಿಸಿ, ಅವುಗಳಿಗೆ ಸ್ಪಂದಿಸುತ್ತಿದ್ದದ್ದು ನೀರಾವರಿ ವಿಷಯದ ಮೇಲಿನ ಅವರ ಕಾಳಜಿಯನ್ನು ಪ್ರತಿಬಿಂಬಿಸಿತು.

ವಿಕಲಚೇತನರಿಗೆ ಉದ್ಯೋಗಾವಕಾಶ ಕಲ್ಪಿಸಿ: ವಿನೋದ ಖೇಡ

• **ಉದಯವಾಹಿನಿ ವಿಜಯಪುರ, :**

ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಗಳಲ್ಲಿನ ಹೊರಗುತ್ತಿಗೆ ಆಧಾರಿತ ನೇಮಕಾತಿ ಪ್ರಕ್ರಿಯೆಯಲ್ಲಿ ಕನಿಷ್ಠ ಇಬ್ಬರು ವಿಕಲಚೇತನರಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ವಿಜಯಪುರ ಜಿಲ್ಲಾಧ್ಯಕ್ಷ ವಿನೋದ ಖೇಡ ಆಗ್ರಹಿಸಿದ್ದಾರೆ. ಈ ಕುರಿತು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ (ಯತ್ನಾಳ) ಅವರಿಗೆ ಮನವಿ ಸಲ್ಲಿಸಿರುವ ಅವರು, ಜಿಲ್ಲೆಯಲ್ಲಿ ಸಾಕಷ್ಟು ವಿಕಲಚೇತನರು ಉನ್ನತ ಶಿಕ್ಷಣ ಪಡೆದಿದ್ದರೂ ಸೂಕ್ತ ಉದ್ಯೋಗ ದೊರೆಯದೆ ನಿರುದ್ಯೋಗಿಗಳಾಗಿ ಉಳಿದಿದ್ದಾರೆ ಎಂದು ತಿಳಿಸಿದ್ದಾರೆ.

ವಿಕಲಚೇತನರು ಸಮಾಜದ ಮುಖ್ಯವಾಹಿನಿಗೆ ಬಂದು

ಉದಯವಾಹಿನಿ ಚಿತ್ರ

ಸ್ವಾವಲಂಬಿ ಜೀವನ ನಡೆಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಕಾಯ್ದೆ ಮತ್ತು ಯೋಜನೆಗಳನ್ನು ಜಾರಿಗೊಳಿಸಿವೆ. ಆದರೆ ಸ್ಥಳೀಯ ಮಟ್ಟದಲ್ಲಿ ಅವುಗಳ ಸಮರ್ಪಕ ಅನುಷ್ಠಾನವಾಗದ ಕಾರಣ ಅರ್ಹ ವಿಕಲಚೇತನರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ.

ವಿಕಲಚೇತನರ ಹಕ್ಕುಗಳ ಅಧಿನಿಯಮ-2016 ರ ಆಶಯದಂತೆ ಅವರಿಗೆ ಉದ್ಯೋಗಾವಕಾಶ ಕಲ್ಪಿಸುವ

> ಈ ಕುರಿತು ಅಂಗವಿಕಲರ ಹಕ್ಕುಗಳ ಆಯುಕ್ತರ ಕಚೇರಿಯಿಂದ ಹೊರಡಿಸಿರುವ ಪತ್ರ ಹಾಗೂ ವಿಜಯಪುರ ಜಿಲ್ಲಾಧಿಕಾರಿಗಳ ಪತ್ರವನ್ನು ಉಲ್ಲೇಖಿಸಿರುವ ಖೇಡ, ವಿಕಲಚೇತನರು ತಮ್ಮ ಶೈಕ್ಷಣಿಕ ಅರ್ಹತೆಗೆ ತಕ್ಕ ಉದ್ಯೋಗ ಪಡೆದು ಗೌರವಯುತವಾಗಿ ಜೀವನ ನಡೆಸಲು ಸರ್ಕಾರ ನೆರವಾಗಬೇಕು ಎಂದು ಮನವಿ ಮಾಡಿದ್ದಾರೆ.

ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಸಂದರ್ಭದಲ್ಲಿ ಕನಿಷ್ಠ ಇಬ್ಬರು ವಿಕಲಚೇತನರಿಗೆ ಉದ್ಯೋಗ ನೀಡುವಂತೆ ಇಲಾಖೆಗಳ ಮುಖ್ಯಸ್ಥರಿಗೆ ಕಡ್ಡಾಯವಾಗಿ ಸೂಕ್ತ ನಿರ್ದೇಶನ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ

• **ಉದಯವಾಹಿನಿ ಚನ್ನಗಿರಿ:**

ಪಟ್ಟಣ ಸೇರಿದಂತೆ ತಾಲ್ಲೂಕಿನ 80 ಹಳ್ಳಿಗಳಿಗೆ ಸಮರ್ಪಕ ಕುಡಿಯುವ ನೀರು ಸರಬರಾಜು, ಸ್ವಚ್ಛತೆ ಹಾಗೂ ಜೂಜಾಟವನ್ನು ನಿಯಂತ್ರಿಸುವಂತೆ ಒತ್ತಾಯಿಸಿ ಬಿಜೆಪಿ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಕಾರ್ಯಕರ್ತರು ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಪ್ರವಾಸಿ ಮಂದಿರದಿಂದ ಮೆರವಣಿಗೆ ಹೊರಟ ಪ್ರತಿಭಟನಕಾರರು ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿದರು. ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಗಾಂಧಿ ವೃತ್ತಕ್ಕೆ ಬಂದು ಒಂದು ಗಂಟೆ ವಾಹನಗಳನ್ನು ತಡೆದರು. 'ಪಟ್ಟಣದಲ್ಲಿ ಹದಿನೈದು ದಿನಗಳಿಗೊಮ್ಮೆ ಸೂಳೆಕೆರೆಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಸಮರ್ಪಕವಾಗಿ ನೀರು ಪೂರೈಸುವಲ್ಲಿ ಪುರಸಭೆ ವಿಫಲವಾಗಿದೆ. ಸ್ವಚ್ಛತೆ ಮಾಯವಾಗಿದ್ದು, ರಸ್ತೆ ಹಾಗೂ ಕೆರೆಗಳ ಬಳಿ ತ್ಯಾಜ್ಯದ ರಾಶಿ ಬಿದ್ದಿದೆ. ಆಡಳಿತವು ಸಿಬ್ಬಂದಿ

ಉದಯವಾಹಿನಿ ಚಿತ್ರ

ಕೊರತೆಯ ನೆಪ ಹೇಳುತ್ತಿದೆ. ತಾಲ್ಲೂಕಿನಲ್ಲಿ ಇದುವರೆಗೂ ಬಡವರಿಗೆ ಒಂದೇ ಒಂದು ಮನೆಯನ್ನೂ ವಿತರಿಸಿಲ್ಲ. 'ಬೇಲಿಯೇ ಎದ್ದು ಹೊಲ ಮೇಯ್ದ' ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಮಾಡಾಳ್ ಮಲ್ಲಿಕಾರ್ಜುನ್ ಆರೋಪಿಸಿದರು.

ಬನ್ನಿ ಪೂಜೆ, ವಿಜಯದಶಮಿ ಉತ್ಸವ ಕಡೂರಿನಲ್ಲಿ ಸಂಪನ್ನ

• **ಉದಯವಾಹಿನಿ ಕಡೂರು:**

ವಿಜಯದಶಮಿಯ ಅಂಗವಾಗಿ ಪಟ್ಟಣದ ಛತ್ರದ ಬೀದಿಯ ಕೊನೆಯಲ್ಲಿರುವ ಬನ್ನಿ ಮಂಟಪದಲ್ಲಿ ಬನ್ನಿ ಪೂಜೆಯ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ತಾಲ್ಲೂಕಿನ ಖಂಡುಗದಹಳ್ಳಿ, ಕೆರೆಸಂತೆ, ಹೇಮಗಿರಿಯಲ್ಲಿಯೂ ಅಂಬು ಹೊಡೆಯುವ ಮೂಲಕ ವಿಜಯದಶಮಿ ಹಬ್ಬಕ್ಕೆ ತೆರೆಬಿದ್ದಿತು.

ಉದಯವಾಹಿನಿ ಚಿತ್ರ

ಮುಜರಾಯಿ ಇಲಾಖೆಗೆ ಸೇರಿದ, ಪಟ್ಟಣದ ಕೋಟೆ ಬಡಾವಣೆಯಲ್ಲಿರುವ ಶ್ರೀ ಚನ್ನಕೇಶವಸ್ವಾಮಿಯ ಉತ್ಸವ ಮೂರ್ತಿಗಳನ್ನು ಬನ್ನಿ ಮಂಟಪದವರೆಗೆ ಮೆರವಣಿಗೆ ಮೂಲಕ ತರಲಾಯಿತು. ನಂತರ ತಾಲ್ಲೂಕು ಆಡಳಿತದ ವತಿಯಿಂದ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ತಹಶೀಲ್ದಾರ್ ಸಿ.ಎಸ್. ಪೂರ್ಣಿಮಾ ಅವರು ಪೂಜೆ ಸಲ್ಲಿಸುವ ಮೂಲಕ ಅಂಬು ಹೊಡೆಯುವ ಕಾರ್ಯಕ್ಕೆ ಚಾಲನೆ ನೀಡಿದರು. ಕಸಬಾ ಕಂದಾಯ ನಿರೀಕ್ಷಕ ರವಿಕುಮಾರ್ ಬನ್ನಿ ಮರಕ್ಕೆ ಪೂಜೆ ಸಲ್ಲಿಸಿ ಬಾಳೆಗಿಡಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿ ಕತ್ತಿಯಿಂದ ಕತ್ತರಿಸಿ, ಸಾಂಪ್ರದಾಯಿಕವಾಗಿ ಅಂಬು ಹೊಡೆಯುವ ಮೂಲಕ ಬನ್ನಿಪೂಜೆಗೆ ಮುಂದಾದರು. ನಂತರ ಭಕ್ತರು ಬನ್ನಿಮರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪರಸ್ಪರ ಬನ್ನಿ ಪತ್ರೆ ವಿನಿಮಯ ಮಾಡಿ ಹಿರಿಯರ ಆಶೀರ್ವಾದ ಪಡೆದುಕೊಂಡರು. ಮುಖಂಡ ರಮೇಶ್ ಮಾತನಾಡಿ, 'ನಮ್ಮ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದು, ಶ್ರೀಚನ್ನಕೇಶವ ಸ್ವಾಮಿಯ ಉತ್ಸವ ಮೂರ್ತಿ ಕೋಟೆಯಿಂದ ದಯಮಾಡುವಾಗ ತಾಲ್ಲೂಕು ಆಡಳಿತವು ಉತ್ಸವ ಮಾಡುವುದರ ಮೂಲಕ ಮೆರುಗು ನೀಡಬೇಕು ಎಂದು ತಹಶೀಲ್ದಾರರಲ್ಲಿ ಮನವಿ ಮಾಡಿದರು. ಬನ್ನಿ ಮಂಟಪದ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು ಮುಂದಿನ ದಿನಗಳಲ್ಲಿ ಲೋಕಾರ್ಪಣೆಯಾಗಲಿದೆ' ಎಂದರು.

ದುರ್ಗಾಂಬಿಕಾ ದೇವಸ್ಥಾನದಲ್ಲಿ 18 ಜೋಡಿಗಳ ಸಾಮೂಹಿಕ ವಿವಾಹ

ವಧು ಹಾಗೂ ಬಿಳಿ ಪಂಚೆ, ಅಂಗಿ ತೊಟ್ಟಿದ್ದವರ, ಅವರಗೊಳ್ಳದ ಓಂಕಾರೇಶ್ವರ ಸ್ವಾಮೀಜಿ ಸಮ್ಮುಖದಲ್ಲಿ ದಾಂಪತ್ಯದ ದೀವಿಗೆಯನ್ನು ಹಚ್ಚಿದರು

• **ಉದಯವಾಹಿನಿ ದಾವಣಗೆರೆ:**

ನವರಾತ್ರಿ ಅಂಗವಾಗಿ ದಿನವೂ ವೈವಿಧ್ಯಮಯ ಧಾರ್ಮಿಕ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿದ್ದ ನಗರದ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಮದುವೆಯ ಸಂಭ್ರಮ ಮನೆಮಾಡಿತ್ತು. ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ಆಯೋಜಿಸಿದ್ದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ 18 ಜೋಡಿಗಳು ಹೊಸ ಬದುಕಿಗೆ ಮುನ್ನುಡಿ ಬರೆದವು.

1 : ಸಾವಿರಾರು ಜನರಿಗೆ ಬದುಕು ಕಟ್ಟಿಕೊಟ್ಟಿದೆ
2 : ಟ್ರಸ್ಟ್ ಕಾರ್ಯವನ್ನು ಅವರು ನೆನೆಯುತ್ತಾರೆ
3 : ವಿಶ್ವಾಸ ಹಾಗೂ ಗೌರವದಿಂದ ಬಾಳಬೇಕು

ಸೀರೆ ಹಾಗೂ ಬಾಸಿಂಗದಲ್ಲಿ ಕಂಗೊಳಿಸುತ್ತಿದ್ದ ವಧು ಹಾಗೂ ಬಿಳಿ ಪಂಚೆ, ಅಂಗಿ ತೊಟ್ಟಿದ್ದವರ, ಅವರಗೊಳ್ಳದ ಓಂಕಾರೇಶ್ವರ ಸ್ವಾಮೀಜಿ ಸಮ್ಮುಖದಲ್ಲಿ ದಾಂಪತ್ಯದ ದೀವಿಗೆಯನ್ನು ಹಚ್ಚಿದರು. ನೂರಾರು ಜನ ವಿವಾಹ ಮಹೋತ್ಸವಕ್ಕೆ ಸಾಕ್ಷಿಯಾದರು.

ನವಜೋಡಿಯನ್ನು ಆಶೀರ್ವದಿಸಿ ಮಾತನಾಡಿದ ಶ್ರೀಗಳು,


ಉದಯವಾಹಿನಿ ಚಿತ್ರ

'ಮೂರು ದಶಕಗಳಿಂದ ನಿರಂತರವಾಗಿ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಸುತ್ತಿರುವ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ ಸಾವಿರಾರು ಜನರಿಗೆ ಬದುಕು ಕಟ್ಟಿಕೊಟ್ಟಿದೆ. ದೇವಸ್ಥಾನಕ್ಕೆ ಪ್ರತಿ ಬಾರಿ ದಂಪತಿ ಭೇಟಿ ನೀಡಿದಾಗ, ತಾಯಿಯ ಸನ್ನಿಧಿಯಲ್ಲಿ ನಡೆದ ತಮ್ಮ ವಿವಾಹ ಮಹೋತ್ಸವವನ್ನು ಸ್ಮರಣೀಯಗೊಳಿಸಿದ ಟ್ರಸ್ಟ್ ಕಾರ್ಯವನ್ನು ಅವರು ನೆನೆಯುತ್ತಾರೆ' ಎಂದರು.

ಈ ಸಾಮಾಜಿಕ ಕಾರ್ಯದ ಜತೆಗೆ ವಿವಿಧ ಧಾರ್ಮಿಕ ಕಾರ್ಯಗಳಲ್ಲೂ ಟ್ರಸ್ಟ್ ತೊಡಗಿಸಿಕೊಂಡಿದೆ ಎಂದ ಅವರು, ಹಿರಿಯರು ನಡೆಸಿಕೊಂಡು ಬಂದ ಸಂಪ್ರದಾಯಗಳನ್ನು ಮುಂದುವರಿಸುತ್ತಿರುವ

> 'ಇದು ಇಬ್ಬರ ನಡುವಿನ ದಾಂಪತ್ಯವಷ್ಟೇ ಅಲ್ಲ, ಎರಡು ಕುಟುಂಬಗಳ ಬಾಂಧವ್ಯವೂ ಹೌದು. ಗಂಡು-ಹೆಣ್ಣು ಪರಸ್ಪರ ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಬಾಳಬೇಕು. ಹೆಣ್ಣುಮಗಳು ತನ್ನ ತವರು ಮನೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯನ್ನು ಗಂಡನ ಮನೆಯಲ್ಲೂ ಮುಂದುವರಿಸಬೇಕು. -ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್

ಧರ್ಮದರ್ಶಿಗಳ ಕಾರ್ಯವನ್ನು ಶ್ಲಾಘಿಸಿದರು.ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನವ ವಧು-ವರರಿಗೆ ಶುಭ ಕೋರಿದರು.ಆ ಮನೆಯೂ ತನ್ನ ಮನೆಯೇ ಎಂಬ ಭಾವ ಹೊಂದಿದ್ದರೆ ನೂತನ ದಾಂಪತ್ಯ ಜೀವನ ಉತ್ತಮವಾಗಿರುತ್ತದೆ' ಎಂದು ನವಜೋಡಿಗೆ ಕಿವಿಮಾತು ಹೇಳಿದರು. ದಾನಿಗಳಾದ ರೇವಣಕರ್ ಕುಟುಂಬದಿಂದ ನವ ಜೋಡಿಗಳಿಗೆ ಮಾಂಗಲ್ಯ ಹಾಗೂ ಕಾಲುಂಗುರ ನೀಡಲಾಯಿತು. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕುಟುಂಬದಿಂದ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಪ್ರಮುಖರಾದ ಎಚ್.ಬಿ. ಗೋಣೆಪ್ಪ, ಉಮೇಶ್ ಸಾಳಂಕಿ, ರಾಮಕೃಷ್ಣ, ಗೌಡರ ಸುರೇಶ್ ಸೇರಿದಂತೆ ಬಾಬುದಾರರು, ಭಕ್ತರು ಇದ್ದರು. ನವರಾತ್ರಿ ಮಹೋತ್ಸವದ ಅಂಗವಾಗಿ ನಗರದ ದುರ್ಗಾಂಬಿಕಾ

> 'ಶಾಮನೂರು ಶಿವಶಂಕರಪ್ಪ ಹಾಗೂ ಪಾರ್ವತಮ್ಮ ಅವರ ನೆನಪಿನಲ್ಲಿ 35 ವರ್ಷಗಳಿಂದ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯುತ್ತಿದೆ. ಈ ಬಾರಿ ನವರಾತ್ರಿಯ ಒಂಬತ್ತು ದಿನಗಳೂ ದುರ್ಗಾಂಬಿಕಾ ಟ್ರಸ್ಟ್ ವತಿಯಿಂದ ದೇವಿ ಅಲಂಕಾರ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆದಿವೆ' ಎಂದು ಪ್ರಶಂಸಿಸಿದರು.

ದೇವಸ್ಥಾನದ ಆವರಣದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ದಸರಾ ವೇಳೆ ಕುಂಕುಮಾರ್ಚನೆ ಮಾಡಲಾಗಿದ್ದ ದುರ್ಗಾಂಬಿಕಾ ದೇವಿಯ ಪುಟ್ಟ ಮೂರ್ತಿಯ ಮೆರವಣಿಗೆ ನಡೆಸಲಾಯಿತು. ನವ ದುರ್ಗೆಯರನ್ನು ನೆನಪಿಸುವ ಪುಟ್ಟ ಹೆಣ್ಣುಮಕ್ಕಳು, ನವ ವಧು-ವರರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.50 ಮಂದಿ ಜೋಗತಿಯರು ಹಾಗೂ 200ಕ್ಕೂ ಹೆಚ್ಚು ಮಹಿಳೆಯರು ಕೈಯಲ್ಲಿ ಕಳಸ ಹಿಡಿದು ಸಾಗಿದರು. ಹೊಂಡದ ವೃತ್ತ, ವಿಜಯಲಕ್ಷ್ಮಿ ರಸ್ತೆ ಮಾರ್ಗದಲ್ಲಿ ಸಾಗಿದ ಮೆರವಣಿಗೆ ದೇವಸ್ಥಾನಕ್ಕೆ ವಾಪಸಾಯಿತು. ಇದಕ್ಕೂ ಮುನ್ನ ಜೋಗತಿಯರಿಗೆ ದೇಗುಲದಲ್ಲಿ ಉಡಿ ತುಂಬಿ, ಪಡ್ಲಿಗಿ ಹಾಕಲಾಯಿತು. ಪ್ರತೀ ವರ್ಷ ದಸರಾದಲ್ಲಿ ಈ ಆಚರಣೆ ನಡೆಯುತ್ತದೆ ಎಂದು ಸ್ಥಳೀಯರು ವಿವರಿಸಿದರು.

ಮಿನಿ ನ್ಯೂಸ್

ಎಸ್.ಬಂಗಾರಪ್ಪ ಹುಟ್ಟುಹಬ್ಬದ ಪ್ರಯುಕ್ತ ಅ. 26ರಂದು 'ಬಂಗಾರ' ಪ್ರಶಸ್ತಿ

• **ಉದಯವಾಹಿನಿ ಶಿವಮೊಗ್ಗ:**

ಉದಯವಾಹಿನಿ ಚಿತ್ರ

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ 94ನೇ ಜನ್ಮದಿನೋತ್ಸವದ ಅಂಗವಾಗಿ ಇಲ್ಲಿನ ಎಸ್. ಬಂಗಾರಪ್ಪ ವಿಚಾರ ವೇದಿಕೆ ಹಾಗೂ ಎಸ್. ಬಂಗಾರಪ್ಪ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಅ. 26ರಂದು ಸಂಜೆ 5ಕ್ಕೆ ಸೊರಬದ ಬಂಗಾರಧಾಮದಲ್ಲಿ 'ಬಂಗಾರ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ವೇದಿಕೆಯ ಸಂಚಾಲಕ ಕೆ.ವಿ. ನಾಗರಾಜ ಮೂರ್ತಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ, ಪ್ರಶಸ್ತಿ ಪುರಸ್ಕೃತರ ಮಾಹಿತಿ ನೀಡಿದ ಅವರು, 2026ನೇ ಸಾಲಿನ ಪ್ರಶಸ್ತಿಗೆ ಮೈಸೂರಿನ ದೀನಬಂಧು ಆಶ್ರಮದ ಸಂಸ್ಥಾಪಕ ಪ್ರೊ. ಜಿ.ಎಸ್. ಜಯದೇವ ಅವರಿಗೆ 'ಸೇವಾ ಬಂಗಾರ', ಲೇಖಕ ತುಮಕೂರಿನ ಪ್ರೊ. ನಟರಾಜ್ ಹುಳಿಯಾರ ಅವರಿಗೆ 'ಸಾಹಿತ್ಯ ಬಂಗಾರ', ಹಿರಿಯ ರಂಗಕರ್ಮಿ ಕಲಬುರಗಿಯ ಶೇಖ ಮಾಸ್ತರ್ ಅವರಿಗೆ 'ರಂಗ ಬಂಗಾರ' ಹಾಗೂ ರಾಷ್ಟ್ರೀಯ ಕಬಡ್ಡಿ ತಂಡದ ತರಬೇತುದಾರ, ಬೆಂಗಳೂರಿನ ಬಿ.ಸಿ. ರಮೇಶ್ ಅವರಿಗೆ 'ಕ್ರೀಡಾ ಬಂಗಾರ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯ ಮೊತ್ತ ತಲಾ 1 ಲಕ್ಷ ಹಾಗೂ ಸ್ಮರಣಿಕೆ ಒಳಗೊಂಡಿದೆ ಎಂದರು.

ವಿಧಾನ ಪರಿಷತ್ ಸಭಾಪತಿ ಸಲೀಂ ಅಹಮದ್ ಸಮಾರಂಭ ಉದ್ಘಾಟಿಸುವರು. ಸಹಕಾರ ಸಚಿವ ಲಕ್ಷ್ಮಣ ಸಂಗಪ್ಪ ಸವದಿ ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಎಸ್. ಬಂಗಾರಪ್ಪ ಫೌಂಡೇಶನ್ ಅಧ್ಯಕ್ಷರೂ ಆದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಹಾಗೂ ಎಸ್. ಮಧು ಬಂಗಾರಪ್ಪ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಗಾಯಾಳುವಿಗೆ ನೆರವಾದ ತಹಶೀಲ್ದಾರ್

• **ಉದಯವಾಹಿನಿ ಜಮಖಂಡಿ:**

ನಗರದ ವಸಂತ ಟಾಕೀಸ್ ಸಮೀಪ ಬೈಕ್ ಸ್ಕಿಡ್ ಆಗಿ ಬಿದ್ದ ಗಾಯಾಳುವಿಗೆ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ್ ಹಾಗೂ ತಹಶೀಲ್ದಾರ್ ಅನೀಲ ಬಡಗೇರ ಅವರು ತಕ್ಷಣ ನೆರವು ನೀಡಿ ಮಾನವೀಯತೆ ಮೆರೆದಿದ್ದಾರೆ. ಬೈಕ್ ಚಲಾಯಿಸಿಕೊಂಡು ಬರುತ್ತಿದ್ದ ವ್ಯಕ್ತಿಯೊಬ್ಬರು ನಿಯಂತ್ರಣ ತಪ್ಪಿ ಸ್ಕಿಡ್ ಆಗಿ ರಸ್ತೆಯ ಮೇಲೆ ಬಿದ್ದಿದ್ದಾರೆ. ಇದೇ ಮಾರ್ಗವಾಗಿ ಸಂಚರಿಸುತ್ತಿದ್ದ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ್ ಹಾಗೂ ತಹಶೀಲ್ದಾರ್ ಅನೀಲ ಬಡಗೇರ ಅವರು ಘಟನೆ ಗಮನಿಸಿ ತಕ್ಷಣ ಗಾಯಾಳುವಿನ ನೆರವಿಗೆ ಧಾವಿಸಿದ್ದಾರೆ. ಗಾಯಾಳುವನ್ನು ತಮ್ಮ ಸರ್ಕಾರಿ ವಾಹನದಲ್ಲಿಯೇ ಜಮಖಂಡಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿ, ಚಿಕಿತ್ಸೆ ದೊರೆಯುವಂತೆ ವ್ಯವಸ್ಥೆ ಮಾಡಿದ್ದಾರೆ. ಗಾಯಾಳುವನ್ನು ರೈತ ಮುಖಂಡ ಸುಭಾಸ ಭೀಮಪ್ಪ ಶಿರಬೂರ ಎಂದು ಗುರುತಿಸಲಾಗಿದೆ. ಈ ಸಂದರ್ಭದಲ್ಲಿ ಜಮಖಂಡಿ ಗ್ರಾಮ ಲೆಕ್ಕಾಧಿಕಾರಿ ಸಾಜೀದ್ ಹೊದ್ಲಿ ಹಾಗೂ ವಾಹನ ಚಾಲಕ ಬಸವರಾಜ ಗುಗ್ಗರಿ ಉಪಸ್ಥಿತರಿದ್ದರು. ಅಪಘಾತದ ಸಂದರ್ಭದಲ್ಲಿ ಗಾಯಾಳುವಿಗೆ ತಕ್ಷಣ ನೆರವು ನೀಡಿದ ಅಧಿಕಾರಿಗಳ ಮಾನವೀಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳಿಗೆ ವಿವಿಧ ಸ್ಪರ್ಧೆಗಳು

• **ಉದಯವಾಹಿನಿ ಮಂಗಳೂರು-**

ಬಾಲ ಭವನ ಸೊಸೈಟಿ, ದಕ್ಷಿಣ ಕನ್ನಡ ಜಿಲ್ಲಾ ಬಾಲ ಭವನ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದ.ಕ ಜಿಲ್ಲೆ ಇವರ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆ ಅಂಗವಾಗಿ ಹಾಗೂ ರಾಜ್ಯ ಮಟ್ಟದ ಕಲಾಶ್ರೀ ಕಾರ್ಯಕ್ರಮದ ಅಂಗವಾಗಿ ದಕ್ಷಿಣ ಕನ್ನಡ ಜಿಲ್ಲೆಯ 9 ರಿಂದ 16 ವರ್ಷದ ಒಳಗಿನ ಮಕ್ಕಳಿಗೆ 1) ಸೃಜನಾತ್ಮಕ ಕಲೆಗಳಾದ ಚಿತ್ರಕಲೆ, ಕರಕುಶಲ ಕಲೆ, ಜೇಡಿಮಣ್ಣಿನ ಕಲೆ (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು) 2) ಸೃಜನಾತ್ಮಕ ಬರವಣಿಗೆ ಕಲೆಗಳಾದ ಕಥೆ, ಕವನ, ಪ್ರಬಂಧ ರಚನೆ (ಮೂರರಲ್ಲೂ ಕಡ್ಡಾಯವಾಗಿ ಭಾಗವಹಿಸಬೇಕು) 3) ಸೃಜನಾತ್ಮಕ ಪ್ರದರ್ಶನ ಕಲೆಗಳಾದ ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಕರ್ನಾಟಕ ಹಾಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಸುಗಮ ಸಂಗೀತ, ಏಕಪಾತ್ರಾಭಿನಯ, ಯೋಗ ನೃತ್ಯ (ಯಾವುದಾದರೊಂದು ಕಲೆಯನ್ನು ಮಾತ್ರ ಪ್ರದರ್ಶಿಸಲು ಅವಕಾಶವಿರುತ್ತದೆ ಹಾಗೂ ಗುಂಪು ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ) ಹಾಗೂ 4) ವಿಜ್ಞಾನದಲ್ಲಿ ನೂತನ ಆವಿಕರ 4 ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.ಆಸಕ್ತ ಮಕ್ಕಳು ನವೆಂಬರ್ 3 ರೊಳಗಾಗಿ ಹೆಸರನ್ನು ನೋಂದಾಯಿಸಬಹುದು. ಅಲ್ಲದೇ ಒಂದು ಮಗು ಒಂದು ಸ್ಪರ್ಧೆಯಲ್ಲಿ ವೈಯಕ್ತಿಕವಾಗಿ ಭಾಗವಹಿಸಲು ಮಾತ್ರ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಗರದ ಬಿಜೈ ಜಿಲ್ಲಾ ಸ್ತ್ರೀ ಶಕ್ತಿ ಭವನದ 2 ನೇ ಮಹಡಿಯಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿ (ದೂ.ಸಂ: 0824-2451254) ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದುಷ್ಟಶಕ್ತಿಗಳ ಸಂಹಾರಕ್ಕೆ ದೈವಿಕ ಶಕ್ತಿ ಅಗತ್ಯ: ನಳಿನ್

• **ಉದಯವಾಹಿನಿ ಮಂಗಳೂರು:**

ಸಮಾಜದಲ್ಲಿ ದುಷ್ಟಶಕ್ತಿಗಳು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅವುಗಳ ಸಂಹಾರಕ್ಕೆ ದೈವಿಕ ಶಕ್ತಿ ಅಗತ್ಯವಾಗಿದೆ. ನವರಾತ್ರಿಯ ಸಂದರ್ಭದಲ್ಲಿ ದುಷ್ಟಶಕ್ತಿಗಳನ್ನು ನಾಶಪಡಿಸಿ, ಧರ್ಮದ ರಕ್ಷಣೆಗೆ ಶಕ್ತಿ ನೀಡುವಂತೆ ದೇವಿಯಲ್ಲಿ ಭಕ್ತಿಯಿಂದ ಪ್ರಾರ್ಥಿಸಬೇಕು ಎಂದು ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಹೇಳಿದರು.

ಕೋಟೆಕಾರು ಮಾಡೂರು ಮರಿಯಣ್ಣಪಾಲಿನ ಶ್ರೀ ಶಿವ ದುರ್ಗಾಂಬ ಮಠದಲ್ಲಿ ನಡೆಯುತ್ತಿರುವ ನವರಾತ್ರಿ ಉತ್ಸವದ ಅಂಗವಾಗಿ ಸೋಮವಾರ ನಡೆದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮಹಿಷಾಸುರ, ಚಂಡಮುಂಡರಂತಹ ರಾಕ್ಷಸರು ಇಂದು ಇಲ್ಲದಿದ್ದರೂ, ಭಯೋತ್ಪಾದಕರು ಜಿರಳೆಗಳ ರೂಪದಲ್ಲಿ ರಾಕ್ಷಸ ಪ್ರವೃತ್ತಿಗಳು ಸೃಷ್ಟಿಯಾಗುತ್ತಿವೆ ಎಂದರು. ಕೋಟೆಕಾರು ಪ್ರದೇಶದಲ್ಲಿ ಶ್ರೀ ಶಿವ ದುರ್ಗಾಂಬ ಮಠವನ್ನು ನಿರ್ಮಿಸುವ ಮೂಲಕ ಹಿಂದೂ ಧರ್ಮದ ಶ್ರದ್ಧೆ ಮತ್ತು ಭಕ್ತಿಯನ್ನು ಬೆಳಗಿಸುವ ಕಾರ್ಯವನ್ನು ಶಿವಯೋಗಿ ಶ್ರೀ ದುರ್ಗಾನಂದ ಸ್ವಾಮೀಜಿ ಮಾಡುತ್ತಿದ್ದಾರೆ ಎಂದರು. ಸಭೆ ಉದ್ಘಾಟಿಸಿ ಮಾತನಾಡಿದ ಶ್ರೀ ಶಿವ ದುರ್ಗಾಂಬ ಮಠದ ಶಿವ ಯೋಗಿ ಶ್ರೀ ದುರ್ಗಾನಂದ ಸ್ವಾಮೀಜಿ, ಧಾರ್ಮಿಕ ಕಾರ್ಯ ನಡೆಸಲು ರಾಜಕೀಯ ಭೇದಗಳನ್ನು ಬದಿಗಿಟ್ಟು ಹಿಂದೂ ಧರ್ಮೀಯರು ಒಗ್ಗಟ್ಟಾಗಬೇಕು. ಈ ಮಠವನ್ನು ವೈಯಕ್ತಿಕ ಹಿತಾಸಕ್ತಿಗಾಗಿ ನಿರ್ಮಿಸದೆ, ಹಿಂದೂ ಸಮಾಜದ ಏಳಿಗೆಗಾಗಿ ನಿರ್ಮಿಸಲಾಗಿದೆ ಎಂದರು.

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	09:00 ರಿಂದ 10:30
ಗುಳಿಕ ಕಾಲ	ಬೆಳಿಗ್ಗೆ	06:00 ರಿಂದ 07:30
ಯಮಗಂಡ ಕಾಲ	ಮಧ್ಯಾಹ್ನ	01:30 ರಿಂದ 03:00

ಮೇಷ ನಿಮ್ಮ ಚೈತನ್ಯವನ್ನು ಪುನಃ ಸಂಪಾದಿಸಲು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಜೀವನದಲ್ಲಿ ಸ್ನಾನವನ್ನು ಸಹ ನೀಡಬಹುದು ನೀವು ನಿರೀಕ್ಷೆ ಅತಿಥಿಗಳು ಸಂಜೆ ನಿಮ್ಮ ಮನೆಯಲ್ಲಿ ತುಂಬಿರುತ್ತಾರೆ.

ವೃಷಭ ಹದರಿಕೆ ನಿಮ್ಮ ಸಂತೋಷವನ್ನು ಹಾಳುಗೆಡವಬಹುದು. ನೀವು ಇದು ನಿಮ್ಮ ಆಲೋಚನೆಗಳು ಮತ್ತು ಕಲ್ಪನೆಯ ಪ್ರಭಾವದಿಂದ ಅರ್ಥಮಾಡಿಕೊಳ್ಳಬೇಕು. ಇದು ಸ್ವಾಭಾವಿಕತೆಯನ್ನು ಕೊಲ್ಲುತ್ತದೆ–ಜೀವನದ ಆನಂದವನ್ನು ಹೀರಿಕೊಳ್ಳುತ್ತದೆ ಹಾಗೂ ನಿಮ್ಮ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ.

ಮಿಥುನ ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ನೀವು ನಿಮ್ಮನ್ನು ಒಂದು ಗೊಂದಲಮಯ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು–ಇದು ನಿಮಗೆ ಆರ್ಥಿಕ ಲಾಭವನ್ನೂ ತರುತ್ತದೆ.

ಕಟಕ ನೀವು ಕುಟುಂಬದ ಸದಸ್ಯರು ಮತ್ತು ಸ್ನೇಹಿತರ ಜೊತೆ ಕಳೆಯಲು ಸಾಕಷ್ಟು ಸಮಯ ಸಿಗುತ್ತದೆ. ಪ್ರೇಮಜೀವನವು ಇಂದು ನಿಮ್ಮನ್ನು ಆಶೀರ್ವದಿಸಿರುವಂತೆ ತೋರುತ್ತದೆ. ನೀವು ಅನಿರೀಕ್ಷಿತ ಮೂಲಗಳಿಂದ ಪ್ರಮುಖ ಆಮಂತ್ರಣವನ್ನು ಸ್ವೀಕರಿಸುತ್ತೀರಿ. ಮದುವೆಯ ನಂತರ ಪ್ರೀತಿ ಕಷ್ಟವೆಂದು ತೋರುತ್ತದೆ.

ಸಿಂಹ ಸಂಘರ್ಷವು ನಿಮ್ಮ ಆನಾರೋಗ್ಯವನ್ನು ಇನ್ನಷ್ಟು ಹಾಳುಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ತಮ್ಮ ಹಣವನ್ನು ಇನ್ನೊಬ್ಬರಿಗೆ ನೀಡಲು ಇಷ್ಟಪಡುವುದಿಲ್ಲ ನೀವು ಅಗತ್ಯವಿರುವವರಿಗೆ ಹಣವನ್ನು ಕೊಟ್ಟು ವಿಶ್ರಾಂತಿಯನ್ನು ಅನುಭವಿಸುವಿರಿ. ಕಿರಿಯ ಸದಸ್ಯರೊಂದಿಗೆ ಸಮಯವನ್ನು ಕಳೆಯುವುದು ಕಲಿಯಬೇಕು.

ಕನ್ಯಾ ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ವಾರ್ಷಿಯಲ್ಲಿ ನೀವು ಆರ್ಥಿಕ ಲಾಭವನ್ನು ಬಲಪಡಿಸುವ ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

ತುಲಾ ಒತ್ತಡವನ್ನು ಅನುಭವಿಸುತ್ತಿದ್ದೀರಂದರಿನಿಂದ – ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ, ಮುದ್ದಾದುವಿಕೆ ಮುಗ್ಧ ಮುಗುಳ್ನಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು. ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ.

ವೃಶ್ಚಿಕ ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು. ಇದರಿಂದ ಅವರಿಗೆ ಆರ್ಥಿಕವಾಗಿ ಲಾಭ ಪಡೆಯುವ ಸಾಧ್ಯತೆ ಇದೆ. ಆಗತ್ಯವಿದ್ದರೆ ಸ್ನೇಹಿತರು ನಿಮ್ಮ ನೆರವಿಗೆ ಬರುತ್ತಾರೆ.

ಧನಸ್ಸು ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು. ಗುಣಪಡಿಸಲಾಗದ್ದನ್ನು ತಡೆದುಕೊಳ್ಳಬೇಕು ಎಂದು ನೆನಪಿಡಿ. ಒಂದು ಅಚ್ಚರಿಯ ಸಂದೇಶ ನಿಮಗೆ ಸಿಹಿ ಕನಸುಗಳನ್ನು ನೀಡುತ್ತದೆ.

ಮಕರ ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗಲು ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಯೋಚನೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

ಕುಂಭ ಮಾನಸಿಕ ಭಯ ನೀವು ಧೈರ್ಯಗೆಡಿಸಬಹುದು. ಸಕಾರಾತ್ಮಕ ಚಿಂತನೆ ಮತ್ತು ಉಜ್ವಲವಾದ ಭವಿಷ್ಯವನ್ನು ನೋಡುವುದು ಇದನ್ನು ದೂರವಿಡುತ್ತದೆ. ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯಿಂದ ಸಾಬೀತುಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು.

ಮೀನ ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ನಿಮ್ಮ ಪೋಷಕರ ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ನಿಮ್ಮ ವೈಯಕ್ತಿಕ ರಂಗದಲ್ಲಿ ಮುಖ್ಯ ಬೆಳವಣಿಗೆಯಾಗುತ್ತಿದ್ದು ಇದು ನೀವು ಮತ್ತು ನಿಮ್ಮ ಇಡೀ ಕುಟುಂಬಕ್ಕೆ ಸಂತೋಷ ತರುತ್ತದೆ.

ಆಹಾರ ಇಲಾಖೆಯ ಅಕ್ಕಿ ಹರಾಜು

• **ಉದಯವಾಹಿನಿ, ಬಳ್ಳಾರಿ, :**

ನಗರದ ಎಪಿಎಂಸಿ ಆವರಣದಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರೀಕ ಸರವರಾಜು ನಿಗಮದಲ್ಲಿ ಅಕ್ಕಿಯ ಬಹಿರಂಗ ಹರಾಜು ನಿನ್ನೆ ಇಲಾಖೆಯ ಉಪನಿರ್ದೇಶಕ ದೇವರಾಜ್ ಹಾಗು ತಹಸಿಲ್ದಾರ್ ರೇಖಾ ಸಮ್ಮುಖದಲ್ಲಿ ನಡೆಯಿತು. ಹರಾಜಿನಲ್ಲಿ 67 ಜನ ಬಿಡ್ಡದಾರರು ಭಾಗವಹಿಸಿದ್ದರು. ಒಂದನೇ ಹರಾಜು 545.25 ಕ್ವಿಂಟಲ್ ಅಕ್ಕಿಯನ್ನು ಸಿಂಧನೂರಿನ ಶರಣಬಸವ ಅಂಡ್ ಕಂಪನಿ ಪ್ರತಿ ಕ್ವಿಂಟಲ್ ಗೆ 3425 ರೂ ನಂತೆ, ಎರಡನೇ ಹರಾಜಿನಲ್ಲಿನ 1634.20 ಕ್ವಿಂಟಲ್ ಅಕ್ಕಿಯನ್ನು ಸಿಂಧನೂರಿನ ಮಲ್ಲಿಕಾರ್ಜುನ್ ಅಂಡ್ ಕಂಪನಿ ಪ್ರತಿ ಕ್ವಿಂಟಲ್ ಗೆ 3330 ರೂ ನಂತೆ ಹರಾಜು ಪಡೆದವು. ಎಂದು ಆಹಾರ ಇಲಾಖೆಯ ಪ್ರಕಟಣೆ ತಿಳಿಸಿದೆ.

ಜಯನಗರ ಶಿವಮಂದಿರದಲ್ಲಿ ಅದ್ದೂರಿಯಾಗಿ ದಸರಾ ಆಚರಣೆ

ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕಲಬುರಗಿ:**

ವಿಜಯದಶಮಿ ಅಂಗವಾಗಿ ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ವತಿಯಿಂದ ವಾದ್ಯ ಮೇಳದೊಂದಿಗೆ ಮೆರವಣಿಗೆ ಮೂಲಕ ಬನ್ನಿ ಗಿಡಕ್ಕೆ ಪೂಜೆ ಸಲ್ಲಿಸಿ, ಬನ್ನಿ ಮುರಿಯುವ ಕಾರ್ಯಕ್ರಮ ನಡೆಯಿತು. ನಂತರ ಜಯನಗರ ಶಿವಮಂದಿರದಲ್ಲಿ ದಸರಾ ಹಬ್ಬದ ಮಹತ್ವ ಕುರಿತು ಟ್ರಸ್ಟ್ ಅಧ್ಯಕ್ಷ ಡಾ. ಲಿಂಗರಾಜ ಸಿರಗಾಪೂರ ಅವರು ಮಾತನಾಡಿ ನಾಡ ದೇವತೆ ಚಾಮುಂಡೇಶ್ವರಿ ಮಹಿಷಾಸುರನನ್ನು ಸಂಹಾರ ಮಾಡಿ ವಿಜಯಪಡೆದ ದಿನವಾದ ಇಂದು ಹಿಂದೂ ಧರ್ಮದ ದೊಡ್ಡ ಹಬ್ಬವಾಗಿದೆ ಎಂದು ಬಣ್ಣಿಸಿದರು. ಅದೇ ರೀತಿ ಶ್ರೀರಾಮನು ರಾವಣನನ್ನು ಜಯಿಸಿದ ದಿನವೂ ಆಗಿದೆ ಎಂದರು. ಮಹಾನಗರ ಪಾಲಿಕೆ ಸದಸ್ಯ ಉಮೇಶ ಶೆಟ್ಟಿ ಮಾತನಾಡಿ ಹಿಂದೂ ಧರ್ಮದಲ್ಲಿ ದಸರಾ ದೊಡ್ಡ ಹಬ್ಬವಾಗಿದೆ. ಇದು ವಿಜಯದ ಸಂಕೇತ ಎಂದರು. ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಕೆ.ಬಿ ಹಾಗೂ ಹಿರಿಯ ಸದಸ್ಯರಾದ ಎಂ.ಡಿ. ಮಠಪತಿ ಅವರು ಮಾತನಾಡಿ ಹಿಂದೂ ಧರ್ಮದ ಸಂಸ್ಕೃತಿಯ ಪ್ರತೀಕ ಇಂಥ ಹಬ್ಬಗಳ ಮಹತ್ವವನ್ನು ನಮ್ಮ ಯುವ ಪೀಳಿಗೆಗೆ ಪರಿಚಯಿಸುವ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ನೇರ ರಸ್ತೆ ನಿರ್ಮಿಸಲು ಒತ್ತಾಯ

• **ಉದಯವಾಹಿನಿ, ಬೀದರ್:**

ಉದಯವಾಹಿನಿ ಚಿತ್ರ

ಇಲ್ಲಿಯ ನ್ಯೂ ಆದರ್ಶ ಕಾಲೊನಿಯ ರೈಲ್ವೆ ಕೆಳಸೇತುವೆ (ಬಚ್ಚಾ ಲೇಔಟ್) ಮೂಲಕ ವಾಯುಪಡೆ ತರಬೇತಿ ಕೇಂದ್ರದ ಮಾರ್ಗವಾಗಿ ಬೀದರ್–ಉದಗಿರ ರಸ್ತೆ ವರೆಗೆ ನೇರ ಸಂಪರ್ಕ ರಸ್ತೆ ನಿರ್ಮಿಸಬೇಕು ಎಂದು ಬೀದರ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಒತ್ತಾಯಿಸಿದೆ. ಸಂಸ್ಥೆಯ ಅಧ್ಯಕ್ಷ ಬಿ.ಜಿ. ಶೆಟಕಾರ್ ಹಾಗೂ ಕಾರ್ಯದರ್ಶಿ ಡಾ. ವೀರೇಂದ್ರ ಶಾಸ್ತ್ರಿ ಅವರು ಈ ಕುರಿತು ಪ್ರಜಾ ಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತಾ ಅವರಿಗೆ ಪತ್ರ ಬರೆದಿದ್ದಾರೆ. ಸದ್ಯ ಇರುವ ಸಣ್ಣ ಸಣ್ಣ ತಿರುವುಗಳಿಂದ ಕೂಡಿದ ರಸ್ತೆ ಅಪಘಾತ ವಲಯವಾಗಿ ಮಾರ್ಪಟ್ಟಿದೆ. ನೇರ ರಸ್ತೆ ನಿರ್ಮಿಸಿದರೆ ನಗರದ ಪೂರ್ವ ಭಾಗದ ನಾಗರಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಹಾಗೂ ವಾಹನ ಸವಾರರಿಗೆ ಅನುಕೂಲವಾಗಲಿದೆ. ನಗರದ ಸಂಚಾರ ದಟ್ಟಣೆ ಕಡಿಮೆ ಆಗಿಸುವಲ್ಲಿಯೂ ಇದು ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದ್ದಾರೆ. ನೇರ ರಸ್ತೆಗೆ ಸಂಬಂಧಿಸಿದಂತೆ ಸಂಸ್ಥೆ 2014–15ನೇ ಸಾಲಿನಿಂದ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳಿಗೆ ಪತ್ರ ಬರೆಯುತ್ತ ಬಂದಿದೆ. ಈವರೆಗೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಕ್ರಮ ಮದ್ಯ ಮಾರಾಟದ ಹಾವಳಿ; ರಾಜ್ಯಪಾಲರಿಗೆ ಕಾನೂನು ವಿದ್ಯಾರ್ಥಿಯಿಂದ ದೂರು

• **ಉದಯವಾಹಿನಿ, ಯಾದಗಿರಿ:**

ಜಿಲ್ಲೆಯ ಸುರಪುರ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಮತ್ತು ಸಾಗಾಟವು ಮಿತಿಮೀರಿದ್ದು, ಇದರಿಂದ ಗ್ರಾಮಗಳ ನೆಮ್ಮದಿ ಹಾಳಗುತ್ತಿದೆ ಎಂದು ಆರೋಪಿಸಿ ಕಾನೂನು ವಿದ್ಯಾರ್ಥಿ ಪ್ರಶಾಂತ್ ಎಸ್. ದೊಡ್ಡಮನಿ ಅವರು ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರಿಗೆ ಅಧಿಕೃತವಾಗಿ ದೂರು ಸಲ್ಲಿಸಿದ್ದಾರೆ.

ಸುರಪುರ ತಾಲ್ಲೂಕಿನ ಕರಡಕಲ್, ಕರಡಕಲ್ ಕ್ಯಾಂಪ್, ನಗನೂರು ಹಾಗೂ ಕಿರದಳ್ಳಿ ಗ್ರಾಮಗಳಲ್ಲಿ ಅಕ್ರಮ ಮದ್ಯದ ಅಂಗಡಿಗಳು ಮತ್ತು ಮಾರಾಟಗಾರರ ಹಾವಳಿ ವಿಪರೀತವಾಗಿ ಹೆಚ್ಚಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಉದಯವಾಹಿನಿ ಚಿತ್ರ

ಪ್ರಮುಖ ಸಮಸ್ಯೆಗಳು ಮತ್ತು ಆತಂಕಗಳು: ಯುವ ಜನತೆಯ ಭವಿಷ್ಯ ನಾಶ: ಸಣ್ಣ ವಯಸ್ಸಿನಲ್ಲೇ ಯುವಕರು ಮತ್ತು ವಿದ್ಯಾರ್ಥಿಗಳು ಮದ್ಯದ ಚಟಕ್ಕೆ ಬಿದ್ದು ತಮ್ಮ ಅಮೂಲ್ಯವಾದ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ.

ಕೌಟುಂಬಿಕ ಹಿಂಸೆ ಮತ್ತು ಆರ್ಥಿಕ ಸಂಕಷ್ಟ: ಪ್ರತಿದಿನ ಕುಡಿದು ಬಂದು ಸಾರ್ವಜನಿಕರೊಂದಿಗೆ ಹಾಗೂ ಕುಟುಂಬದವರೊಂದಿಗೆ ಜಗಳವಾಡುವುದು, ಜೀವ ಬೆದರಿಕೆ ಹಾಕುವುದು ಸಾಮಾನ್ಯವಾಗಿದೆ. ಇದರಿಂದ ಮಹಿಳೆಯರು ಮತ್ತು ಮಕ್ಕಳು ತೀವ್ರ ಮಾನಸಿಕ ಹಿಂಸೆ ಹಾಗೂ ಕೌಟುಂಬಿಕ ದೌರ್ಜನ್ಯ ಎದುರಿಸುತ್ತಿದ್ದಾರೆ.

ಅನೇಕ ಕುಟುಂಬಗಳು ಸಾಲದ ಸುಳಿಗೆ ಸಿಲುಕಿ ಮನೆ, ಜಮೀನುಗಳನ್ನು ಕಳೆದುಕೊಳ್ಳುವ ದುಸ್ಥಿತಿ ನಿರ್ಮಾಣವಾಗಿದೆ.

ಪವಿತ್ರ ಸ್ಥಳಗಳ ಮೇಲೂ ಪರಿಣಾಮ: ಶಾಲೆಗಳ ಆವರಣ ಹಾಗೂ ದೇವಸ್ಥಾನಗಳ ಸುತ್ತಮುತ್ತಲೂ ಮದ್ಯದ ಚಟುವಟಿಕೆಗಳು ಹೆಚ್ಚಾಗಿರುವುದು ಸಾರ್ವಜನಿಕರಲ್ಲಿ ಆಕ್ರೋಶ ಮೂಡಿಸಿದೆ.

ಮನವಿಯ ಮುಖ್ಯಾಂಶಗಳು:

ಕರ್ನಾಟಕ ಅಬಕಾರಿ ಕಾಯ್ದೆ 1965ರ ವಿವಿಧ ಸೆಕ್ಷನ್‌ಗಳ ಸ್ಪಷ್ಟ ಉಲ್ಲಂಘನೆಯಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕಣ್ಣುಮುಚ್ಚಿ ಕುಳಿತಿದ್ದಾರೆ ಎಂದು ದೂರಿನಲ್ಲಿ ದೂರಲಾಗಿದೆ. ಕೂಡಲೇ ಈ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ಹಾಗೂ ಜವಾಬ್ದಾರಿಯುತ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ಅಕ್ರಮ ಮದ್ಯ ಮಾರಾಟಗಾರರಿಗೆ ಭಾರೀ ದಂಡ ಹಾಗೂ ಜೈಲು ಶಿಕ್ಷೆ ವಿಧಿಸಬೇಕು ಎಂದು ಗ್ರಾಮದ ಮಹಿಳೆಯರ ಪರವಾಗಿ ಒತ್ತಾಯಿಸಲಾಗಿದೆ.

ದೇವಳದ ಅಭಿವೃದ್ಧಿ ಕೆಲಸ ಇಲ್ಲದವರ ರಾಜಕೀಯ ಟೀಕೆಗಳಿಗೆ ಕಿಮ್ಮತ್ತಿಲ್ಲ

ದೇವಸ್ಥಾನದ ಗ್ರಾನೈಟ್ ವ್ಯವಸ್ಥೆ ಅದಕ್ಕಾಗಿ ಬೆಂಗಳೂರಿನಲ್ಲಿ ಸಭೆಯನ್ನೂ ಮಾಡಲಿದ್ದೇವೆ. 45 ಲಕ್ಷ ರೂ.ವೆಚ್ಚದಲ್ಲಿ ಶಾಶ್ವತ ಲೈಟಿಂಗ್ ವ್ಯವಸ್ಥೆಯೂ ಆಗಲಿದೆ

• **ಉದಯವಾಹಿನಿ, ಪುತ್ತೂರು:**

ಪುತ್ತೂರು ಮಹಾಲಿಂಗೇಶ್ವರ ದೇವಳದ ಜೀರ್ಣೋದ್ಧಾರ ನಡೆದರೆ ನಮಗೆ ಉಳಿಗಾಲ ಇಲ್ಲ ಎಂಬ ಭಯದಿಂದ ಕೆಲವರು ತಮ್ಮ ರಾಜಕೀಯ ಲಾಲಸೆಗಾಗಿ ವಿನಕಾರಣ ಟೀಕೆಗಳನ್ನು ಮಾಡುತ್ತಿದ್ದಾರೆ. ಅಂತ ಟೀಕೆಗಳಿಗೆ ಯಾವುದೇ ಮೌಲ್ಯ ನೀಡುವುದಿಲ್ಲ. ದೇವರ ಹಣದಲ್ಲಿ ಒಂದು ಪೈಸೆಯ ಲೋಪ ಆಗದಂತೆ ದೇವಳದ ಅಭಿವೃದ್ಧಿ ಕಾರ್ಯ ಮಾಡುತ್ತೇವೆ ಎಂದು ಶಾಸಕ ಅಶೋಕ್ ರೈ ಹೇಳಿದರು.

ಅವರು ಪುತ್ತೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿ, ದೇವಸ್ಥಾನದ ಅಭಿವೃದ್ಧಿ ಕಾರ್ಯ ಸುಸೂತ್ರವಾಗಿ ನಡೆಯುತ್ತದೆ.

1 : ಯಾವುದೇ ಲೋಪದೋಷ ಕಂಡುಬಂದಿಲ್ಲ
2 : ರೂ.3.50 ವೆಚ್ಚದಲ್ಲಿ ಕೆರೆಯ ಕಾಮಗಾರಿ
3 : ನಾವು ಯಾವುದೇ ಲೆಕ್ಕಪತ್ರವನ್ನು ಕೇಳಿಲ್ಲ

ಆದರೆ ಕೆಲವರಿಗೆ ನಮ್ಮ ಕುತಂತ್ರಗಳು ನಡೆಯಲಾರವು ಎಂಬ ಕಾರಣಕ್ಕಾಗಿ ಇಂತಹ ಕೆಲಸ ಇಲ್ಲದವರು ಮಾಡುವ ರಾಜಕೀಯಕ್ಕೆ ಯಾವುದೇ ಕಿಮ್ಮತ್ತು ಇಲ್ಲ. ಹಣಕಾಸಿನ ಆರೋಪಗಳಿಗೆ ಸಂಬಂಧಿಸಿ ಮುಜರಾಯಿ ಇಲಾಖೆಯ ಅಧಿಕಾರಿಗಳು ದೂರು

ಉದಯವಾಹಿನಿ ಚಿತ್ರ

ದಾರರಿಂದ ಹೇಳಿಕೆ ಪಡೆದುಕೊಂಡಿದ್ದಾರೆ.

ಅಂತಹ ಯಾವುದೇ ಲೋಪದೋಷ ಕಂಡುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬಗ್ಗೆ ಸ್ಪಷ್ಟವಾದ ವರದಿಯನ್ನೂ ಮುಂದೆ ನೀಡಲಿದ್ದಾರೆ ಎಂದರು. ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಕಾಣಿಕೆಯ ಹಣವನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಅಭಿವೃದ್ಧಿಗೆ ವಾಗ್ದಾನ ನೀಡಿದ ಭಕ್ತರ ಹಣ ಹಾಗೂ ಸರ್ಕಾರದ ಅನುದಾನವನ್ನು ಬಳಸಿಕೊಂಡು ಅಭಿವೃದ್ಧಿ

ಪುತ್ತೂರು ನಗರದ ಸಮಗ್ರ ಒಳಚರಂಡಿ ವ್ಯವಸ್ಥೆಗಾಗಿ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಅದರ ಎಸ್ ಟಿಪಿ ಘಟಕ ಬೆದ್ರಾಳದಲ್ಲಿ ನಿಗದಿ ಪಡಿಸಿದ ಜಾಗದಲ್ಲಿ ಅನುಷ್ಠಾನಗೊಳ್ಳಲಿದೆ. ತಾಪಂ–ಜಿಪಂ ಚುನಾವಣೆಗೆ ಮೊದಲು ಪುತ್ತೂರು ಮೆಡಿಕಲ್ ಕಾಲೇಜಿಗೆ ಶಿಲಾನ್ಯಾಸ ನಡೆಸುವ ಯೋಚನೆ ಇದೆ ಎಂದರು. –ಶಾಸಕ ಅಶೋಕ್ ರೈ

ಕಾರ್ಯ ನಡೆಯಲಿದೆ.

ಅಭಿವೃದ್ಧಿ ಕಾರ್ಯಗಳು ಹಿಂದೆಯೂ ನಡೆದಿದ್ದು, ಅದರ ಲೆಕ್ಕಪತ್ರ ಕೊಟ್ಟಿದ್ದಾರಾ. ಆದರೆ ನಾವು ಯಾವುದೇ ಲೆಕ್ಕಪತ್ರವನ್ನು ಕೇಳಿಲ್ಲ. ಜೊತೆಗೆ ಭ್ರಷ್ಟಾಚಾರ ಆಗಿದೆ ಆರೋಪವನ್ನೂ ನಾವು ಮಾಡುತ್ತಿಲ್ಲ. ರಸ್ತೆ ವಿಚಾರದ ಬಗ್ಗೆ ಕೆಲವರು ಇಲ್ಲದ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ದೇವಸ್ಥಾನದ ಸುಪರ್ದಿಯಲ್ಲೇ ರಸ್ತೆ ನಿರ್ಮಾಣವಾಗುತ್ತಿದ್ದು, ಅದಕ್ಕಾಗಿ 30 ಸೆಂಟ್ಸ್ ಜಾಗ ಬಳಕೆಯಾಗುತ್ತದೆ.

ದೇವಸ್ಥಾನದ ಗ್ರಾನೈಟ್ ವ್ಯವಸ್ಥೆಗೆ 4 ಕೋ.ರೂ.ಬೇಕಿದ್ದು, ಅದಕ್ಕಾಗಿ ಬೆಂಗಳೂರಿನಲ್ಲಿ ಸಭೆಯನ್ನೂ ಮಾಡಲಿದ್ದೇವೆ. 45 ಲಕ್ಷ ರೂ.ವೆಚ್ಚದಲ್ಲಿ ಶಾಶ್ವತ ಲೈಟಿಂಗ್ ವ್ಯವಸ್ಥೆಯೂ ಆಗಲಿದೆ. ನೆಲ್ಲಿಕಟ್ಟೆಯಲ್ಲಿ 20 ಕೋ.ರೂ.ವೆಚ್ಚದಲ್ಲಿ ದೇವಸ್ಥಾನದ ವಾಣಿಜ್ಯ

15 ದಿನಗಳಲ್ಲಿ ಅದು ಆರಂಭ

ರಸ್ತೆ ದೇವಸ್ಥಾನದ ಹೆಸರಲ್ಲೇ ಇರುತ್ತದೆ. ರಸ್ತೆಗೆ ಮೊದಲ ನಗರಸಭೆಯ ಅನುದಾನದಲ್ಲಿ ಒಳಚರಂಡಿಯ ಪೈಪ್‌ಲೈನ್ ಕಾಮಗಾರಿ ನಡೆಯಬೇಕಿರುವುದರಿಂದ ಕಾಮಗಾರಿ ಕೊಂಚ ತಡವಾಗಿದೆ. ರೂ.3.50 ಕೋ ವೆಚ್ಚದಲ್ಲಿ ಕೆರೆಯ ಕಾಮಗಾರಿ ನಡೆಯಲಿದ್ದು, 15 ದಿನಗಳಲ್ಲಿ ಅದು ಆರಂಭಗೊಳ್ಳಲಿದೆ.

ಸಂಕೀರ್ಣ, ವಸತಿ ಗೃಹ ನಿರ್ಮಾಣವಾಗಲಿದ್ದು, ಅದಕ್ಕೆ 10 ಕೋ.ರೂ. ಶಾಸಕರ ಅನುದಾನ, 5 ಕೋ.ರೂ.ಸಿಎಂ ವಿಶೇಷ ಅನುದಾನ ಬಳಕೆ ಮಾಡುತ್ತೇವೆ. 15 ಕೋ.ರೂ.ವೆಚ್ಚದಲ್ಲಿ ಸಭಾಭವನ ಕೂಡ ನಿರ್ಮಾಣವಾಗಲಿದೆ.

50–100 ಕೋ.ರೂ.ನಷ್ಟು ಮೌಲ್ಯದ ದೇವಸ್ಥಾನದ ಆಸ್ತಿಯನ್ನು ಕೆಲವರು ಒಳಗೆ ಹಾಕಿದ್ದು, ಈಗಾಗಲೇ 40 ಕೋ.ರೂ.ಮೌಲ್ಯದ ಜಾಗಗಳನ್ನು ಗುರುತು ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಎಲ್ಲಾ ಜಾಗಗಳನ್ನು ಸ್ವಾಧೀನ ಪಡೆಸಿಕೊಳ್ಳುವ ಕಾರ್ಯ ಮಾಡುತ್ತೇವೆ. ದೇವಸ್ಥಾನದ ಕುರಿತು ಕೆಲವರು ದೂರು ನೀಡುವ ಕಾರ್ಯ ಮಾಡಿದ್ದು, ಇಲಾಖೆಯ ನಿಯಮದ ಪ್ರಕಾರ ಹಿಂದುಯೇತರರಿಗೆ ದೂರು ನೀಡುವ ಅವಕಾಶವೇ ಇಲ್ಲ.

ಪೆನ್‌ಡ್ರೈವ್ ತೋರಿಸಿ ಸಿದ್ದುಗೆ ಬೆದರಿಸಿದ್ದು ಯಾರು..?: ಜೋಶಿ ಕಿಡಿ

• **ಉದಯವಾಹಿನಿ, ಹುಬ್ಬಳ್ಳಿ:**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತಹ ಹಿರಿಯ ನಾಯಕನಿಗೆ ಪೆನ್‌ಡ್ರೈವ್ ತೋರಿಸಿ ಬೆದರಿಸಿರುವುದರ ಹಿಂದೆ ಯಾರಿದ್ದಾರೆ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಸ್ಪಷ್ಟಪಡಿಸಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಶುಕ್ರವಾರ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೊಂದಿಗೆ ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ, ಅವರಂತಹ ಹಿರಿಯ ನಾಯಕನನ್ನು ಪೆನ್‌ಡ್ರೈವ್ ಮೂಲಕ ಬೆದರಿಸುವ ರಾಜಕೀಯ ಬೆಳವಣಿಗೆ ಖಂಡನೀಯ ಎಂದು ಕಿಡಿಕಾರಿದರು. ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವಿರುವ ಮನೋಭಾವ ಕಾಂಗ್ರೆಸ್‌ನಲ್ಲಿ ಕಾಣಿಸುತ್ತಿದೆ.

ರಾಜಕೀಯದಲ್ಲಿ ಮೌಲ್ಯಗಳು ಕುಸಿಯುತ್ತಿರುವುದು ಆತಂಕಕಾರಿ. ಸಿದ್ದರಾಮಯ್ಯ ಅವರ ವಿಚಾರದಲ್ಲಿ ಇಂತಹ ಬೆಳವಣಿಗೆಗೆ ಕಾರಣರಾದವರು ಯಾರು ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಬಹಿರಂಗಪಡಿಸಬೇಕು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ನಡೆಯುತ್ತಿರುವ ಹೋರಾಟದ ಹಿಂದೆ ಅಂತರರಾಷ್ಟ್ರೀಯ

ಉದಯವಾಹಿನಿ ಚಿತ್ರ

ಸಂಘಟನೆಗಳ ಕೈವಾಡವಿದೆ ಎಂಬ ವಿಚಾರವೂ ಚರ್ಚೆಯಲ್ಲಿದೆ ಎಂದು ಹೇಳಿದರು. ಫ್ರಾನ್ಸ್ ಮತ್ತು ಯುರೋಪ್‌ನಲ್ಲಿಯೂ ಎಸ್‌ಐಆರ್‌ಗೆ ಸಂಬಂಧಿಸಿದ ಹೋರಾಟಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಸಂಘಟನೆಯ ಪಾತ್ರದ ಕುರಿತು ಅಮೆರಿಕದ ಸುದ್ದಿ ವಾಹಿನಿಯೊಂದು ವರದಿ ಮಾಡಿದೆ ಎಂದು ತಿಳಿಸಿದರು. ಇದೇ ವೇಳೆ ಅಧಿಕಾರದಲ್ಲಿ ಮುಂದುವರಿಯುವುದೊಂದೇ ಗುರಿಯಾಗಿಸಿಕೊಂಡು ದೇಶದ ಹಿತಾಸಕ್ತಿಯನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿದ ಅವರು, ದೇಶದಲ್ಲಿ ಅಭದ್ರತೆಯ ವಾತಾವರಣ ನಿರ್ಮಾಣವಾಗುವಂತಹ ಬೆಳವಣಿಗೆಗಳು ನಡೆಯುತ್ತಿವೆ. ಅರಾಜಕತೆ ಸೃಷ್ಟಿಸಲು ಹುನ್ನಾರ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಚಂದ್ರಂಪಳ್ಳಿ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲು ರೈತರ ಮನವಿ

• **ಉದಯವಾಹಿನಿ, ಕಲಬುರಗಿ:**

ಚಂದ್ರಂಪಳ್ಳಿ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರನ್ನು ಎಡ ಮತ್ತು ಬಲದಂಡೆ ಕಾಲುವೆಗಳ ಮೂಲಕ ಸುಮಾರು ಒಂದು ತಿಂಗಳ ಕಾಲ ಹರಿಸಿ ರೈತರ ಬೆಳೆಗಳನ್ನು ಉಳಿಸುವುದರ ಜೊತೆಗೆ ಜಾನುವಾರು, ಪಶು–ಪಕ್ಷಿಗಳು ಹಾಗೂ ವನ್ಯಜೀವಿಗಳಿಗೆ ನೀರಿನ ಸೌಲಭ್ಯ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ದೀಪಕನಾಗ್ ಎಸ್. ಪುಣ್ಯಶೆಟ್ಟಿ ಅವರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯವು ಪ್ರಸಕ್ತ ಮಳೆಗಾಲದಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಶೇ 80ರಿಂದ 90ರಷ್ಟು ಭರ್ತಿಯಾಗಿದೆ. ಜಲಾಶಯದಲ್ಲಿ ಸಾಕಷ್ಟು ಪ್ರಮಾಣದ ನೀರು ಸಂಗ್ರಹವಾಗಿದ್ದರೂ, ಜಲಾಶಯದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಳೆದ ಎರಡು–ಮೂರು ತಿಂಗಳಿಂದ ಸಮರ್ಪಕ ಮಳೆಯಾಗದ ಕಾರಣ ರೈತರ ಬೆಳೆಗಳು ಒಣಗುವ ಹಂತ ತಲುಪಿವೆ. ಇದರಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಐನೋಳ್ಳಿ, ಚಂದ್ರಂಪಳ್ಳಿ, ಕೊಳ್ಳೂರು, ಫತ್ತೇಪುರ,



ಉದಯವಾಹಿನಿ ಚಿತ್ರ

ದೇಗುಲ್ಮಡಿ, ಪೊಲಕಪಳ್ಳಿ, ಚಿಂಚೋಳಿ ಹಾಗೂ ಪಟಪಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ಮಳೆಯ ಕೊರತೆಯಿಂದ ಬೆಳೆಗಳನ್ನು ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಜಲಾಶಯದ ಎಡ ಮತ್ತು ಬಲದಂಡೆ ಕಾಲುವೆಗಳ ಮೂಲಕ ನಿಯಮಾನುಸಾರ ನೀರು ಹರಿಸಿದರೆ ಬೆಳೆಗಳಿಗೆ ಅಗತ್ಯ ನೀರು ದೊರೆಯಲಿದ್ದು, ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಅನುಕೂಲವಾಗಲಿದೆ. ಇದರಿಂದ ರೈತರಿಗೆ ಉತ್ತಮ ಇಳುವರಿ ಪಡೆಯಲು ಸಾಧ್ಯವಾಗುವುದರ ಜೊತೆಗೆ ಆರ್ಥಿಕ ಸಂಕಷ್ಟವೂ ಕಡಿಮೆಯಾಗಲಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

ಕಿಷ್ಕಿಂದ ವಿಶ್ವವಿದ್ಯಾಲಯದ ದ್ವಿತೀಯ ಘಟಿಕೋತ್ಸವ

• **ಉದಯವಾಹಿನಿ, ಬಳ್ಳಾರಿ, :**

ಜಿಲ್ಲೆಯ ಕಿಷ್ಕಿಂದ ವಿಶ್ವವಿದ್ಯಾಲಯದ ಎರಡನೇಯ ಘಟಿಕೋತ್ಸವ ಬೆಳಿಗ್ಗೆ 11 ಕ್ಕೆ ವಿವಿಯ ಆವರಣದಲ್ಲಿ ಆಯೋಜಿಸಿದೆ. ಬಿಸಿಎ, ಎಂಬಿಎ, ಎಂಸಿಎ, ಮತ್ತು ಎಂಟೆಕ್ ಕೋರ್ಸ್ಗಳ ವಿದ್ಯಾರ್ಥಿಗಳ ಪದವಿ ಪ್ರದಾನ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹಾಗೂ ಙ್ಯಾಂಕ್ ವಿಜೇತಕರಿಗೆ ಪದಕ ಪ್ರದಾನ ಮಾಡಲಿದೆ.

ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ, ಮಾಜಿ ಸಚಿವ ಬಿ.ಆರ್. ಯಾವಗಲ್ ಭಾಗವಹಿಸಿಲಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ), ಟೆಲಿಮೆಟ್ರಿ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್ವರ್ಕ್‌ನಲ್ಲಿ ಹಿರಿಯ ವಿಜ್ಞಾನಿ ಹಾಗೂ ಇಂಜಿನಿಯರ್ ರೂಪಾ ಎಂ.ವಿ. ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಉದಯವಾಹಿನಿ ಚಿತ್ರ

ತಮ್ಮ ಕ್ಯು–ಸ್ಪೈಡರ್ಸ್ ಮತ್ತು ಜೆ–ಸ್ಪೈಡರ್ಸ್ ಸಂಸ್ಥೆಯ ಮೂಲಕ ಸಹಸ್ರಾರು ಯುವಕರಿಗೆ ಆಧುನಿಕ ತರಬೇತಿ ಮತ್ತು ಕೌಶಲ್ಯಗಳನ್ನು ನೀಡುವ ಮೂಲಕ ಯುವಕರಿಗೆ ಉದ್ಯೋಗ ಕಲ್ಪಿಸಿ, ಸಮಾಜದ ಅಭಿವೃದ್ಧಿಗೆ ಕಾರಣರಾಗಿರುವ ಉದ್ಯಮಿ, ತಂತ್ರಜ್ಞಾನದ ರೂವಾರಿ ಗಿರೀಶ್ ರಾಮಣ್ಣ ಇವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಿದೆ.

ಬಿಸಿಎ ಪದವಿಯ ವಿಭಾಗದಲ್ಲಿ, ಶೃತಿ ಪ್ರಥಮ ಙ್ಯಾಂಕ್ ಎಂ. ಲತ ದ್ವಿತೀಯ ಙ್ಯಾಂಕ್ ಪಡೆದರೆ. ಎಂಬಿಎ ವಿಭಾಗದಲ್ಲಿ, . ಶ್ವೇತಾ ಜಿ ಪ್ರಥಮ ಙ್ಯಾಂಕ್, ಮರಾಠಿ ಸಾಹಿತ್ಯ ದ್ವಿತೀಯ ರ್ಯಾಂಕ್, ಎಂಸಿಎ ವಿಭಾಗದಲ್ಲಿ ಆರ್.ಎಂ. ಸುಹಾನಾ ಸಫ್ರೀನ್ ಪ್ರಥಮ ಙ್ಯಾಂಕ್, ಪೆದ್ದದೇವರ ನಜ್ಜೀನ್ ದ್ವಿತೀಯ ಙ್ಯಾಂಕ್. ಎಂಟೆಕ್ ವಿಭಾಗದಲ್ಲಿ, ಪಿ. ಸಹನಾ ಪ್ರಸಾದ್ ಪ್ರಥಮ ಙ್ಯಾಂಕ್, ಎಂ. ರಾಘವೇಂದ್ರ ದ್ವಿತೀಯ ಙ್ಯಾಂಕ್ ಪಡೆಯಲಿದ್ದಾರೆ. ಬಿಸಿಎ ವಿಭಾಗದಲ್ಲಿ 44, ಎಂಬಿಎ ವಿಭಾಗದಲ್ಲಿ 51. ಎಂಸಿಎ ವಿಭಾಗದಲ್ಲಿ 42, ಎಂಟೆಕ್ ವಿಭಾಗದಲ್ಲಿ 18, ಒಟ್ಟಾರೆಯಾಗಿ 155 ವಿದ್ಯಾರ್ಥಿಗಳು ಪದವಿಯನ್ನು ಸ್ವೀಕರಿಸಲಿದ್ದಾರೆ.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪಟಾಕಿ ಸಿಡಿಮದ್ದು ಮಾರಾಟಗಾರರ ಸಭೆ

• **ಉದಯವಾಹಿನಿ, ಬೀದರ, :**

ದೀಪಾವಳಿ ಹಬ್ಬದ ನಿಮಿತ್ತ ಜಿಲ್ಲೆಯಲ್ಲಿ ಪಟಾಕಿ ಮಾರಾಟಗಾರರ ಮಳಿಗೆಗಳ ಸ್ಥಾಪನೆ, ಸ್ಥಳ ಪರಿಶೀಲನೆ ಹಾಗೂ ಮುನ್ನೆಚ್ಚರಿಕೆ ಕ್ರಮ ಕುರಿತಂತೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರ ಅಧ್ಯಕ್ಷತೆಯಲ್ಲಿ ಮಾರಾಟಗಾರರ ಸಭೆ ಜರುಗಿತು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಮಾತನಾಡಿ ಪಾಟಾಕಿ ಮಾರಾಟಗಾರರು ಕಡ್ಡಾಯವಾಗಿಇ ಪರವಾನಿಗೆ ನೀಡಿದ ಸ್ಥಳದಲ್ಲಿ ಮಾತ್ರ ತಾತ್ಕಾಲಿಕ ಪಟಾಕಿ ಮಾರಾಟ ಮಳಿಗೆ ಸ್ಥಾಪಿಸತಕ್ಕದ್ದು, ಸುರಕ್ಷತಾ ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸತಕ್ಕದ್ದು, ಪರವಾನಿಗೆ ಇಲ್ಲದೇ ಬೇರೆ ಅಂಗಡಿಗಳಲ್ಲಿ ಪಟಾಕಿ ಮಾರಾಟ ಹಾಗೂ ಶೇಖರಣೆ ಮಾಡತಕ್ಕದ್ದಲ್ಲ ಎಂದು ತಿಳಿಸಿದರು.

ಕಿರಾಣಿ ಅಂಗಡಿಗಳು ಮತ್ತು ಇನ್ನಿತರೆ ಸ್ಥಳಗಳಲ್ಲಿ ಪರವಾನಿಗೆ ಇಲ್ಲದೇ ಪಟಾಕಿ ದಸ್ತಾನು ಮಾಡುವುದನ್ನು ನಿಷೇಧಿಸಲಾಗಿದೆ. ಯಾವುದೇ ಅನಾಹುತಗಳು ಸಂಭವಿಸದಂತೆ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

70 ಸಾಧಕರಿಗೆ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ

• **ಉದಯವಾಹಿನಿ, ಬೀದರ್:**

ಉದಯವಾಹಿನಿ ಚಿತ್ರ

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸಾಧಕರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿರುವ ಕಲ್ಯಾಣ ಕರ್ನಾಟಕ ಉತ್ಸವ ಮತ್ತು ಕಲಾ ಸಂಸ್ಕೃತಿ ಸಂಘವು, ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲು ಮುಂದಾಗಿದೆ ಎಂದು ಸಂಘದ ಅಧ್ಯಕ್ಷ ಪ್ರವಿಣಕುಮಾರ ಬಾಡಿಯಾಳ ತಿಳಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಲ್ಯಾಣ ಕರ್ನಾಟಕ ಭಾಗದಲ್ಲಿ ಅನೇಕ ಪ್ರತಿಭಾವಂತ ಕಲಾವಿದರು, ಸಾಹಿತಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿದ್ದಾರೆ. ಆದರೆ, ಅವರ ಸಾಧನೆಗೆ ಸೂಕ್ತ ಮನ್ನಣೆ ದೊರೆಯುತ್ತಿಲ್ಲ. ಅಂತಹ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಸಂಘದ ವತಿಯಿಂದ ಪ್ರಥಮ ಬಾರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು. ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ 60ರಿಂದ 70 ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಗುರಿ ಹೊಂದಲಾಗಿದೆ. ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಶಿಕ್ಷಣ, ಕೃಷಿ, ಆರೋಗ್ಯ, ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರನ್ನು ಗುರುತಿಸಿ ಗೌರವಿಸಲಾಗುವುದು ಎಂದು ಹೇಳಿದರು. 'ಪ್ರಶಸ್ತಿಗೆ ಅರ್ಹ ಸಾಧಕರನ್ನು ಆಯ್ಕೆ ಮಾಡಲು ಆರರಿಂದ ಏಳು ಸದಸ್ಯರ ವಿಶೇಷ ಸಮಿತಿ ರಚಿಸಲಾಗಿದೆ. ಸಾಧಕರ ಸೇವೆ, ಸಾಧನೆಯ ವಿವರ ಹಾಗೂ ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗುವುದು.

ನೌಕರರಿಗೆ ಕಿರುಕುಳ ನೀಡದಂತೆ ಕ್ರಮ ಕೈಗೊಳ್ಳಲು ಒತ್ತಾಯ

ತಾಲ್ಲೂಕಿನ ಸಮಾಜ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡುತ್ತಿಲ್ಲ

• **ಉದಯವಾಹಿನಿ, ಬೀದರ್:**

ಔರಾದ ತಾಲ್ಲೂಕಿನ ಸಮಾಜ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೀಕ್ಷಕರು ಹಾಗೂ ದಿನಗೂಲಿ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ದಿನಗೂಲಿ ವೇತನ ನೀಡಬೇಕು ಮತ್ತು ನೌಕರರಿಗೆ ಕಿರುಕುಳ ನೀಡುತ್ತಿರುವ ಆರೋಪದ

1 : ಬಾಕಿ ಇರುವ ವೇತನವನ್ನು ಪಾವತಿಸಬೇಕು
2 : ತಗಲುವ ವೆಚ್ಚವನ್ನೂ ಪಾವತಿಸುತ್ತಿಲ್ಲ
3 : ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು

ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ವಿವಿಧ ಇಲಾಖೆಗಳ ದಿನಗೂಲಿ ಮತ್ತು ಹೊರಗುತ್ತಿಗೆ ನೌಕರರ ಸಂಘದ ಬೀದರ್ ಜಿಲ್ಲಾ ಘಟಕ ಆಗ್ರಹಿಸಿದೆ. ಈ ಕುರಿತು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮೊಹಮ್ಮದ್ ಆಯುಬ್ ಖಾನ್ ಅವರ ನೇತೃತ್ವದಲ್ಲಿ ಅ. 22ರಂದು ಸಮಾಜ ಅರಣ್ಯ ಇಲಾಖೆಯ ಬೀದರ್ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಉದಯವಾಹಿನಿ ಚಿತ್ರ

ಔರಾದ ತಾಲ್ಲೂಕಿನ ಸಮಾಜ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡುತ್ತಿಲ್ಲ ಎಂದು ನೌಕರರು ದೂರಿದ್ದಾರೆ. ಸರ್ಕಾರ ನಿಗದಿಪಡಿಸಿದ ವೇತನ ನೀಡುವಂತೆ ಕೇಳಿದಾಗ ಸಂಬಂಧಪಟ್ಟ ಆರ್‌ಎಫ್‌ಒ ಅವರಿಂದ ಕಿರುಕುಳ ಎದುರಿಸಬೇಕಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ ಎಂದು ಸಂಘದ ಪದಾಧಿಕಾರಿಗಳು ಮನವಿಯಲ್ಲಿ ತಿಳಿಸಿದ್ದಾರೆ.

ಇದಲ್ಲದೆ, ಹುಲ್ಲು ಕತ್ತರಿಸುವುದು ಸೇರಿದಂತೆ ವಿವಿಧ ಹೆಚ್ಚುವರಿ ಕೆಲಸಗಳನ್ನು ನೌಕರರಿಂದ ಮಾಡಿಸಲಾಗುತ್ತಿದ್ದು,

ಸರ್ಕಾರದ ನಿಯಮದಂತೆ ನ್ಯಾಯಯುತ ವೇತನ ಕೇಳುವುದು ನೌಕರರ ಹಕ್ಕಾಗಿದೆ. ಆದ್ದರಿಂದ ನೌಕರರಿಗೆ ಗೌರವಯುತ ಕೆಲಸದ ವಾತಾವರಣ ಕಲ್ಪಿಸಿ, ಕನಿಷ್ಠ ವೇತನ ನೀಡುವ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದೆ. –ಸಂಘ

ಆ ಕೆಲಸಗಳಿಗೆ ತಗಲುವ ವೆಚ್ಚವನ್ನೂ ಪಾವತಿಸುತ್ತಿಲ್ಲ ಎಂದು ಆರೋಪಿಸಿದ್ದಾರೆ.

ಈಗಾಗಲೇ ಕಡಿಮೆ ವೇತನದಲ್ಲಿ ದುಡಿಯುತ್ತಿರುವ ನೌಕರರು ಇದರಿಂದ ತೀವ್ರ ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ. ಔರಾದ ತಾಲ್ಲೂಕಿನ ಸಮಾಜ ಅರಣ್ಯ ಇಲಾಖೆಯ ವೀಕ್ಷಕರು ಹಾಗೂ ದಿನಗೂಲಿ ನೌಕರರಿಗೆ ಬಾಕಿ ಇರುವ ವೇತನವನ್ನು ಪಾವತಿಸಬೇಕು. ಹೆಚ್ಚುವರಿ ಕೆಲಸಗಳಿಗೆ ನಿಯಮಾನುಸಾರ ವೆಚ್ಚ ಭರಿಸಬೇಕು. ನೌಕರರಿಗೆ ಕಿರುಕುಳ ನೀಡುತ್ತಿರುವ ಆರೋಪದ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು.

ನೌಕರರು ನ್ಯಾಯಯುತ ಬೇಡಿಕೆಗಳನ್ನು ಮಂಡಿಸಿದ

ಅಲ್ಲದೆ, ನೌಕರರಿಗೆ ಬರಬೇಕಾದ ಕನಿಷ್ಠ ದಿನಗೂಲಿ ವೇತನ, ಬಾಕಿ ಮೊತ್ತ ಹಾಗೂ ಹೆಚ್ಚುವರಿ ಕೆಲಸಗಳ ವೆಚ್ಚವನ್ನು ಪರಿಶೀಲಿಸಿ, ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಂಘದ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಕಾರಣಕ್ಕೆ ಯಾವುದೇ ಪ್ರತೀಕಾರದ ಕ್ರಮ ಕೈಗೊಳ್ಳದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಬಡ ದಿನಗೂಲಿ ನೌಕರರ ಜೀವನೋಪಾಯವನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಕೂಡಲೇ ಸ್ಪಂದಿಸಿ ನ್ಯಾಯ ಒದಗಿಸಬೇಕು ಎಂದು ಸಂಘದ ಅಧ್ಯಕ್ಷ ಮೊಹಮ್ಮದ್ ಆಯುಬ್ ಖಾನ್ ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಔರಾದ ತಾಲ್ಲೂಕಿನ ಅಧ್ಯಕ್ಷರಾದ ಶಶಿರಾವ ಜಾಧವ, ಸುರೇಶ ಜಾಧವ, ಶಿವಾಜಿ ಕುಂಬಾರ, ರಾಜಕುಮಾರ ವಲ್ಲೇಪುರ, ರಾಜಕುಮಾರ ನರ್ಸಗೊಂಡ, ತುಳಸಿರಾಮ ಬೊರ್ಗಿ, ಸಂತೋಷ ತೋರಣಾ, ಮಸ್ತಾನ ಖದಗಾಂವ ಸೇರಿದಂತೆ ಔರಾದ ಗ್ರಾಮಸ್ಥರು ಉಪಸ್ಥಿತರಿದ್ದರು.